18 July 2026 Saturday SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಜೀವನದಲ್ಲಿ ಎಲ್ಲ ಆಸೆಗಳು ಈಡೇರುವುದಿಲ್ಲ, ಒಂದೊಂದು ನಿರಾಸೆಗಳು ಪಾಠ ಕಲಿಸಲು ಬಂದಿರುತ್ತವೆ!

-ಸ್ನೇಹಾ ಆನಂದ್

info.varthaman@gmail.com



ಚಾಮುಂಡಿ ದೇವಿಗೆ ನಿಂಬೆಹಣ್ಣಿನ ಆರತಿ ಬೆಳಗಿದ ಮಹಿಳೆಯರು ಪುಟ ಸಂ. 2



ವಾಟಾಳ್ ನಾಗರಾಜ್‌ರಿಂದ ಖಾಲಿ ಬಿಂದಿಗೆಗಳೊಂದಿಗೆ ಪ್ರತಿಭಟನೆ ಪುಟ ಸಂ. 3



ಸಿಮ್ಸ್ : ಮೆದುಳು ಆರೋಗ್ಯ ಕೇಂದ್ರದಲ್ಲಿ ಭೌತಚಿಕಿತ್ಸೆ ಸಲಕರಣೆ ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 229 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

# ಚಾಮುಂಡಿ ಬೆಟ್ಟಕ್ಕೆ ಭಕ್ತ ಸಾಗರ

## ಚಾಮುಂಡೇಶ್ವರಿಗೆ ನಾಗಲಕ್ಷ್ಮಿ ಅಲಂಕಾರ | ಲಕ್ಷಾಂತರ ಭಕ್ತರಿಂದ ತಾಯಿ ದರ್ಶನ

**ಮೈಸೂರು:** ಆಷಾಢ ಮಾಸದ ಮೊದಲ ಶುಕ್ರವಾರ ಲಕ್ಷಾಂತರ ಭಕ್ತರು ಶ್ರೀ ಚಾಮುಂಡೇಶ್ವರಿ ದರ್ಶನಕ್ಕಾಗಿ ಚಾಮುಂಡಿ ಬೆಟ್ಟಕ್ಕೆ ಆಗಮಿಸಿದ್ದರು. ಲಕ್ಷ್ಮಿ ಅಲಂಕಾರದಿಂದ ಶೋಭಿಸುತ್ತಿದ್ದ ಚಾಮುಂಡೇಶ್ವರಿ ದೇವಿ ದರ್ಶನ ಪಡೆದು ಪುನೀತರಾದರು.


ಚಾಮುಂಡಿ ಬೆಟ್ಟದ ಪಾದದಿಂದ ಮುಂಜಾನೆ 5 ರಿಂದ ಬೆಟ್ಟಕ್ಕೆ ಕಾಲ್ನಡಿಗೆಯ ಮೂಲಕ ತೆರಳಲು ಅವಕಾಶ ನೀಡುತ್ತೇವೆ ಎಂದು ಪೊಲೀಸ್ ಇಲಾಖೆ ತಿಳಿಸಿತ್ತು. ಆದರೆ, ಬೆಟ್ಟದ ಪಾದದಲ್ಲಿ ಅತಿ ಹೆಚ್ಚಿನ ಜನ ಮುಂಜಾನೆಯೇ ಸೇರಿದ್ದರಿಂದ ನೂಕುನುಗ್ಗಲು ಉಂಟಾಗಬಹುದು ಎಂಬ ಕಾರಣಕ್ಕೆ ಮುಂಜಾನೆ ಸುಮಾರು 3.30ರಿಂದಲೇ ಮೆಟ್ಟಿಲುಗಳ ಮೂಲಕ ಹತ್ತಲು ಅವಕಾಶ ನೀಡಲಾಯಿತು.

ಭಕ್ತರಿಗೆ ಧರ್ಮ ದರ್ಶನಕ್ಕಾಗಿ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿತ್ತು. 8 ಹಂತಗಳನ್ನು ಮಾಡಿ, ಜನರನ್ನು ಹಂತ-ಹಂತವಾಗಿ ಮುಂದಕ್ಕೆ ಬಿಡುತ್ತಿದ್ದರು. ಕುಡಿಯುವ ನೀರು, ಬಾದಾಮಿ ಹಾಲು, ನಂದಿನಿ ಬಿಸ್ಕೇಟ್ ವಿತರಿಸಿದರು. ರೂ. 2 ಸಾವಿರ ಹಾಗೂ ವಿಐಪಿ ದರ್ಶನಕ್ಕೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿತ್ತು. ಹಲವು ಜನಪ್ರತಿನಿಧಿಗಳು, ಚಲನಚಿತ್ರ ನಟ, ನಟಿಯರು ಬೆಳಿಗ್ಗಿನಿಂದಲೇ



### ಬೆಳಿಗ್ಗೆಯಿಂದಲೇ ಪೂಜೆ

ದೇವಸ್ಥಾನದ ಪ್ರಧಾನ ಅರ್ಚಕ ಶಶಿಶೇಖರ ದೀಕ್ಷಿತ್ ನೇತೃತ್ವದಲ್ಲಿ ಮುಂಜಾನೆ 3.30ರಿಂದ ದೇಗುಲದಲ್ಲಿ ಪೂಜೆ ಆರಂಭವಾಯಿತು. ದೇವಿಯ ಮೂರ್ತಿಗೆ ಮಹಾನ್ಯಾಸ ಪೂರ್ವಕ ರುದ್ರಾಭಿಷೇಕ, ಪಂಚಮಾಭಿಷೇಕ, ಸಹಸ್ರ ನಾಮಾರ್ಚನೆ ಸಲ್ಲಿಸಲಾಯಿತು. ಬೆಳಿಗ್ಗೆ 5.20ಕ್ಕೆ ದೇವಿಗೆ ಲಕ್ಷ್ಮಿ ಅಲಂಕಾರ ಪೂರ್ಣಗೊಳಿಸಲಾಯಿತು.




ನಂತರ ಭಕ್ತರಿಗೆ ದರ್ಶನಕ್ಕೆ ಅವಕಾಶ ನೀಡಲಾಯಿತು. ನಾಗಲಕ್ಷ್ಮೀ ಅಲಂಕಾರದಲ್ಲಿ ತಾಯಿ ಚಾಮುಂಡಿ ಕಂಗೊಳಿಸಿದಳು. ಚಾಮುಂಡಿ ತಾಯಿಯ ಉತ್ಸವ ಮೂರ್ತಿಗೆ ವಿಶೇಷ ಅಲಂಕಾರ ಮಾಡಲಾಗಿದೆ.



### ರೇಷ್ಮೆ ಸೀರೆ ನೀಡಿ ಹರಿಕೆ ತೀರಿಸಿದ ಸಿಎಂ ಡಿಕೆಶಿ ಪತ್ನಿ

**ಮೈಸೂರು:** ಆಷಾಢ ಮಾಸದ ಮೊದಲ ಶುಕ್ರವಾರದ ಅಂಗವಾಗಿ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಪತ್ನಿ ಉಷಾ ಶಿವಕುಮಾರ್ ಅವರು ಚಾಮುಂಡೇಶ್ವರಿ ತಾಯಿ ಮೂಲ ವಿಗ್ರಹಕ್ಕೆ ರೇಷ್ಮೆ ಸೀರೆ ಕೊಟ್ಟು ಹರಕೆ ತೀರಿಸಿದರು.

ಪತಿ ಮುಖ್ಯಮಂತ್ರಿ ಆದರೆ ಆಷಾಢದಲ್ಲಿ ಚಾಮುಂಡಿಗೆ ತಾಯಿಗೆ ಸೀರೆ ಉಡಿಸುತ್ತೇನೆ ಎಂದು ಡಿಕೆಶಿ ಪತ್ನಿ ಉಷಾ ಹರಕೆ ಹೊತ್ತಿದ್ದರು. ಪತಿ ಸಿಎಂ ಆಗುತ್ತಿದಂತೆ ಮೊದಲ ಆಷಾಢ ಶುಕ್ರವಾರದಂದೇ ಉಷಾ ಗುಲಾಬಿ ಮತ್ತು ಸಿಮೆಂಟ್ ಬಣ್ಣದ ರೇಷ್ಮೆ ಸೀರೆಯನ್ನು ತಾಯಿ ಚಾಮುಂಡೇಶ್ವರಿಗೆ ಕಾಣಿಕೆಯಾಗಿ



ನೀಡಿದರು.

ಸಿಎಂ ಪತ್ನಿ ಕಾಣಿಕೆಯಾಗಿ ಕೊಟ್ಟಿರುವ ಸೀರೆಯನ್ನು ಬೆಟ್ಟದ ಆಡಳಿತ ಮಂಡಳಿ ಚಾಮುಂಡಿ ತಾಯಿಗೆ ಮೊದಲ ಪುಟ 2ಕ್ಕೆ

## ವಸ್ತುಪ್ರದರ್ಶನಕ್ಕೆ ಜಾಗತಿಕ ಸ್ಪರ್ಶ

### ಅಮ್ಯೂಸ್ಮೆಂಟ್ ಪಾರ್ಕ್ ನಿರ್ಮಾಣಕ್ಕೆ ಯೋಜನೆ: ಡಾ.ಯತೀಂದ್ರ

**ಮೈಸೂರು:** ಮೈಸೂರು ದಸರಾ ವಸ್ತು ಪ್ರದರ್ಶನಕ್ಕೆ ಜಾಗತಿಕ ಮಟ್ಟದ ಸ್ಪರ್ಶ ನೀಡಿ ಮತ್ತಷ್ಟು ಆಕರ್ಷಣೀಯವಾಗಿಸಲು ವಸ್ತು ಪ್ರದರ್ಶನ ಪ್ರಾಧಿಕಾರ ಮುಂದಾಗಿದೆ ಎಂದು ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ದಸರಾ ವಸ್ತು ಪ್ರದರ್ಶನ ಆಯೋಜನೆ ಕುರಿತು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ದಸರಾ ವಸ್ತು ಪ್ರದರ್ಶನ ಆವರಣವನ್ನು ವರ್ಷಪೂರ್ತಿ ಕಾರ್ಯನಿರ್ವಹಿಸುವ ಅಮ್ಯೂಸ್ಮೆಂಟ್ ಪಾರ್ಕ್ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಯೋಜನೆ ಪ್ರಾಧಿಕಾರದ ಮುಂದಿದೆ ಎಂದು ಹೇಳಿದರು.

ಈ ಬಾರಿಯ ವಸ್ತು ಪ್ರದರ್ಶನವು ದಸರಾ ಹಬ್ಬದಿಂದ ಆರಂಭವಾಗಿ ಒಟ್ಟು 90 ದಿನಗಳ ಕಾಲ ನಡೆಯಲಿದೆ. ಜನವರಿ 8 2027 ರವರೆಗೆ ಇರಲಿದೆ ಎಂದು ಹೇಳಿದರು.

ಕಳೆದ ವರ್ಷಗಳಲ್ಲಿ 8 ರಿಂದ 9 ಲಕ್ಷದಷ್ಟಿದ್ದ ಪ್ರವಾಸಿಗರ ಸಂಖ್ಯೆ ಪ್ರಸ್ತುತ ಸಾಲಿನಲ್ಲಿ ಉತ್ತಮ ನಿರ್ವಹಣೆಯಿಂದ ಬರೋಬ್ಬರಿ 15 ಲಕ್ಷದ ಗಡಿಯನ್ನು ದಾಟಿ ದಾಖಲೆ ಬರೆದಿದೆ. ಪ್ರವಾಸಿಗರ ಭೇಟಿಯನ್ನು ಮತ್ತಷ್ಟು ಸುಲಭ ಹಾಗೂ ಆರಾಮದಾಯಕವಾಗಿಸಲು 4 ಕೋಟಿ ರೂಪಾಯಿ ವೆಚ್ಚದಲ್ಲಿ 32 ಶಾಶ್ವತ ಮಳಿಗೆಗಳನ್ನು ಹಾಗೂ ಮಳೆ-ಬಿಸಿಲಿನಿಂದ ರಕ್ಷಣೆ ನೀಡುವ ಅತ್ಯಾಧುನಿಕ ಶೆಲ್ಟರ್ ಒಳಗೊಂಡ ಶಾಶ್ವತ ಫುಡ್ ಕೋರ್ಟ್ ವ್ಯವಸ್ಥೆಯನ್ನು ಆವರಣದಲ್ಲಿ ನಿರ್ಮಿಸಲಾಗುತ್ತಿದೆ ಎಂದು ತಿಳಿಸಿದರು.

ಪ್ರತಿ ವರ್ಷ ತಾತ್ಕಾಲಿಕ ಮಳಿಗೆಗಳನ್ನು ನಿರ್ಮಿಸುವ ವೆಚ್ಚವನ್ನು ತಪ್ಪಿಸಲು ಈಗಾಗಲೇ ಕಾಯಂ ಮಳಿಗೆಗಳನ್ನು ಕಲ್ಪಿಸಲಾಗಿದೆ. ಇದರೊಂದಿಗೆ ಸಂಗೀತ ಕಾರಂಜಿ ಹಾಗೂ ಲೇಸರ್ ಶೋ, ಬೋಟಿಂಗ್ ಮತ್ತು ಬೆಂಕಿ ಉಗುಳುವ ಗನ್ ಪ್ರದರ್ಶನ ಒಳಗೊಂಡ ರಾಜೀವ್ ಗಾಂಧಿ ಗನ್ ಪಾಂಡ್ ಮನರಂಜನಾ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ ಎಂದು ಹೇಳಿದರು.

ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ವಿಜಯ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

### ಕಂಬಳಕ್ಕೆ ಶಾಸಕರ ಒಲವು

ಕರಾವಳಿ ಭಾಗದ ಸಾಂಸ್ಕೃತಿಕ ಕ್ರೀಡೆಯಾದ ಕಂಬಳವನ್ನು ಕೇವಲ ಆ ಭಾಗಕ್ಕೆ ಸೀಮಿತಗೊಳಿಸದೆ ರಾಜ್ಯದ ಜನರಿಗೆ ಪರಿಚಯಿಸುವ ಉದ್ದೇಶ ಇದೆ. ಈ ನಿಟ್ಟಿನಲ್ಲಿ ಮೈಸೂರು ದಸರಾದಲ್ಲಿ ಕಂಬಳ ಆಯೋಜಿಸಲು ದಸರಾ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ಬಹುತೇಕ ಶಾಸಕರು ಮತ್ತು ಸದಸ್ಯರು ಒಲವು ವ್ಯಕ್ತಪಡಿಸಿದ್ದಾರೆ. ಈ ಕುರಿತು ಮುಖ್ಯಮಂತ್ರಿ ಅಂತಿಮ ತೀರ್ಮಾನ ಕೈಗೊಳ್ಳಲಿದ್ದಾರೆ. ದಸರಾ ಆರಂಭಕ್ಕೂ ಮುನ್ನ ಮೈಸೂರು ನಗರದ ರಸ್ತೆಗಳ ರಿಪೇರಿ ಹಾಗೂ ಹೊಸ ರಸ್ತೆ ನಿರ್ಮಾಣ ಕಾಮಗಾರಿಗಳನ್ನು ಪೂರ್ಣಗೊಳಿಸುವಂತೆ ಸಂಬಂಧಪಟ್ಟ ಎಂಜಿನಿಯರ್ ಗಳಿಗೆ ಸೂಚನೆ ನೀಡಲಾಗಿದೆ ಎಂದು ಸಚಿವ ಯತೀಂದ್ರ ತಿಳಿಸಿದರು.




## ದಸರಾ ಬಳಿಕ ಪಾಲಿಕೆ ಚುನಾವಣೆ: ಯತೀಂದ್ರ

**ಮೈಸೂರು:** ನಾಡಹಬ್ಬ ದಸರಾ ಬಳಿಕ ಮೈಸೂರು ಮಹಾನಗರ ಪಾಲಿಕೆ ಚುನಾವಣೆ ನಡೆಸುವಂತೆ ಸಿಎಂಗೆ ಮನವಿ ಮಾಡುವುದಾಗಿ ನಗರಾಭಿವೃದ್ಧಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ಮೈಸೂರಿನ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಗಳನ್ನು ಈ ವರ್ಷದ ನವೆಂಬರ್‌ನಲ್ಲಿ ನಡೆಸಲಾಗುವುದು, ಹಾಗೆಯೇ ಗ್ರಾಮ ಪಂಚಾಯಿತಿ ಚುನಾವಣೆಗಳನ್ನೂ ಇದೇ ವರ್ಷ ನಡೆಸಲು ಗ್ರಾಮೀಣಾಭಿವೃದ್ಧಿ ಸಚಿವರು ಒಲವು ತೋರಿದ್ದಾರೆ. ಮೈಸೂರು ಮಹಾನಗರ ಪಾಲಿಕೆ ಚುನಾವಣೆ ವಿಳಂಬಕ್ಕೆ ಕಾರಣ ಮೈಸೂರನ್ನು ಬೃಹತ್ ಮೈಸೂರು ಮಾಡಲು ಪ್ರಸ್ತಾವನೆ ಸಲ್ಲಿಸಲಾಗಿದೆ. ಆದರೆ, ಸೆನ್ಸಸ್ ಪ್ರಕ್ರಿಯೆ ಚಾಲ್ತಿಯಲ್ಲಿರುವುದರಿಂದ ಯಾವುದೇ ಬದಲಾವಣೆ ಮಾಡಲು ಬರುವುದಿಲ್ಲ ಎಂದು ರಾಜ್ಯಪಾಲರು ತಿಳಿಸಿದ್ದರಿಂದ ಚುನಾವಣೆ ವಿಳಂಬವಾಗಿದೆ. ಈಗ ಸೆನ್ಸಸ್ ಮುಗಿಯುವವರೆಗೆ ಕಾಯುವುದು ಬೇಡ ಎಂದು ತೀರ್ಮಾನಿಸಿದ್ದು, ದಸರೆ ಮುಗಿದ ಬಳಿಕ ಶೀಘ್ರದಲ್ಲೇ ಸಿಎಂ ಹಾಗೂ ಪಕ್ಷದ ನಾಯಕರೊಂದಿಗೆ ಚರ್ಚಿಸಿ ಚುನಾವಣೆ ನಡೆಸಲಾಗುವುದು ಎಂದರು.

ಕರಾವಳಿ ಭಾಗದ ಸಾಂಸ್ಕೃತಿಕ ಕ್ರೀಡೆಯಾದ ಕಂಬಳವನ್ನು ಕೇವಲ ಆ ಭಾಗಕ್ಕೆ ಸೀಮಿತಗೊಳಿಸದೆ, ಇಡೀ ರಾಜ್ಯದ ಜನರಿಗೆ ಪರಿಚಯಿಸುವ ಉದ್ದೇಶವಿದೆ.



ಈ ನಿಟ್ಟಿನಲ್ಲಿ ಮೈಸೂರು ದಸರಾದಲ್ಲಿ ಕಂಬಳವನ್ನು ಆಯೋಜಿಸಲು ದಸರಾ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ಬಹುತೇಕ ಶಾಸಕರು ಮತ್ತು ಸದಸ್ಯರು ಒಲವು ವ್ಯಕ್ತಪಡಿಸಿದ್ದಾರೆ. ಈ ಕುರಿತು ಮುಖ್ಯಮಂತ್ರಿಗಳು ಅಂತಿಮ ತೀರ್ಮಾನ ಕೈಗೊಳ್ಳಲಿದ್ದಾರೆ. ಬೆಂಗಳೂರಿನಲ್ಲಿ ಫುಟ್ಪಾತ್ ಅತಿಕ್ರಮಣ ತೆರವುಗೊಳಿಸುವುದು ಸಂಚಾರ ದಟ್ಟಣೆ ನಿಯಂತ್ರಿಸಲು ಅನಿವಾರ್ಯವಾಗಿದೆ. ಆದರೆ ಇತರೆ ನಗರಗಳಲ್ಲಿ ಮಾನವೀಯತೆಯ ದೃಷ್ಟಿಯಿಂದ ಬೀದಿ ಬದಿ ವ್ಯಾಪಾರಿಗಳಿಗೆ ತೊಂದರೆಯಾಗದಂತೆ ನೋಟಿಸ್ ನೀಡಿ, ಪರ್ಯಾಯ ಜಾಗ ಕಲ್ಪಿಸಿ ನಂತರ ತೆರವು ಮಾಡಲಾಗುವುದು. ಮೈಸೂರಿನಲ್ಲಿ ಫುಡ್ ಸ್ಟ್ರೀಟ್ ಮತ್ತು ಪ್ರತ್ಯೇಕ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು ಸೂಚಿಸಲಾಗಿದೆ ಎಂದರು.

## ಜಿಬಿಎ ಚುನಾವಣೆಗೆ ಡಿ.31ರ ಗಡುವು

### ಡಿಸೆಂಬರ್‌ನಲ್ಲಿ ಮತ್ತೆ ಕಾರಣ ತರಬೇಡಿ ಎಂದ ಸುಪ್ರೀಂ ಕೋರ್ಟ್

**ನವದೆಹಲಿ:** ಜಿಬಿಎ ಚುನಾವಣೆ ನಡೆಸುವ ವಿಚಾರದಲ್ಲಿ ರಾಜ್ಯ ಸರ್ಕಾರಕ್ಕೆ ಮತ್ತೆ ರಿಲೀಫ್ ಸಿಕ್ಕಿದೆ. ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಡಿಸೆಂಬರ್ 31ರ ಗಡುವು ನೀಡಿದೆ.

ಬೆಂಗಳೂರಿನ ಐದು ಪಾಲಿಕೆಗಳ 369 ವಾರ್ಡ್ಗಳಿಗೆ ಚುನಾವಣೆ ನಡೆಸುವ ಗಡುವನ್ನು ಡಿಸೆಂಬರ್ ವರೆಗೆ ವಿಸ್ತರಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮತ್ತು ಕರ್ನಾಟಕ ರಾಜ್ಯ ಚುನಾವಣಾ ಆಯೋಗದಿಂದ ಪ್ರತ್ಯೇಕ ಮನವಿಗಳನ್ನು ಪರಿಗಣಿಸಿ ಸುಪ್ರೀಂ



ಕೋರ್ಟ್ ಅನುಮತಿಸಿದೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಮೂವರು ನ್ಯಾಯಾಧೀಶರ ಪೀಠ ಜಿಬಿಎ ಚುನಾವಣೆ ಗಡುವನ್ನು ವಿಸ್ತರಿಸಿದೆ.

ಕರ್ನಾಟಕದಲ್ಲಿ ಪುಟ 2ಕ್ಕೆ


### ಮತ್ತೆ ಕಾಲಾವಕಾಶ ಕೇಳಲ್ಲ: ಸಚಿವ ಕೃಷ್ಣ ಬೈರೇಗೌಡ

**ನವದೆಹಲಿ:** ಜಿಬಿಎ ಚುನಾವಣೆಗೆ ಮತ್ತೆ ಕಾಲಾವಕಾಶ ಕೇಳುವ ಯಾವ ಉದ್ದೇಶವೂ ನಮಗೆ ಇಲ್ಲ. ನಾವು ಚುನಾವಣೆ ಮಾಡಲು ತಯಾರಿದ್ದೇವೆ ಎಂದು ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಜಿಬಿಎ ವ್ಯಾಪ್ತಿಯ ಐದು ಮಹಾನಗರ ಪಾಲಿಕೆಗಳಿಗೆ ಪುಟ 2ಕ್ಕೆ

## ಬೈಕ್ ಅಪಘಾತ: ನವವಿವಾಹಿತೆ ಸಾವು

**ಮೈಸೂರು:** ಬೈಕ್ ನಿಂದ ಆಯತಪ್ಪಿ ಬಿದ್ದು ಸಂಭವಿಸಿದ ಅಪಘಾತದಲ್ಲಿ ನವವಿವಾಹಿತೆ ಸಾವನ್ನಪ್ಪಿರುವ ಘಟನೆ ಮೈಸೂರಿನ ಆರ್.ಟಿ.ನಗರ ಸಮೀಪ ನಡೆದಿದೆ.



ಮೈಸೂರು ತಾಲೂಕಿನ ಮಾಕನಹುಂಡಿ ಗ್ರಾಮದ ಮೇಘನಾ (20) ಮೃತಪಟ್ಟ ಯುವತಿ. ಗುರುವಾರ ಸಂಜೆ ಮನೆಗೆ ಮರಳುತ್ತಿದ್ದ ವೇಳೆ ದಂಪತಿ ಪ್ರಯಾಣಿಸುತ್ತಿದ್ದ ಬೈಕ್ ಸ್ಕಿಡ್ ಆಗಿ ಅಪಘಾತ ಸಂಭವಿಸಿದೆ.

ಬಿದರಗೂಡು ಗ್ರಾಮದ ಪುನೀತ್ ಅವರೊಂದಿಗೆ 15 ದಿನಗಳ ಹಿಂದಷ್ಟೇ ಪುಟ 2ಕ್ಕೆ

## ಸಿದ್ದು ಜೊತೆ ಮುನಿಸಿಲ್ಲ: ಸಚಿವ ಸತೀಶ್ ಜಾರಕಿಹೊಳಿ

**ನವದೆಹಲಿ:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಯಾವುದೇ ಪುಟ 2ಕ್ಕೆ




## ದಸರಾ: ಸುತ್ತೂರು ಶ್ರೀ ಆಹ್ವಾನಿಸಿದರೆ ಖುಷಿ

**ಮೈಸೂರು:** ನಾಡಹಬ್ಬ ದಸರಾ ಮಹೋತ್ಸವ ಉದ್ಘಾಟನೆಗೆ ಸುತ್ತೂರು ಮಹಾಸಂಸ್ಥಾನ ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರನ್ನು ಆಹ್ವಾನಿಸಿದರೆ ನನಗೆ ಬಹಳ ಖುಷಿಯಾಗುತ್ತದೆ ಎಂದು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಶಿವರಾತ್ರಿ ಪುಟ 2ಕ್ಕೆ

## ಶೀಘ್ರವೇ ಗ್ರಾಪಂ ಚುನಾವಣೆ: ಡಿಕೆಶಿ

**ನವದೆಹಲಿ:** ಜಿಬಿಎ ಚುನಾವಣೆ ನಡೆಸಲು ಸುಪ್ರೀಂ ಕೋರ್ಟ್ ಸಮಯ ನೀಡಿದೆ. ಡಿಸೆಂಬರ್ ಒಳಗೆ ಮಾಡಿ ಮುಗಿಸುತ್ತೇವೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.



ಗ್ರಾಮ ಪಂಚಾಯತ್‌ಗಳಲ್ಲಿ ಅಧಿಕಾರಿಗಳ ಮೂಲಕ ಆಡಳಿತ ನಡೆಸುವುದು ಸರಿಯಲ್ಲ. ಸ್ಥಳೀಯ ಚುನಾವಣೆಗಳನ್ನು ಮಾಡಬೇಕಿದೆ. ಶೀಘ್ರದಲ್ಲೇ ಗ್ರಾಮ ಪಂಚಾಯತಿಗೂ ಚುನಾವಣೆ ಮಾಡುತ್ತೇವೆ ಎಂದರು. ಪುಟ 2ಕ್ಕೆ

# ಹಳೆಯ ಫಾರ್ಮುಲಾ ಬಿಡಿ

## ಹೊಸಬರಿಗೆ ಅವಕಾಶ ನೀಡಲು ರಾಹುಲ್ ಗಾಂಧಿ ಸೂಚನೆ

**ಬೆಂಗಳೂರು:** ರಾಜ್ಯ ಸಚಿವ ಸಂಪುಟ ವಿಸ್ತರಣೆ ಪ್ರಕ್ರಿಯೆ ಜುಲೈ 20ರ ನಂತರ ಮತ್ತೆ ಆರಂಭವಾಗುವ ನಿರೀಕ್ಷೆ ಇದೆ. ಈ ಬಾರಿ ಹೊಸಬರಿಗೆ ಅವಕಾಶ ನೀಡಬೇಕು. ಇದರಲ್ಲಿ 60:40 ಫಾರ್ಮುಲಾ ಅನುಸರಿಸುವಂತೆ ರಾಜ್ಯ ನಾಯಕರಿಗೆ ಹೈಕಮಾಂಡ್ ಸೂಚನೆ ನೀಡಿದೆ ಎನ್ನಲಾಗಿದೆ.

ಈಗಾಗಲೇ ರಾಜ್ಯ ನಾಯಕರು ನೀಡಿರುವ ಪಟ್ಟಿಯಲ್ಲಿರುವ ಹಳೇ ಹೆಸರುಗಳನ್ನು ಕಂಡು ರಾಹುಲ್ ಗಾಂಧಿ ಬೇಸರ ವ್ಯಕ್ತಪಡಿಸಿದ್ದಾರೆ. ಮುಂಬರುವ ಚುನಾವಣೆ ದೃಷ್ಟಿಯಿಂದ ಹೊಸಬರಿಗೆ ಅವಕಾಶ ನೀಡಿ. 2ನೇ ಹಂತದ ಹೊಸ ನಾಯಕತ್ವಕ್ಕೆ ಆದ್ಯತೆ ನೀಡಿ ಎಂದು ಸೂಚಿಸಿದ್ದಾರೆ ಎಂದು ತಿಳಿದುಬಂದಿದೆ.

ಹಿರಿಯ ಶಾಸಕರು ಮತ್ತು ಮಾಜಿ ಸಚಿವರಿಗೆ ಶೇ.40ರಷ್ಟು ಅವಕಾಶ ನೀಡಿ. ಬಾಕಿ 60ರಷ್ಟು ಸಚಿವ ಸ್ಥಾನಗಳನ್ನು ಹೊಸ ಮತ್ತು ಯುವ ಶಾಸಕರಿಗೆ ನೀಡಿ. ಒಮ್ಮೆಯೂ ಸಚಿವರಾಗದವರಿಗೆ ಅವಕಾಶ ಕೊಡಿ. ಸಮುದಾಯ, ಪ್ರಾದೇಶಿಕವಾರು ಆದ್ಯತೆ ನೀಡಿ. ಹೊಸ ಮುಖಗಳು 55 ವರ್ಷದೊಳಗಿರಲಿ. ಹಳೆಯ ಮುಖಗಳು 70-75 ವರ್ಷವಾದರೂ ಪರಿಗಣಿಸಿ. ಹಳೆಯ ರೆಡಿಮೆಡ್ ಫಾರ್ಮುಲಾ ಬೇಡ. ಪಟ್ಟಿ ಸಿದ್ಧಪಡಿಸಿ ಕಳುಹಿಸಿಕೊಡಿ. ಆನಂತರ ಚರ್ಚೆ ಮಾಡಿ ನಿರ್ಧರಿಸಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ರಾಜ್ಯದ ಹಿರಿಯ ನಾಯಕರಿಗೆ ರಾಹುಲ್ ಗಾಂಧಿ ಸಲಹೆ ನೀಡಿದ್ದಾರೆ ಎನ್ನಲಾಗಿದೆ.



ಯುವ ನಾಯಕತ್ವಕ್ಕೆ ಆದ್ಯತೆ ನೀಡುವ ವಿಚಾರದಲ್ಲಿ ಭಿನ್ನಾಭಿಪ್ರಾಯ ವ್ಯಕ್ತವಾಗಿದೆ. ಒಂದು ಅಥವಾ ಎರಡು ಬಾರಿ ಶಾಸಕರಾದವರಿಗೆ ಅವಕಾಶ ಬೇಡ. ಆರೇಳು ಬಾರಿ ಶಾಸಕರಾದವರು ಇನ್ನೂ ಮಂತ್ರಿಗಳಾಗಿಲ್ಲ. ಈ ನಡುವೆ 1-2 ಬಾರಿ ಶಾಸಕರಾದವರಿಗೆ ಅವಕಾಶ ಬೇಡ ಎಂದು ರಣದೀಪ್ ಸುರ್ಜೆವಾಲ ಹಾಗೂ ಕೆ.ಸಿ.ವೇಣುಗೋಪಾಲ್ ತಿಳಿಸಿದ್ದಾರೆ. ಪ್ರಬಲ ಸಮುದಾಯದ 2-3 ಬಾರಿ ಶಾಸಕರಾದವರಿಗೆ ಆದ್ಯತೆ ನೀಡಬಹುದು ಎಂದು ತಿಳಿಸಿದ್ದಾರೆ ಎಂದು ತಿಳಿದುಬಂದಿದೆ.

# ಬಿಡದಿ ಟೌನ್‌ಶಿಪ್ ವಿರೋಧಿಸಿ ಬಿಜೆಪಿ ನಾಯಕರ ಪ್ರತಿಭಟನೆ

**ಬೆಂಗಳೂರು:** ಬಿಡದಿ ಸಮೀಪ ಗ್ರೇಟರ್ ಬೆಂಗಳೂರು ಇಂಟಿಗ್ರೇಟೆಡ್ ಟೌನ್‌ಶಿಪ್ ಯೋಜನೆಗೆ ರೈತರ ಭೂಮಿ ಸ್ವಾಧೀನಕ್ಕೆ ರಾಜ್ಯ ಸರ್ಕಾರ ಮುಂದಾಗಿರುವುದನ್ನು ವಿರೋಧಿಸಿ ಬಿಜೆಪಿ ನಾಯಕರು ನಗರದ ಫ್ರೀಡಂ ಪಾರ್ಕ್‌ನಲ್ಲಿ ಶುಕ್ರವಾರ ಬೃಹತ್ ಪ್ರತಿಭಟನೆ ನಡೆಸಿದರು.

ರೈತರು ಹಾಗೂ ಸ್ಥಳೀಯರ ತೀವ್ರ ವಿರೋಧದ ನಡುವೆಯೂ ಬಿಡದಿ ಟೌನ್‌ಶಿಪ್ ಯೋಜನೆಗಾಗಿ ಭೂಸ್ವಾಧೀನದ ಅಂತಿಮ ಅಧಿಸೂಚನೆಗಳನ್ನು ಸರ್ಕಾರ ಹೊರಡಿಸಿರುವುದನ್ನು ಬಿಜೆಪಿ ಖಂಡಿಸಿತು.

ಪ್ಲೆಕಾರ್ಡ್ಗಳನ್ನು ಹಿಡಿದ ಪ್ರತಿಭಟನಾಕಾರರು ಕಾಂಗ್ರೆಸ್ ಸರ್ಕಾರವನ್ನು ರೈತ




ಪುಟ 2ಕ್ಕೆ

ವಿರೋಧಿ ಸರ್ಕಾರ ಎಂದು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಿಡದಿ ಸುತ್ತಮುತ್ತಲಿನ ಗ್ರಾಮಗಳ ರೈತರೂ ಪ್ರತಿಭಟನೆಯಲ್ಲಿ ಪಾಲ್ಗೊಂಡರು.

ಭೂಸ್ವಾಧೀನ ವಿರೋಧಿಸಿ ಪ್ರತಿಭಟನೆಯಲ್ಲಿ ಭಾಗವಹಿಸಿದ ರೈತರ ವಿರುದ್ಧ ದಾಖಲಿಸಿರುವ ಪ್ರಕರಣಗಳನ್ನು ಕೂಡಲೇ ಹಿಂಪಡೆಯಬೇಕೆಂದು ಬಿಜೆಪಿ ನಾಯಕರು ಆಗ್ರಹಿಸಿದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬಿಡದಿ ಸ್ಯಾಟಲೈಟ್ ಟೌನ್‌ಶಿಪ್ ಯೋಜನೆಯನ್ನು ಮುಂದುವರಿಸಬೇಕೆಂಬ ಹಠಕ್ಕೆ ಬಿದ್ದಿದ್ದಾರೆ. ಶೇ.80ಕ್ಕೂ ಹೆಚ್ಚು ರೈತರು ಈ ಯೋಜನೆಯನ್ನು ತೀವ್ರವಾಗಿ ವಿರೋಧಿಸುತ್ತಿದ್ದಾರೆ. ಮುಖ್ಯಮಂತ್ರಿ ಈ ಯೋಜನೆಯ ಬಗ್ಗೆ ಏಕೆ ಇಷ್ಟೊಂದು ಆಸಕ್ತಿ ತೋರಿಸುತ್ತಿದ್ದಾರೆ ಎಂದು ರೈತ ಸಮುದಾಯ ಪ್ರಶ್ನಿಸುತ್ತಿದೆ. ಸರ್ಕಾರ ಭೂಸ್ವಾಧೀನದ ಅಧಿಸೂಚನೆಯನ್ನು ಕೂಡಲೇ ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ವಿಧಾನಸಭೆ ವಿರೋಧ ಪುಟ 2ಕ್ಕೆ

# ನಾಳೆ ಮಡ್ಡೀಕೆರೆಗೆ ಅಭಿನಂದನಾ ಸಮಾರಂಭ



ಮೈಸೂರು: ಮಡ್ಡೀಕೆರೆ ಗೋಪಾಲ್ ಅಭಿನಂದನಾ ಅಭಿನಂದನಾ ಸಮಿತಿವತಿಯಿಂದ ಜು.19ರಂದು ಮಡ್ಡೀಕೆರೆ ಮಾಣಿಕ್ಯ ನಮ್ಮ ಗೋಪಾಲ ಅಭಿನಂದನ ಗ್ರಂಥ, ಹೃದಯವಂತ ಕೃತಿ, ಕಥಾಗುಚ್ಛ, ಕಥಾ ಸಂಕಲನ, ಸ್ನೇಹಶೀಲ ಕಾವ್ಯಾಭಿನಂದನೆ ಗ್ರಂಥ ಬಿಡುಗಡೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿಯ ಗೌರವಾಧ್ಯಕ್ಷ, ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ತಿಳಿಸಿದರು.

ಕಲಾಮಂದಿರದಲ್ಲಿ ಬೆಳಗ್ಗೆ 10.30ಕ್ಕೆ ನಡೆಯಲಿರುವ ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಕ್ಷೇತ್ರದ ಮೈಸೂರು ಶಾಖಾ ಮಠದ ಸೋಮೇಶ್ವರನಾಥ ಸ್ವಾಮೀಜಿ , ಶ್ರೀ ಯೋಗನರ ಸಿಂಹಸ್ವಾಮಿ ದೇವಸ್ಥಾನದ ಡಾ.ಭಾಷ್ಯಂ ಸ್ವಾಮೀಜಿ ಸಾನ್ನಿಧ್ಯವಹಿಸುವರು. ಮಾಜಿ ಮುಖ್ಯಮಂತ್ರಿ ಸಿದ್ದರಾ ಮಯ್ಯ ಉದ್ಘಾಟಿಸುವರು ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಅಭಿನಂದನ ಗ್ರಂಥವನ್ನು ವಿದ್ವಾಂಸ ಡಾ.ಹಂಪ ನಾಗರಾಜಯ್ಯ, ಸ್ನೇಹಶೀಲ ಗ್ರಂಥವನ್ನು ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ, ಕಥಾಗುಚ್ಛವನ್ನು ಶಾಸಕ ಜಿ.ಟಿ.ದೇವೇಗೌಡ, ಹೃದಯವಂತ ಕೃತಿಯನ್ನು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಲೋಕಾರ್ಪಣೆಗೊಳಿಸುವರು. ಸಾಹಿತಿ ಪ್ರೊ.ಸಿ.ನಾಗಣ್ಣ ಅಭಿನಂದನಾ ನುಡಿ ನುಡಿಯವರು. ತಾವು ಅಧ್ಯಕ್ಷತೆ ವಹಿಸುವುದಾಗಿ ತಿಳಿಸಿದರು. ಮುಖ್ಯ ಅತಿಥಿಗಳಾಗಿ ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್‌ಗೌಡ, ಎಂಎಲ್‌ಸಿಗಳಾದ ಕೆ.ಶಿವಕುಮಾರ್, ರಘು ಕೌಟಿಲ್ಯಫಿ, ಕರ್ನಾಟಕ ಕಾಫಿ ಬೆಳೆಗಾರರ ಒಕ್ಕೂಟದ ಅಧ್ಯಕ್ಷ ಹಳಸೆ ಶಿವಣ್ಣಫಿ ಆಗಮಿಸುವರು. ಅಭಿನಂದನಾ ಸಮಿತಿ ಅಧ್ಯಕ್ಷ ರಾಜಶೇಖರ ಕದಂಬ, ಸನ್ಮಾನಿತರನ್ನು ಕುರಿತು ಕಸಾಪ ಜಿಲ್ಲಾ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಡಾ.ವೈ.ಡಿ.ರಾಜಣ್ಣ ಆಶಯ ನುಡಿ ನುಡಿಯುವರು ಎಂದರು. ನಾನಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ಡಾ.ಜಿ.ಎಸ್.ಭಟ್ಟ, ಇಳೈ ಆಳ್ವಾರ್ ಸ್ವಾಮೀಜಿ, ಡಿ.ಮಾದೇಗೌಡ, ಪ್ರೊ.ನೀ.ಗಿರಿಗೌಡ, ಕೆ.ಟಿ.ವೀರಪ್ಪ, ಪ್ರೊ. ಎಚ್.ಎಸ್.ಉಮೇಶ್, ಗೌರಿಸತ್ಯ, ಡಾ.ಎಂ.ಜಿ.ಆರ್. ಅರಸ್, ಕೆ.ಸುಕನ್ಯ, ಪುಷ್ಪಾ ಅಯ್ಯಂಗಾರ್, ಡಾ.ಎಚ್.ಬಿ. ರಾಜಶೇಖರ್ ರನ್ನು ವಿದ್ವಾಂಸ ಡಾ.ಸಿ.ಪಿ.ಕೃಷ್ಣಕುಮಾರ್, ಶಾಸಕ ಟಿ.ಎಸ್.ಶ್ರೀವತ್ಸ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಸನ್ಮಾನಿಸುವರು. ಮಾಧ್ಯಮಿಕ ಹಾಗೂ ಪ್ರೌಢಶಾಲಾ ವಿಭಾಗದಲ್ಲಿ ಕನ್ನಡ ಮಾಧ್ಯಮದಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಸಂಸ್ಕೃತಿ ಚಿಂತಕ ಡಾ. ಗುಬ್ಬಿಗೂಡು ರಮೇಶ್, ಕೃಷಿ ವಿಜ್ಞಾನಿ ಡಾ.ವಸಂತಕುಮಾರ್ ತಿಮಕಾಪುರ ಅವರು ಸನ್ಮಾನಿಸುವರು ಎಂದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ರಾಜಶೇಖರ ಕದಂಬ, ಕೆ.ಎಸ್.ಶಿವರಾಮು, ಎಂ.ಚಂದ್ರಶೇಖರ್, ಡಾ. ವೈ.ಡಿ.ರಾಜಣ್ಣ, ಲತಾ ಮೋಹನ್ ಇದ್ದರು.

# ಅರಿವಿದ್ದರೆ ಜೀವ ಉಳಿಸಬಹುದು



ಮೈಸೂರು: ಪಾರ್ಶ್ವವಾಯು, ತಲೆಗೆ ಗಾಯ ಹಾಗೂ ಹಠಾತ್ ಹೃದಯಾಘಾತದ ಪರಿಸ್ಥಿತಿ ವೇಳೆ ಸಾರ್ವಜನಿಕರು ಸುವರ್ಣ ಸಮಯದ ಅರಿವು ಹೊಂದಿರಬೇಕು. ಇದನ್ನು ಪಾಲಿಸಿದಲ್ಲಿ ರೋಗಿಯ ಜೀವ ಉಳಿಸಬಹುದಾಗಿದೆ ಎಂದು ನಗರದ ಮಣಿಪಾಲ್ ಆಸ್ಪತ್ರೆಯ ನರರೋಗ ತಜ್ಞ ಡಾ.ಸಿ.ಬಿ. ಕೇಶವಮೂರ್ತಿ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸಮಯಕ್ಕೆ ಸರಿಯಾದ ಚಿಕಿತ್ಸೆ ಅನೇಕ ಬಾರಿ ಜೀವ ಉಳಿಸುತ್ತದೆ. ಹೀಗಾಗಿ ಆದ್ದರಿಂದ ಕೂಡಲೇ ಆಸ್ಪತ್ರೆಗೆ ಕರೆತರಬೇಕು. ಇದರಿಂದಾಗಿ ಹೆಚ್ಚಿನ ಅನಾಹುತ ತಪ್ಪಿಸಬಹುದಾಗಿದೆ. ಶಾಶ್ವತ ಅಂಗವೈಕಲ್ಯ ಉಂಟಾಗುವುದನ್ನು ತಡೆಯಬಹುದಾಗಿದೆ ಎಂದರು.

ಮತ್ತೋರ್ವ ತಜ್ಞ ಡಾ.ಮಕ್ಸೂದ್ ಅಹ್ಮದ್ ಮಾತನಾಡಿ, ರಸ್ತೆ ಅಪಘಾತದ ಸಂದರ್ಭದಲ್ಲಿ ತಲೆಗೆ ಗಂಭೀರ ಗಾಯವಾದಾಗ ತಲೆಯಲ್ಲಿ ರಕ್ತಸ್ರಾವ ಉಂಟಾಗಬಹುದಾಗಿದೆ. ಈ ವೇಳೆ ತಕ್ಷಣ ಶಸ್ತ್ರಚಿಕಿತ್ಸೆ ನಡೆಸಿ ರೋಗಿಯ ಜೀವ ಉಳಿಸಿದ ಅನೇಕ ಉದಾಹರಣೆಗಳಿವೆ. ಪಾರ್ಶ್ವವಾಯುವಿನಿಂದಾಗಿ ಅನೇಕ ರೋಗಿಗಳು ಅಂಗಗಳ ಚಲನೆ ಕಳೆದುಕೊಳ್ಳುತ್ತಾರೆ. ಹೀಗಾಗಿ ಸಮಸ್ಯೆ ಕಂಡ ಕೂಡಲೇ ಸೂಕ್ತ ಚಿಕಿತ್ಸೆಗೆ ಕರೆತರಬೇಕು. ಈ ನಿಟ್ಟಿನಲ್ಲಿ ತಮ್ಮ ಆಸ್ಪತ್ರೆ ಜನತೆಯಲ್ಲಿ ಅರಿವು ಮೂಡಿಸುವ ಕೆಲಸ ಮಾಡುತ್ತಿದೆ ಎಂದು ವಿವರಿಸಿದರು. ವೈದ್ಯಕೀಯ ಸೇವೆಗಳ ಮುಖ್ಯಸ್ಥ ಡಾ.ಉಪೇಂದ್ರ ಶೆಣೈ ಮಾತನಾಡಿ, ಮಿದುಳು ಮತ್ತು ಹೃದಯ ಸಂಬಂಧಿತ ತುರ್ತು ಪರಿಸ್ಥಿತಿಗಳ ಸಮಯೋಚಿತ ಚಿಕಿತ್ಸೆ ಹಾಗೂ ವಿವಿಧ ತಜ್ಞರ ಸಮನ್ವಯ ಅತ್ಯಂತ ಅಗತ್ಯ. ಇಂತಹ ಗಂಭೀರ ಸಂದರ್ಭದಲ್ಲಿ ಪ್ರತಿಯೊಂದೂ ನಿಮಿಷವೂ ಅತ್ಯಂತ ಅಮೂಲ್ಯವಾಗಿದೆ ಎಂದು ಮಾಹಿತಿ ನೀಡಿದರು. ಆಸ್ಪತ್ರೆ ನಿರ್ದೇಶಕ ಬಿ.ಜೆ.ಸಂದೀಪ್ ಪಟೇಲ್ ಇದ್ದರು.

ಮೊದಲ ಪುಟದಿಂದ

## ಚಾಮುಂಡಿ ಬೆಟ್ಟಕ್ಕೆ ಭಕ್ತ ಸಾಗರ

ಭೇಟಿ ನೀಡಿ ಪೂಜೆ ಸಲ್ಲಿಸಿದರು. ಈ ಬಾರಿ 2 ಸಾವಿರ ಟಿಕೆಟ್ ಪಡೆದವರಿಗೆ ನೇರ ದರ್ಶನದ ವ್ಯವಸ್ಥೆ ಕಲ್ಪಿಸಲಾಗಿದೆ. ಮುಂಜಾನೇ 5:30 ರಿಂದ ಬೆಳಗ್ಗೆ 10 ಗಂಟೆಯವರೆಗೆ ವಿವಿಐಪಿಗಳಿಗೆ ದರ್ಶನಕ್ಕೆ ಅವಕಾಶ ನೀಡಲಾಗಿತ್ತು. ಚಾಮುಂಡಿ ಬೆಟ್ಟದ ದೇವಾಲಯದ ಸುತ್ತ ವಿಶೇಷ ವಿವಿಧ ಬಗೆಯ ಹೂಗಳಿಂದ ಅಲಂಕರಿಸಲಾಗಿದೆ. ಚಾಮುಂಡಿ ಬೆಟ್ಟಕ್ಕೆ ಯತ್ನಾಳ್ ಭೇಟಿ ನೀಡಿ ತಾಯಿಯ ದರ್ಶನ ಪಡೆದಿದ್ದಾರೆ. ಮಾಜಿ ಸಂಸದ ಪ್ರತಾಪ್ ಸಿಂಹ ಜೊತೆ ಬೆಟ್ಟಕ್ಕೆ ಆಗಮಿಸಿದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಚಾಮುಂಡಿ ತಾಯಿಗೆ ವಿಶೇಷ ಪೂಜೆ ಸಲ್ಲಿಸಿದ್ದಾರೆ. ಅಲ್ಲದೇ ನಟ ದರ್ಶನ್ ಪತ್ನಿ ವಿಜಯಲಕ್ಷ್ಮಿ ಕೂಡ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ ದರ್ಶನ್ ಹೆಸರಿನಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

## ಬಿಜೆಪಿ ನಾಯಕರ ಪ್ರತಿಭಟನೆ

ಪಕ್ಷದ ನಾಯಕ ಆರ್.ಅಶೋಕ್, ಬಿಡದಿ ಯೋಜನೆ ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಚಾರಕ್ಕಾಗಿ ರೂಪಿಸಿರುವ ರಿಯಲ್ ಎಸ್ಟೇಟ್ ಯೋಜನೆ. ಡಿ.ಕೆ. ಶಿವಕುಮಾರ್ ಮತ್ತು ಕಾಂಗ್ರೆಸ್ ಹೈಕಮಾಂಡ್ ನಡುವೆ ಒಪ್ಪಂದವಾಗಿದೆ. ಈ ಯೋಜನೆಯ ಹಣ ಕಾಂಗ್ರೆಸ್ ಪಕ್ಷಕ್ಕೆ ಹೋಗಲಿದೆ ಎಂದು ಆರೋಪಿಸಿದರು. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹಾಗೂ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಪ್ರತಿಭಟನೆ ನೇತೃತ್ವ ವಹಿಸಿದ್ದರು.

## ನವವಿವಾಹಿತೆ ಸಾವು

ಮೇಘನಾ ವಿವಾ ಹವಾಗಿತ್ತು. ಅಪಘಾತದ ವೇಳೆ ಹೆಲ್ಮೆಟ್ ಧರಿ ಸದಿದ್ದ ಹಿನ್ನೆಲೆ ಮೇಘನಾ ಗಂಭೀರವಾಗಿ ಗಾಯ ಗೊಂಡು ಸಾವನ್ನಪ್ಪಿದ್ದಾರೆ. ಪತಿ ಪುನೀತ್ ಅವರ ತಲೆ, ಕೈ ಹಾಗೂ ಕಾಲಿಗೆ ಗಾಯ ಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

## ಮತ್ತೆ ಕಾಲಾವಕಾಶ ಕೇಳಲ್ಲ: ಸಚಿವ

ಚುನಾವಣೆ ನಡೆಸಲು ಡಿಸೆಂಬರ್ 31ರವರೆಗೆ ಸಮಯ ನೀಡುವಂತೆ ಕೋರಿ ರಾಜ್ಯ ಚುನಾವಣಾ ಆಯೋಗ ಸುಪ್ರೀಂ ಕೋರ್ಟ್ಗೆ ಅರ್ಜಿ ಸಲ್ಲಿಸಿತ್ತು. ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಐದು ಪಾಲಿಕೆಗಳಿಗೆ ಡಿಸೆಂಬರ್ ಅಂತ್ಯದ ಒಳಗೆ ಚುನಾವಣೆ ನಡೆಸಲು ಸುಪ್ರೀಂ ಕೋರ್ಟ್ ಕಾಲಾವಕಾಶ ನೀಡಿದೆ. ಈಗಲೂ ಕೂಡ ಜಿಬಿಎ ಚುನಾವಣೆ ಮಾಡಲು ಮತ್ತು ರಾಜಕೀಯವಾಗಿ ಎದುರಿಸಲು ನಾವು ತಯಾರಿದ್ದೇವೆ. ಎಸ್‌ಐಆರ್ ಮಾಡಲು ಚುನಾವಣಾ ಆಯೋಗವೇ ಒಂದು ವಾರ ಹೆಚ್ಚುವರಿ ಸಮಯ ಕೊಟ್ಟು ಬದಲಾವಣೆ ಮಾಡಿದ್ದಾರೆ. ಎಸ್‌ಐಆರ್ ಅನ್ನು ಶ್ರದ್ಧೆಯಿಂದ ಮಾಡದೇ ಇದ್ದರೇ ಸಾವಿರಾರು ಜನ ಮತ ಕಳೆದುಕೊಳ್ಳುವ ಸಾಧ್ಯತೆ ಇದೆ ಎಂದು ಹೇಳಿದರು. ಎಸ್‌ಐಆರ್ ಕುರಿತ ನಮ್ಮ ವಿವರಣೆಯನ್ನು ಸುಪ್ರೀಂ ಕೋರ್ಟ್ ಒಪ್ಪಿದೆ. ಅದರ ಪ್ರಕಾರವೇ ಹೊಸ ಮತದಾರರ ಪಟ್ಟಿ ಬರುತ್ತದೆ. ಆದರೆ, ಜಿಬಿಎ ಚುನಾವಣೆಗೆ ನಾವು ತಯಾರು ಮಾಡಿರುವ ಪಟ್ಟಿಯು ಹಳೇ ಮತದಾರರ ಪಟ್ಟಿ ಆಧಾರವಾಗಿದೆ. ಇದರಲ್ಲಿ ಕಾನೂನಾತ್ಮಕ ವಿಷಯ ಬಿಟ್ಟರೆ, ಬೇರೆ ಯಾವುದೇ ರಾಜಕೀಯ ಇಲ್ಲ ಎಂದು ಹೇಳಿದರು.

## ಚುನಾವಣೆಗೆ ಡಿ.31ರ ಗಡುವು

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ನಡೆಯುತ್ತಿದೆ. ನವೆಂಬರ್‌ನಲ್ಲಿ ಎಸ್‌ಐಆರ್ ಅಂತ್ಯಗೊಳ್ಳಲಿದೆ. ಸರ್ಕಾರಿ ಸಿಬ್ಬಂದಿ ಎಸ್‌ಐಆರ್ ಕೆಲಸದಲ್ಲಿದ್ದಾರೆ ಎಂದು ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್ಗೆ ಸಲ್ಲಿಸಿದ್ದ ಅರ್ಜಿಯಲ್ಲಿ ಉಲ್ಲೇಖಿಸಲಾಗಿತ್ತು. ಸರ್ಕಾರದ ಪರವಾದ ಮಂಡಿಸಿದ ಕಪಿಲ್ ಸಿಬಲ್, ರಾಜ್ಯದಲ್ಲಿ ಎಸ್‌ಐಆರ್ ನಡೆಯುತ್ತಿದೆ. ಹೀಗಾಗಿ ಸಮಯ ನೀಡಿ. ಐದು ಪಾಲಿಕೆಗಳ ಚುನಾವಣೆ ನಡೆಯಬೇಕು. ರಾಜ್ಯ ಚುನಾವಣಾ ಆಯೋಗ ಸಹ ಸುಪ್ರೀಂ ಕೋರ್ಟ್ಗೆ ಮಾಹಿತಿ ನೀಡಿದೆ ಎಂದು ತಿಳಿಸಿದರು. ಅರ್ಜಿ ಪುರಸ್ಕರಿಸಿದ ಸುಪ್ರೀಂ ಕೋರ್ಟ್, ಡಿಸೆಂಬರ್ 31ರೊಳಗೆ ಚುನಾವಣೆ ಮುಗಿಸಬೇಕು ಎಂದು ಸೂಚನೆ ನೀಡಿದೆ. ಡಿಸೆಂಬರ್‌ನಲ್ಲಿ ಮತ್ತೆ ಕಾರಣ ತರಬೇಡಿ ಎಂದು ಕೋರ್ಟ್ ಹೇಳಿದೆ. ಜನವರಿ ವೇಳೆಗೆ ಚುನಾವಣೆ ನಡೆಸಿರುವ ಮಾಹಿತಿ ಸಲ್ಲಿಸುತ್ತೇವೆ ಎಂದ ರಾಜ್ಯ ಸರ್ಕಾರ ಸುಪ್ರೀಂಗೆ ತಿಳಿಸಿದೆ.

## ಶೀಘ್ರವೇ ಗ್ರಾಪಂ ಚುನಾವಣೆ: ಡಿಕೆಶಿ

ಬಿಡದಿ ವಿಚಾರದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಪ್ರತಿಭಟನೆ ಬಗ್ಗೆ ನಾನು ಮಾತನಾಡುವುದಿಲ್ಲ. ನಾನು ಹೇಳಬೇಕಿರುವುದನ್ನು ಈಗಾಗಲೇ ಹೇಳಿದ್ದೇನೆ ಎಂದು ಹೇಳಿದರು. ಸಂಪುಟ ವಿಸ್ತರಣೆ ವಿಚಾರಕ್ಕೆ ಸಂಬಂಧಿಸಿದಂತೆ ಚರ್ಚೆಗಳಾಗಿದೆ. ನಾನು ಈಗಾಗಲೇ ಆ ಕುರಿತು ತಯಾರಿ ಮಾಡಿಕೊಂಡಿದ್ದೇನೆ. ಮಲ್ಲಿಕಾರ್ಜುನ ಖರ್ಗೆ ನಾಳೆ ದೆಹಲಿಗೆ ಬರುತ್ತಾರೆ. ಅವರು ಬಂದ ನಂತರ ಈ ಕುರಿತು ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ತಿಳಿಸಿದರು.

# ಪ್ಲಾಸ್ಟಿಕ್‌ನಿಂದ ಆರೋಗ್ಯ ಸಮಸ್ಯೆ

## ಡಾ.ಪಿ.ಆರ್.ವನಿತಾ ಎಚ್ಚರಿಕೆ । ಮಾಧವ ಗಾಡ್ಗೀಳ್ ಸ್ಮರಣೆ'

ಚಾಮರಾಜನಗರ: ಪ್ಲಾಸ್ಟಿಕ್ ಬಳಕೆಯಿಂದ ಮಾನವನ ಆರೋಗ್ಯ ಹಾಗೂ ಪರಿಸರದ ಮೇಲೆ ಗಂಭೀರ ಹಾನಿ ಉಂಟಾಗುತ್ತದೆ ಎಂದು ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ಸರ್ಕಾರಿ ಮಹಿಳಾ ಕಾಲೇಜಿನ ಸೂಕ್ಷ್ಮ ಜೀವಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕಿ ಡಾ.ಪಿ.ಆರ್.ವನಿತಾ ಎಚ್ಚರಿಕೆ ನೀಡಿದರು.

ಚಾಮರಾಜನಗರ ತಾಲೂಕಿನ ಆಲೂರು ಸರ್ಕಾರಿ ಪ್ರೌಢಶಾಲೆಯಲ್ಲಿ 'ಚಾರು ಸಾಂಸ್ಕೃತಿಕ ಪ್ರತಿಷ್ಠಾನ ಮೈಸೂರು' ವತಿಯಿಂದ ಆಯೋಜಿಸಿದ್ದ 'ಚಾರು ಜೀವಜಲ ಹಾಗೂ ಮಾಧವ ಗಾಡ್ಗೀಳ್ ಸ್ಮರಣೆ' ಕಾರ್ಯಕ್ರಮದಲ್ಲಿ ಅವರು ಪ್ಲಾಸ್ಟಿಕ್ ಬಳಕೆಯ ಅನಾಹುತಗಳ ಕುರಿತು ವಿಶೇಷ ಉಪನ್ಯಾಸ ನೀಡಿದರು.



### ಗಣ್ಯರ ಉಪಸ್ಥಿತಿ ಹಾಗೂ ಸಸಿ ನೆಡುವ ಕಾರ್ಯಕ್ರಮ

ಕಾರ್ಯಕ್ರಮವನ್ನು ಕಾಲೇಜು ಪ್ರಾಂಶುಪಾಲ ತಿಮ್ಮರಾಜು ಉದ್ಘಾಟಿಸಿದರು. ಶಾಲೆಯ ಮುಖ್ಯ ಶಿಕ್ಷಕ ಪ್ರಭುಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮಕ್ಕೂ ಮುನ್ನ ಶಾಲಾ ಆವರಣದಲ್ಲಿ ಚಾರು ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಗಿಡಗಳನ್ನು ನೆಡಲಾಯಿತು. ವೇದಿಕೆಯಲ್ಲಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕ ಆರ್.ಮಹದೇವಸ್ವಾಮಿ, ಸಿಆರ್‌ಪಿ ನಂಜುಂಡಸ್ವಾಮಿ, ಶಿಕ್ಷಕರಾದ ಸಿದ್ದರಾಜು, ಮಹೇಶ್ವರಿ, ಮಂಜುಳಾ, ಸುಮಾ ಚೌಧರಿ, ರವಿ, ವೆಂಕಟೇಶ್, ರಂಜಿತಾ, ನಿವೃತ್ತ ಶಿಕ್ಷಕ ನಂಜುಂಡಸ್ವಾಮಿ ಹಾಗೂ ಶಾಲಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

### ಪರಿಸರ ಜಾಗೃತಿ ಹಾಗೂ ಮಾಧವ ಗಾಡ್ಗೀಳ್ ಸ್ಮರಣೆ

ಪ್ರಾಸ್ತಾವಿಕವಾಗಿ ಮಾತನಾಡಿದ ಚಾರು ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷೆ ಶೀಲಾಕುಮಾರಿ, ಶಾಲಾ ಆವರಣವನ್ನು ಹಸಿರೀಕರಣಗೊಳಿಸುವ ಉದ್ದೇಶದಿಂದ ಟ್ರಸ್ಟ್ ವತಿಯಿಂದ ಸಸಿಗಳನ್ನು ನೆಡಲಾಗಿದೆ. ವಿದ್ಯಾರ್ಥಿಗಳಲ್ಲಿ ಪ್ಲಾಸ್ಟಿಕ್ ಮುಕ್ತ ಪರಿಸರದ ಬಗ್ಗೆ ಜಾಗೃತಿ ಮೂಡಿಸಲು ಈ ಉಪನ್ಯಾಸ ಹಮ್ಮಿಕೊಳ್ಳಲಾಗಿದೆ ಎಂದರು. ಇದೇ ವೇಳೆ ಪರಿಸರ ವಿಜ್ಞಾನಿ ಪ್ರೊ. ಮಾಧವ ಗಾಡ್ಗೀಳ್ ಅವರನ್ನು ಸ್ಮರಿಸಲಾಯಿತು. ಭಾರತದ ಪರಿಸರ ಸಂರಕ್ಷಣೆ ಹಾಗೂ ಜೀವವೈವಿಧ್ಯದ ಮೌಲ್ಯಮಾಪನಕ್ಕೆ ಗಾಡ್ಗೀಳ್ ಅವರ ಕೊಡುಗೆ ಅಪಾರವಾಗಿದೆ. 2010ರಲ್ಲಿ ರಚನೆಯಾದ ಪಶ್ಚಿಮ ಘಟ್ಟ ಪರಿಸರ ವಿಜ್ಞಾನ ಪರಿಣಿತರ ತಂಡದ ಅಧ್ಯಕ್ಷರಾಗಿದ್ದ ಅವರು, ಪಶ್ಚಿಮಘಟ್ಟವನ್ನು ಸೂಕ್ಷ್ಮ ಪರಿಸರ ವಲಯವೆಂದು ಘೋಷಿಸಿ, ಅಲ್ಲಿನ ಅಪೂರ್ವ ಜೀವವೈವಿಧ್ಯವನ್ನು ಉಳಿಸಲು ಕಟ್ಟುನಿಟ್ಟಿನ ಕ್ರಮಗಳನ್ನು ಶಿಫಾರಸು ಮಾಡಿದ್ದರು. ಇಂತಹ ಮಹಾನ್ ಸಾಧಕರನ್ನು ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ಶೀಲಾಕುಮಾರಿ ತಿಳಿಸಿದರು.

### ಹಾರ್ಮೋನ್ ಅಸಮತೋಲನ, ರೋಗಗಳ ಭೀತಿ

ಪ್ಲಾಸ್ಟಿಕ್ನಲ್ಲಿರುವ ಅಪಾಯಕಾರಿ ರಾಸಾಯನಿಕಗಳು ಮಾನವರಲ್ಲಿ ಹಾರ್ಮೋನ್ ಅಸಮತೋಲನಕ್ಕೆ ಕಾರಣವಾಗುತ್ತವೆ. ಇದರ ಪರಿಣಾಮವಾಗಿ ಹೆಣ್ಣುಮಕ್ಕಳು ಚಿಕ್ಕ ವಯಸ್ಸಿನಲ್ಲೇ ಪ್ರೌಢಾವಸ್ಥೆಗೆ ತಲುಪುವಂತಾಗಿದೆ. ಜೊತೆಗೆ ಸಕ್ಕರೆ ಕಾಯಿಲೆ, ಕ್ಯಾನ್ಸರ್‌ನಂತಹ ಮಾರಕ ರೋಗಗಳು ಹೆಚ್ಚಾಗುತ್ತಿದ್ದು, ಪ್ರತಿಯೊಬ್ಬರೂ ಪ್ಲಾಸ್ಟಿಕ್ ಬಳಕೆಯಿಂದ ಸಂಪೂರ್ಣವಾಗಿ ದೂರವಿರಬೇಕು ಎಂದು ಸಲಹೆ ನೀಡಿದರು

### ಮಣ್ಣು, ಜಲಚರ ಹಾಗೂ ಪ್ರಾಣಿಗಳಿಗೆ ಕಂಟಕ

ಪ್ಲಾಸ್ಟಿಕ್ ನೂರಾರು ವರ್ಷಗಳ ಕಾಲ ಮಣ್ಣಿನಲ್ಲಿ ಕರಗುವುದಿಲ್ಲ. ಇದರಿಂದ ಮಣ್ಣು ಮತ್ತು ನೀರು ಸುಲಭವಾಗಿ ಕಲುಷಿತಗೊಳ್ಳುತ್ತದೆ. ಪ್ಲಾಸ್ಟಿಕ್ ತ್ಯಾಜ್ಯಗಳು ನದಿ ಹಾಗೂ ಸಮುದ್ರ ಸೇರುವುದರಿಂದ ಜಲಚರಗಳಿಗೆ ತೀವ್ರ ತೊಂದರೆಯಾಗುತ್ತಿದೆ. ಅಲ್ಲದೆ, ಪ್ಲಾಸ್ಟಿಕ್ ತಿಂದ ಪ್ರಾಣಿಗಳು ಉಸಿರುಗಟ್ಟಿ ಸಾವನ್ನಪ್ಪುತ್ತಿವೆ. ಪ್ಲಾಸ್ಟಿಕ್ ಸುಟ್ಟಾಗ ಹೊರಹೊಮ್ಮುವ ವಿಷಕಾರಿ ಹೊಗೆಯಿಂದ ಕ್ಯಾನ್ಸರ್‌ನಂತಹ ಗಂಭೀರ ಕಾಯಿಲೆಗಳು ಆವರಿಸುತ್ತಿವೆ. ಮೈಕ್ರೋ ಪ್ಲಾಸ್ಟಿಕ್ ಕಣಗಳು ನಮ್ಮ ಆಹಾರವನ್ನು ಸೇರಿ ಆರೋಗ್ಯವನ್ನು ಸಂಪೂರ್ಣವಾಗಿ ಹಾಳುಮಾಡುತ್ತಿವೆ ಎಂದು ಅವರು ಕಳವಳ ವ್ಯಕ್ತಪಡಿಸಿದರು.

## ದಸರಾ: ಸುತ್ತೂರು ಶ್ರೀ ಆಹ್ವಾನಿಸಿದರೆ ಖುಷಿ

ದೇಶಿಕೇಂದ್ರ ಸ್ವಾಮೀಜಿ ನಮ್ಮ ವರುಣ ಕ್ಷೇತ್ರದಲ್ಲಿರುವ ಮಠದ ಶ್ರೀಗಳು. ಶಿಕ್ಷಣ ಸೇರಿದಂತೆ ಎಲ್ಲ ಕ್ಷೇತ್ರದಲ್ಲೂ ಸಮಾಜಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಎಂದರು. ಅವರನ್ನು ಆಹ್ವಾನಿಸಬೇಕು ಎಂದು ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಈಚೆಗೆ ನಡೆದ ಉನ್ನತಮಟ್ಟದ ಸಮಿತಿ ಸಭೆಯಲ್ಲಿ ಪ್ರಸ್ತಾಪವಾಯಿತು. ಉದ್ಘಾಟಕರ ಆಯ್ಕೆಯನ್ನು ಸಿಎಂ ವಿವೇಚನೆಗೇ ಬಿಡಲಾಗಿದೆ ಎಂದು ತಿಳಿಸಿದರು. ಬರಗಾಲ ಪರಿಸ್ಥಿತಿ ಇರುವುದರಿಂದ ದಸರೆಯನ್ನು ಸರಳವಾಗಿ ನಡೆಸಬೇಕು ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಆದರೆ ಈಚೆಗೆ ನಡೆದ ಸಭೆಯಲ್ಲಿ, ಮುಂದಿನ ದಿನಗಳಲ್ಲಿ ಮಳೆ ಬರುತ್ತದೆ. ಆದ್ದರಿಂದ ಸರಳ ದಸರಾ ಬೇಡ ಎಂದು ಶಾಸಕರು ಹೇಳಿದರು. ಮುಖ್ಯಮಂತ್ರಿಯೂ ಅದನ್ನು ಅನುಮೋದಿಸಿದ್ದಾರೆ. ಅದ್ದೂರಿಯಾಗಿ ಮಾಡೋಣ ಎಂದಿದ್ದಾರೆ ಎಂದರು.

## ಹರಿಕೆ ತೀರಿಸಿದ ಸಿಎಂ ಪತ್ನಿ

ಆಷಾಢ ಶುಕ್ರವಾರವೇ ಉಡಿಸಿದ್ದಾರೆ. ಚಾಮುಂಡಿ ಬೆಟ್ಟದಲ್ಲಿ ಚಾಮುಂಡಿಯ ದರ್ಶನ ಪಡೆದ ಉಷಾ ಅವರು ತಾಯಿಗೆ ವಿಶೇಷ ಪೂಜೆ ಸಲ್ಲಿಸಿದರು.

## ಸಿದ್ದು ಜೊತೆ ಮುನಿಸಿಲ್ಲ:

ಭಿನ್ನಾಭಿಪ್ರಾಯ ಅಥವಾ ಗೊಂದಲ ಇಲ್ಲ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನ್ನ ಮತ್ತು ಸಿದ್ದರಾಮಯ್ಯ ಅವರ ನಡುವೆ ಭಿನ್ನಾಭಿಪ್ರಾಯವಿದೆ ಎಂಬ ಭಾವನೆ ಮೂಡಿಸಲು ಕೆಲವರು ಉದ್ದೇಶಪೂರ್ವಕವಾಗಿ ಪ್ರಯತ್ನಿಸುತ್ತಿದ್ದಾರೆ. ಅದರಿಂದ ರಾಜಕೀಯ ಲಾಭ ಪಡೆಯುವ ಲೆಕ್ಕಾಚಾರ ಅವರದ್ದಾಗಿದೆ. ಆದರೆ, ಇಂತಹ ಪ್ರಯತ್ನಗಳು ಹೆಚ್ಚು ಕಾಲ ಯಶಸ್ವಿಯಾಗುವುದಿಲ್ಲ ಎಂದು ಹೇಳಿದರು.

ಸಚಿವ ಸಂಪುಟ ವಿಸ್ತರಣೆ ಕುರಿತು ನಮ್ಮ ಅಭಿಪ್ರಾಯವನ್ನು ಪಕ್ಷದ ಹೈಕಮಾಂಡ್‌ಗೆ ತಿಳಿಸಿದ್ದೇವೆ. ಅಂತಿಮ ತೀರ್ಮಾನವನ್ನು ಪಕ್ಷದ ವರಿಷ್ಠರು ಕೈಗೊಳ್ಳಲಿದ್ದಾರೆ ಎಂದರು.

## ಕೃಷಿ ಪ್ರಶಸ್ತಿಗೆ ಅರ್ಜಿ ಆಹ್ವಾನ

**ಅರಸೀಕೆರೆ:** ಕೃಷಿ ಕ್ಷೇತ್ರದಲ್ಲಿ ಸಾಧನೆಗೈದ ರೈತರಿಂದ "ಆತ್ಮ ಶ್ರೇಷ್ಠ ಕೃಷಿಕ" ಎಂಬ ಪ್ರಶಸ್ತಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಸಹಾಯಕ ಕೃಷಿ ನಿರ್ದೇಶಕ ಎ.ಪಿ.ಶಿವಕುಮಾರ್ ತಿಳಿಸಿದ್ದಾರೆ.

ಕೃಷಿ ಉತ್ಪಾದನೆ ಹೆಚ್ಚಿಸಲು ಕೃಷಿಯಲ್ಲಿ ಕ್ಷಮಿಸುತ್ತಿರುವ ಪುರುಷ ಮತ್ತು ಮಹಿಳಾ ರೈತರನ್ನು ಗುರುತಿಸಿ ಕೃಷಿ ಪ್ರಶಸ್ತಿ ನೀಡಲಾಗುತ್ತಿದೆ.

ಕೃಷಿ ಕ್ಷೇತ್ರದಲ್ಲಿ ಸ್ಪರ್ಧಾತ್ಮಕ ಮನೋಭಾವನೆಯನ್ನು ಬೆಳೆಸುವ ನಿಟ್ಟಿನಲ್ಲಿ ಅರ್ಹ ರೈತರಿಂದ ಕೃಷಿ ಪ್ರಶಸ್ತಿಗೆ ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಸಮಗ್ರ ಬೆಳೆ ಪದ್ಧತಿ, ಸಮಗ್ರ ನೀರು ನಿರ್ವಹಣೆ, ಸಾವಯವ ಕೃಷಿ, ಆಧುನಿಕ ಯಂತ್ರೋಪಕರಣ ಬಳಕೆ, ತೋಟಗಾರಿಕೆ, ಹೈನುಗಾರಿಕೆ, ಕೋಳಿ ಸಾಕಾಣಿಕೆ, ಮೀನುಗಾರಿಕೆ, ರೇಷ್ಮೆ ಬೇಸಾಯ, ಕೃಷಿ ಸಂಸ್ಕರಣೆ, ಅರಣ್ಯ ಕೃಷಿ, ಆಡು– ಕುರಿ–ಮೊಲ ಸಾಕಾಣಿಕೆ ಇತ್ಯಾದಿ ಚಟುವಟಿಕೆಗಳಲ್ಲಿ ಸಾಧನೆ ಮಾಡಿದವರು ತಾಲೂಕು, ಜಿಲ್ಲಾ ಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ. ಅರಸೀಕೆರೆ ತಾಲೂಕಿನ ರೈತರು ಹತ್ತಿರದ ರೈತ ಸಂಪರ್ಕ ಕೇಂದ್ರ ಅಥವಾ ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರ ಕಚೇರಿಗಳಿಂದ ಅರ್ಜಿಗಳನ್ನು ಪಡೆದುಕೊಂಡು ಜುಲೈ 31, 2026ರೊಳಗೆ ಸಂಬಂಧಿಸಿದ ರೈತ ಸಂಪರ್ಕ ಕೇಂದ್ರ ಅಥವಾ ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಅಥವಾ ಹೋಬಳಿ ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

# ಮಹಿಳಾ ಮೀಸಲು ಪ್ರತ್ಯೇಕ ಮಸೂದೆ ಜಾರಿಗೆ ಆಗ್ರಹ




**ಮೈಸೂರು:** ಮಹಿಳಾ ಮೀಸಲಾತಿ ಕಾಯ್ದೆಯಲ್ಲಿ ಜನಗಣತಿ ಮತ್ತು ಕ್ಷೇತ್ರ ಗಣತಿ ಮರುವಿಂಗಡಣೆಯೊಂದಿಗೆ ಜೋಡಿಸಲಾದ ಕಾರಣ ಇದು ಮೂರು ವರ್ಷ ವಿಳಂಬವಾಗಿದೆ. ಈ ಪ್ರಕ್ರಿಯೆಗೂ ಮಹಿಳಾ ಮೀಸಲಾತಿಗೂ ಯಾವುದೇ ಸಂಬಂಧವಿಲ್ಲ. ಹೀಗಾಗಿ ಈ ಕುರಿತ ತಿದ್ದುಪಡಿ ಮಸೂದೆಯನ್ನು ವಿರೋಧ ಪಕ್ಷಗಳು ಯಶಸ್ವಿಯಾಗಿ ಸೋಲಿಸಿದುದು ಸ್ವಾಗತಾರ್ಹ ಸಂಗತಿಯಾಗಿದೆ ಎಂದು ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ಮೈಸೂರು ತಿಳಿಸಿದೆ.

ನಗರದಲ್ಲಿ ಈ ಕುರಿತು ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಮೊದಲಿಗೆ ಹೋರಾಟಗಾರ್ತಿ ರತಿರಾವ್ ಮಾತನಾಡಿ, 2023 ರಲ್ಲೇ ಈ ಕಾಯ್ದೆ ಅಂಗೀಕಾರಗೊಂಡಿದ್ದರೂ ಮಹಿಳಾ ಮೀಸಲಾತಿ ಕಾಯ್ದೆಯೊಡನೆ ಜನಗಣತಿ ಹಾಗೂ ಕ್ಷೇತ್ರ ಮರು ವಿಂಗಡಣೆ ಸೇರಿಸಿರುವುದು ಸರಿಯಲ್ಲ. ಈ ಕುರಿತು ಯಾವುದೇ ಷರತ್ತು ಇರಬಾರದು. ಭಾರತದ ಒಕ್ಕೂಡ ವ್ಯವಸ್ಥೆಯನ್ನು ಬಲಪಡಿಸುವ ಮತ್ತು ಕಡಿಮೆ ಜನಸಂಖ್ಯೆ ಹೊಂದಿರುವ ರಾಜ್ಯಗಳ ಕಳಕಳಿ ಗುರುತಿಸುವ ಕ್ರಮವಾಗಿ, ಮಹಿಳೆಯರಿಗಾಗಿ ಕಾಯ್ದಿರಿಸಲಾದ ಶೇ. 33 ಸೀಟುಗಳನ್ನು ಸಂಸತ್ತಿನಲ್ಲಿ ಪ್ರಸ್ತುತ ಇರುವ ರಾಜ್ಯಗಳ ಸೀಟುಗಳ ಹಂಚಿಕೆಗೆ ಅನುಗುಣವಾಗಿ ಹಂಚಿಕೆ ಮಾಡಬೇಕೆಂದು ಆಗ್ರಹಿಸಿದರು.

ಪ್ರೊ. ಕಾಳಚನ್ನೇಗೌಡ ಮಾತನಾಡಿ, ಪ್ರಸ್ತುತ ರಾಜ್ಯಗಳ ಒಟ್ಟು ಸೀಟುಗಳ ಪಾಲಿಗೆ ಅನುಗುಣವಾಗಿ ಶೇ. 33 ರಷ್ಟು ಸೀಟುಗಳನ್ನು ಹಂಚಿಕೆ ಮಾಡಲು ಹೊಸ ಉಪ ನಿಯಮ ಸೇರಿಸುವ ಮೂಲಕ ಒಕ್ಕೂಟ ವ್ಯವಸ್ಥೆಯ ಹಕ್ಕುಗಳನ್ನು ಖಚಿತ ಪಡಿಸಬೇಕು. ಹಿಂದುಳಿದ ವರ್ಗಗಳು, ಅಲೆಮಾರಿ, ವಿಮುಕ್ತ ಬುಡಕಟ್ಟುಗಳ, ತೃತೀಯ ಲಿಂಗಿಗಳು, ಬೈನರಿ ಅಲ್ಲದ ಮಹಿಳೆಯರಂತಹ ದುರ್ಬಲ, ಸೌಲಭ್ಯ ವಂಚಿತ ಮಹಿಳೆಯರಿಗೆ ಸೀಟುಗಳ ಮೀಸಲಾತಿ ಕಲ್ಪಿಸಬೇಕು ಎಂದು ಒತ್ತಾಯಿಸಿದರು. ಸಬೀಹಾ ಭೂಮಿಗೌಡ, ಎಂ.ಎಸ್. ಸುಮನ, ವಸಂತ, ಶ್ರೀದೇವಿ, ನಾಗವೇಣಿ ಮೊದಲಾದವರು ಇದ್ದರು.

# ಮನೆ ಬಾಗಿಲಿಗೆ ಇ–ಸ್ವತ್ತು

## ಸಮಸ್ಯೆ ನಿವಾರಣೆಗೆ ಸಮಿತಿ ರಚಿಸಿದ ಸಚಿವ ಖಂಡ್ರೆ

**ಬೆಂಗಳೂರು:** ಗ್ರಾಮಸ್ಥರು ಇ–ಸ್ವತ್ತು ಪಡೆಯಲು ಗ್ರಾಮ ಪಂಚಾಯಿತಿ ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸಲು ಮನೆ ಬಾಗಿಲಿಗೇ ಇ–ಸ್ವತ್ತು ತಲುಪಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ್ ಬಿ ಖಂಡ್ರೆ ಮುಂದಾಗಿದ್ದಾರೆ.

ಇ–ಸ್ವತ್ತು ಪ್ರಕ್ರಿಯೆಯ ತೊಡಕುಗಳ ನಿವಾರಣೆಗೆ ಪಂಚ ಸದಸ್ಯರ ಸಮಿತಿ ರಚಿಸಲು ಸಚಿವರು ಇಲಾಖೆಯ ಕಾರ್ಯದರ್ಶಿಗೆ ಲಿಖಿತ ಸೂಚನೆ ನೀಡಿದ್ದಾರೆ.

ತಂತ್ರಾಂಶ ಮತ್ತು ಸರ್ವರ್ ಸಮಸ್ಯೆಯಿಂದ ಸಾವಿರಾರು ಇ–ಸ್ವತ್ತು ಅರ್ಜಿಗಳು ಬಾಕಿ ಇರುವ ಹಿನ್ನೆಲೆಯಲ್ಲಿ ಪಂಚಾಯತ್ ರಾಜ್ ಕಾರ್ಯದರ್ಶಿ ಡಿ.ರಂದೀಪ್ ಅಧ್ಯಕ್ಷತೆಯಲ್ಲಿ ಬೆಂಗಳೂರು, ಮಂಗಳೂರು, ಕಲ್ಬುರ್ಗಿ ಮತ್ತು ಬೆಳಗಾವಿ ಜಿಲ್ಲೆಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳನ್ನು ಒಳಗೊಂಡ ಸಮಿತಿ ರಚಿಸಿ 10 ದಿನಗಳ ಒಳಗೆ ನಿಯಮಗಳಿಗೆ ಯಾವ ಯಾವ ಬದಲಾವಣೆ ಮಾಡಬಹುದು ಎಂಬ ಸ್ಪಷ್ಟ ವರದಿ ನೀಡಲು ಸೂಚಿಸಿದ್ದಾರೆ.

ರಾಜ್ಯದ ಗ್ರಾಮಠಾಣಾ ಪ್ರದೇಶದಲ್ಲಿ ಹಲವು ತಲೆಮಾರುಗಳಿಂದ ವಾಸಿಸುತ್ತಿರುವ ಬಹುತೇಕ ನಿವಾಸಿಗಳ ಬಳಿ ತಮ್ಮ ಸ್ವತ್ತಿನ ದಾಖಲಾತಿಗಳಿಲ್ಲದ ಕಾರಣದಿಂದ ಇ–ಸ್ವತ್ತು ಪಡೆಯಲು ಸಾಧ್ಯವಾಗುತ್ತಿಲ್ಲ.

ಗ್ರಾಮಠಾಣಾ ವ್ಯಾಪ್ತಿಯ ಹೊರಗೆ ಭೂಪರಿವರ್ತಿತ ಮತ್ತು ಭೂಪರಿವರ್ತನೆ ಆಗದ ಕಂದಾಯ ಭೂಮಿಯಲ್ಲಿ ಬಡಾವಣೆ, ಕಟ್ಟಡಗಳು ತಲೆ ಎತ್ತಿದ್ದು, ಬಿ ಖರಾಬು ಮತ್ತು ಗೋಮಾಳದಂತಹ ಸರ್ಕಾರಿ ಭೂಮಿಯನ್ನೂ ಸೇರಿಸಿಕೊಂಡು ಬಡಾವಣೆ ಮಾಡಿರುವ ನಿಟ್ಟಿನಲ್ಲಿ ನಮೂನೆ 11ಬಿ ನೀಡಲೂ ಸಾಧ್ಯವಾಗಿರುವುದಿಲ್ಲ. ಈ ನಿಟ್ಟಿನಲ್ಲಿ ಮೇಲಿನ ಎಲ್ಲ ಸಮಸ್ಯೆ ನಿವಾರಿಸಿ, ಎಲ್ಲ ಗ್ರಾಮೀಣ ಸ್ವತ್ತುಗಳಿಗೂ ಸುಗಮವಾಗಿ ಇ–ಸ್ವತ್ತು ನೀಡುವ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸುವಂತೆ ಈಶ್ವರ ಖಂಡ್ರೆ ಸೂಚಿಸಿದ್ದಾರೆ.

ಮೊದಲ ಆಷಾಢ ಶುಕ್ರವಾರದ ಸಂಭ್ರಮ

# ದೇವಿಗೆ ನಿಂಬೆಹಣ್ಣಿನ ಆರತಿ ಬೆಳಗಿದ ಮಹಿಳೆಯರು

ಚಾಮರಾಜನಗರ,ಮೊದಲ ಆಷಾಢ ಶುಕ್ರವಾರದಂದು ಐತಿಹಾಸಿಕ ದೇವಾಲಯ ಚಾಮರಾಜೇಶ್ವರ ದೇಗುಲದಲ್ಲಿ ಚಾಮುಂಡೇಶ್ವರಿ ದೇವಿಗೆ ಮಹಿಳೆಯರು ನಿಂಬೆಹಣ್ಣಿನ ಆರತಿ ಬೆಳಗಿ, ತುಪ್ಪದ ದೀಪ ಹಚ್ಚಿ ಪ್ರಾರ್ಥನೆ ಸಲ್ಲಿಸಿದರು.

ಆಗಮಿಕರಾದ ನಾಗರಾಜ ದೀಕ್ಷಿತ್ ಅವರು ಆಷಾಢ ಶುಕ್ರವಾರದ ಪ್ರಯುಕ್ತ ದೇವಿಗೆ ಏಕವಾರ ರುದ್ರಾಭಿಷೇಕ, ಫಲಪಂಚಾಮೃತ ಅಭಿಷೇಕ ನೆರವೇರಿಸಿ ಲಲಿತಾ ಸಹಸ್ರನಾಮ, ಖಡ್ಗಮಾಲಾ ಅರ್ಚನೆ ಮಾಡಿ ಕೌಮಾರಿ ಅಲಂಕಾರ ಮಾಡಿದ್ದು ಕಣ್ಮನ ಸೆಳೆಯಿತು.

### ಚಾಮುಂಡೇಶ್ವರಿಗೆ ನಿಂಬೆ ಹಣ್ಣಿನ ಆರತಿ

ಆಷಾಢ ಶುಕ್ರವಾರದಂದು ನಿಂಬೆಹಣ್ಣಿನ ಆರತಿ ಬೆಳಗವುದು ಅತ್ಯಂತ ಶ್ರೇಷ್ಠ ಮತ್ತು ಮಂಗಳಕರ. ಆಷಾಢ ಮಾಸದಲ್ಲಿ ದೇವಿಗೆ ಈ ಆರತಿ ಮಾಡುವುದರಿಂದ ಸಕಲ ಇಷ್ಟಾರ್ಥಗಳು ಈಡೇರಲಿದೆ ಎಂದು ನಾಗರಾಜ ದೀಕ್ಷಿತ್ ತಿಳಿಸಿದರು.



ಅಷಾಢ ಶುಕ್ರವಾರದಂದು ನಿಂಬೆಹಣ್ಣಿನ ಆರತಿ ಬೆಳಗಿದರೆ ಇಷ್ಟಾರ್ಥ ಸಿದ್ಧಿ ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ಸಹಸ್ರಾರು ಮಹಿಳೆಯರು, ಯುವತಿಯರು ನಿಂಬೆಹಣ್ಣಿನ ಆರತಿ ಬೆಳಗಿ ಪ್ರಾರ್ಥನೆ ಸಲ್ಲಿಸಿದರು. ಆಷಾಢ ಶುಕ್ರವಾರವಾದ ಇಂದು ಚಾಮುಂಡೇಶ್ವರಿ ದೇಗುಲಕ್ಕೆ ಭಕ್ತರ ದಂಡೇ ಹರಿದು ಬಂದಿತ್ತು. ದೇವಾಲಯದ ಅಂಗಳದ ತುಂಬಾ ಮಹಿಳೆಯರು ನಿಂಬೆ ಹಣ್ಣಿನಿಂದ ದೀಪ ತಯಾರಿಸಿ ದೇವಿಗೆ ಆರತಿ ಬೆಳಗುತ್ತಿದ್ದ ದೃಶ್ಯ ಗಮನ ಸೆಳೆಯಿತು.

### ಚಾಮುಂಡೇಶ್ವರಿಗೆ ನಿಂಬೆ ಹಣ್ಣಿನ ಆರತಿ

ನಿಂಬೆಹಣ್ಣಿನ ಹೋಳಿನಲ್ಲಿ ತುಪ್ಪ ಹಾಗೂ ಎಣ್ಣೆಯ ದೀಪ ಹಚ್ಚಿ ಚಾಮುಂಡಿಯನ್ನು ವಿಶೇಷವಾಗಿ ಪೂಜಿಸಿ, ಸುಮಂಗಲಿಯರು ಪರಸ್ಪರ ಮಾಂಗಲ್ಯ ಪೂಜೆ ಮಾಡಿಕೊಂಡು, ಶುಭ ಕೋರಿ, ತಮ್ಮ ಮಾಂಗಲ್ಯ ಭಾಗ್ಯ ಗಟ್ಟಿಯಾಗಿರಲೆಂದು ಪ್ರಾರ್ಥಿಸಿದರೆ, ಅವಿವಾಹಿತರು ತಮಗೆ ಒಳ್ಳೆಯ ಪತಿ ದೊರೆತು, ಜೀವನ ಸುಖಮಯವಾಗಿರುವಂತೆ ಬೇಡಿಕೊಂಡರು.

## ನಾಳೆ ಪ್ರತಿಭಾ ಪುರಸ್ಕಾರ



ಮೈಸೂರು: ಎಚ್.ವಿ. ರಾಜೀವ್ ಸ್ನೇಹ ಬಳಗದ ವತಿಯಿಂದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಪುರಸ್ಕರಿಸುವ ಸಾಧನಾ ಪುರಸ್ಕಾರ, ವೃತ್ತಿ ಮಾರ್ಗದರ್ಶನ ಕಾರ್ಯಕ್ರಮ ಜು.19 ರಂದು ಬೆಳಗ್ಗೆ 10.30ಕ್ಕೆ ನಗರದ ಕೃಷ್ಣಮೂರ್ತಿಪುರಂ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಆಯೋಜಿಸಲಾಗಿದೆ ಎಂದು ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಉದ್ಘಾಟಿಸುವರು, ತಾವು ಅಧ್ಯಕ್ಷತೆ ವಹಿಸಲಿದ್ದು, ಶಾಲಾ ಶಿಕ್ಷಣ ಹಾಗೂ ಸಾಕ್ಷರತೆಯ ಉಪ ನಿರ್ದೇಶಕರಾದ ಎಂ.ಪಿ. ನಾಗಮ್ಮ ಮುಖ್ಯ ಅತಿಥಿಗಳಾಗಿರುವರು, ಎನ್. ರವಿಶಂಕರ್, ಆತ್ಮೀಯ ಜೆ. ಕದಂಬ ವೃತ್ತಿ ಮಾರ್ಗದರ್ಶನ ನೀಡುವರು. ಮಧ್ಯಾಹ್ನ 2.30ಕ್ಕೆ ಸಾಧನಾ ಪುರಸ್ಕಾರ ನಡೆಯಲಿದೆ. ಸೋಮನಾಥಾನಂದ ಸ್ವಾಮೀಜಿ, ಡಾ. ಶರತ್‌ಚಂದ್ರ ಸ್ವಾಮೀಜಿ, ಸ್ವಾಮಿ ಯುಕ್ತೇಶಾನಂದಜೀ ಮಹಾರಾಜ್ ಸಾನ್ನಿಧ್ಯ ವಹಿಸುವರು, ತಾವು ಅಧ್ಯಕ್ಷತೆ ವಹಿಸುವುದಾಗಿ ತಿಳಿಸಿದರು. ಈಚಿನ ವರ್ಷಗಳಲ್ಲಿ ದ್ವಿತೀಯ ಪಿಯುಸಿ ಬಳಿಕ ವಿದ್ಯಾರ್ಥಿಗಳು ಸಾಲ ಪಡೆದಾದರೂ ಹೆಚ್ಚಿನ ಶಿಕ್ಷಣ ಪಡೆಯುತ್ತಾರೆ. ಆದರೆ ಬಳಿಕ ಉದ್ಯೋಗ ಸಿಗದೇ ಸಿಕ್ಕ ಕೆಲಸಕ್ಕೆ ಸೇರುತ್ತಾರೆ. ಹೀಗಾಗಿ ಇವರಿಗೆ ಮುಂದಿನ ಬೇಡಿಕೆ ಇರುವ ಕೋರ್ಸ್ ಕುರಿತು ಮಾರ್ಗದರ್ಶನ ನೀಡಬೇಕಾದ ಅಗತ್ಯವಿದೆ. ಈ ನಿಟ್ಟಿನಲ್ಲಿ ಈ ವೇಳೆ ಪರಿಣಿತರಿಂದ ಮಾರ್ಗದರ್ಶನ ನೀಡಲಾಗುವುದು. ಇನ್ನು ಆ ಕಾರ್ಯಕ್ರಮಕ್ಕೆ ಸುಮಾರು 500 ಮಂದಿ ನೋಂದಾಯಿಸಿಕೊಂಡಿದ್ದು, ಅವರೊಡನೆ ಓರ್ವ ಪೋಷಕರು ಆಗಮಿಸಬಹುದಾಗಿದೆ. ಈಗಾಗಲೇ ನೋಂದಣಿ ಮಾಡಿಕೊಳ್ಳದವರಿಗೆ ಕೇವಲ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ ಎಂದರು. ಮಾಜಿ ಮೇಯರ್ ಬಿ.ಎಲ್. ಭೈರಪ್ಪ, ಗೌತಮ್ ಜಾಧವ್, ನಂದೀಶ್ ಮೊದಲಾದವರು ಇದ್ದರು.

**ಬಿಜೆಪಿ ಎಸ್ ಟಿ ಮೋರ್ಚಾದ ರಾಜ್ಯ ಉಪಾಧ್ಯಕ್ಷ ಜಯಸುಂದರ್ ಹುಟ್ಟುಹಬ್ಬ**

## ಆಶ್ರಮದ ವೃದ್ಧರಿಗೆ ಹೋಳಿಗೆ ಭೋಜನ



ಚಾಮರಾಜನಗರ, ಬಿಜೆಪಿ ಎಸ್ ಟಿ ಮೋರ್ಚಾದ ರಾಜ್ಯ ಉಪಾಧ್ಯಕ್ಷ ಬಿ.ಜಯಸುಂದರ್ ಅವರ ಹುಟ್ಟುಹಬ್ಬದ ಅಂಗವಾಗಿ ಬಿಜೆಪಿ ಜಿಲ್ಲಾ ಎಸ್‌ಟಿ ಮೋರ್ಚಾದ ವತಿಯಿಂದ ತಾಲೂಕಿನ ಉತ್ತುವಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಆಶ್ರಮಸೇವಾ ಚಾರಿಟಬಲ್ ಟ್ರಸ್ಟ್‌ನ ವೃದ್ದ ಮತ್ತು ಅನಾಥಾಶ್ರಮ ವೃದ್ಧರಿಗೆ ಹೋಳಿಗೆ ಭೋಜನ ವ್ಯವಸ್ಥೆ ಮಾಡಲಾಯಿತು. ಅಲ್ಲದೆ ಆಶ್ರಮಕ್ಕೆ 3 ಫ್ಯಾನ್, ಆಹಾರ ಪದಾರ್ಥಗಳನ್ನು ವಿತರಿಸಲಾಯಿತು.

ಜಿಲ್ಲಾ ಎಸ್‌ಟಿ ಮೋರ್ಚಾದ ಅಧ್ಯಕ್ಷ ಚಂದ್ರಶೇಖರ್ ಅವರ ನೇತೃತ್ವದಲ್ಲಿ ಹೋಳಿಗೆ ಭೋಜನ ವ್ಯವಸ್ಥೆ. ಮಾಡಲಾಯಿತು. ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಜಿಲ್ಲಾ ಎಸ್‌ಟಿ ಮೋರ್ಚಾದ ಅಧ್ಯಕ್ಷ ಚಂದ್ರಶೇಖರ್ ಮಾತನಾಡಿ, ಬಿಜೆಪಿ ಎಸ್ ಟಿ ಮೋರ್ಚಾದ ರಾಜ್ಯ ಉಪಾಧ್ಯಕ್ಷ ಬಿ.ಜಯಸುಂದರ್ ಅವರ ಹುಟ್ಟುಹಬ್ಬದ ಅಂಗವಾಗಿ ಜಿಲ್ಲಾ ಬಿಜೆಪಿ ಎಸ್‌ಟಿ ಮೋರ್ಚಾದ ವತಿಯಿಂದ ಆಶ್ರಮಸೇವಾ ಚಾರಿಟಬಲ್ ಟ್ರಸ್ಟ್‌ನ ವೃದ್ಧ ಮತ್ತು ಅನಾಥಶ್ರಮ ವೃದ್ಧರಿಗೆ ಹೋಳಿಗೆ ಊಟದ ವ್ಯವಸ್ಥೆ ಮಾಡಲಾಗಿದೆ. ಇಂದು ಆಷಾಢಮಾಸದ ಮೊದಲ ಶುಕ್ರವಾರವಾಗಿದ್ದು, ನಾಡಿನ ಅಧಿದೇವತೆ ಚಾಮುಂಡೇಶ್ವರಿತಾಯಿಗೆ ವಿಶೇಷಪೂಜೆ ಕೈಂಕರ್ಯಗಳು ನಡೆಯುತ್ತಿದ್ದು, ಚಾಮುಂಡೇಶ್ವರಿ ತಾಯಿ ಜಯಸುಂದರ್ ಅವರಿಗೆ ಹೆಚ್ಚಿನ ಆರೋಗ್ಯ, ಆಯಸು ಕರುಣಿಸಿ, ಮುಂದಿನ ದಿನಗಳಲ್ಲಿ ಅವರಿಗೆ ಉನ್ನತ ಮಟ್ಟದ ರಾಜಕೀಯ ಸ್ಥಾನಮಾನ ಸಿಗುವಂತಾಗಲಿ ಎಂದು ಪ್ರಾರ್ಥಿಸಿದರು.

ಈ ಸಂದರ್ಭದಲ್ಲಿ ಆಶ್ರಮ ಸೇವಾ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ರಮೇಶ್ ಪ್ರಭು, ಜಿಲ್ಲಾ ಬಿಜೆಪಿ ಎಸ್ಟಿ ಮೋರ್ಚಾದ ಉಪಾಧ್ಯಕ್ಷ ಶಿವಕುಮಾರ್, ಕೋಶಾಧ್ಯಕ್ಷ ರಘು, ಜಿಲ್ಲಾ ಕಾರ್ಯಕಾರಿಣಿ ಸದಸ್ಯ ನಾಗೇಶ್ ಮಾಸ್ಟರ್, ರಾಘವಾ ವಾಲ್ಮೀಕಿ,, ಹೇಮಂತ್, ಮಂಜುಭಕ್ತ, ವಿಶ್ವ, ಹರದನಹಳ್ಳಿಕೃಷ್ಣ, ಬಂಗಾರು, ಪ್ರಭು, ಸಾಗರ್, ಶಶಿ, ಚೇತನ್, ಅಜಿತ್, ನವೀನ್ ಇತರರು ಹಾಜರಿದ್ದರು.

## ಪ್ರಥಮ ಅಧಿವೇಶನದ ಇಲಾಖಾ ಪರೀಕ್ಷೆ ಕೇಂದ್ರದ ಸುತ್ತಲೂ ನಿಷೇದಾಜ್ಞೆ

ಮೈಸೂರು:- 2026ನೇ ಸಾಲಿನ ಪ್ರಥಮ ಅಧಿವೇಶನದ ಇಲಾಖಾ ಪರೀಕ್ಷೆಗಳು ಜುಲೈ 17 ರಿಂದ ಜುಲೈ 31 ರವರೆಗೆ ನಗರದ 02 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದ್ದು, ಸದರಿ ಪರೀಕ್ಷೆಗಳನ್ನು ಸುಸೂತ್ರವಾಗಿ ನಡೆಸುವ ಉದ್ದೇಶದಿಂದ ಹಾಗೂ ಪರೀಕ್ಷಾ ಕೇಂದ್ರದ ವ್ಯಾಪ್ತಿಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ತಡೆಯಲು ಸೂಕ್ತ ಬಂದೋಬಸ್ತ್ ವ್ಯವಸ್ಥೆ ಹಾಗೂ ಪರೀಕ್ಷಾ ಕೇಂದ್ರದ 200 ಮೀಟರ್ ವ್ಯಾಪ್ತಿ ಪ್ರದೇಶದ ಸುತ್ತಲೂ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ-2023 ಸೆಕ್ಷನ್ 163 ರೀತ್ಯ ನಿಷೇಧಾಜ್ಞೆಯನ್ನು ಜಾರಿಗೊಳಿಸಲಾಗಿದೆ. ಪರೀಕ್ಷಾ ಕೇಂದ್ರಗಳು:- ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ) ಜೆಎಲ್‌ಬಿ ರಸ್ತೆ, ಲಕ್ಷ್ಮಿಪುರಂ, ಸರ್ಕಾರಿ ಆದರ್ಶ ವಿದ್ಯಾಲಯ, ಜಾಕಿ ಕ್ವಾಟ್ರಸ್ ನಜ್ಜರ್‌ಬಾದ್ ಪರೀಕ್ಷಾ ಕೇಂದ್ರಗಳಾಗಿವೆ.

## ಗೃಹಜ್ಯೋತಿ ಪರಿಶೀಲನಾ ಕಾರ್ಯ



ಮಡಿಕೇರಿ:-ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹಜ್ಯೋತಿ ಯೋಜನೆಯ ಫಲಾನು ಭವಿಗಳ ಮನೆ ಮನೆ ದಾಖಲೆ ಪರಿಶೀಲನಾ ಕಾರ್ಯವು ಈಗಾಗಲೇ ಆರಂಭಗೊಂಡಿದೆ.

ಸೆಸ್ಕ್ ವ್ಯಾಪ್ತಿಯ ನೌಕರರು ಗ್ರಾಹಕರ ಮನೆ ಮನೆಗೆ ಭೇಟಿ ನೀಡಿ ಮಾಹಿತಿ ಪಡೆಯಲಿದ್ದಾರೆ. ಗೃಹಜ್ಯೋತಿ ಯೋಜನೆಯ ಅರ್ಹತೆ ಮರುಪರಿಶೀಲಿಸುವ ಉದ್ದೇಶದಿಂದ ಇಂಧನ ಇಲಾಖೆ ಈ ಮಹತ್ವದ ಕಾರ್ಯಕ್ಕೆ ಮುಂದಾಗಿದೆ.

ಗ್ರಾಹಕರ ಮೂಲ ದಾಖಲೆಗಳನ್ನು ಸ್ಥಳದಲ್ಲಿಯೇ ಪರಿಶೀಲಿಸಿ ಬಳಿಕ ವಿಶೇಷ ಮೊಬೈಲ್ ಆಪ್ ಹಾಗೂ ಅಧಿಕೃತ ಘೋಷಣಾ ಪತ್ರದ ಮೂಲಕ ಹೊಸದಾಗಿ ಮಾಹಿತಿ ಸಂಗ್ರಹಿಸಿ ಅರ್ಜಿ ಭರ್ತಿ ಮಾಡುವ ಪ್ರಕ್ರಿಯೆಯನ್ನು ಸ್ಥಳದಲ್ಲಿಯೇ ಪೂರ್ಣಗೊಳಿಸುತ್ತಿದ್ದಾರೆ. ಈ ಪ್ರಕ್ರಿಯೆಗೆ ಮೀಟರ್ ರೀಡರ್ ಮೂಲಕ ಸ್ಥಳದಲ್ಲಿಯೇ ತಪಾಸಣೆ ಮಾಡುವುದು ಏಕೈಕ ಮಾರ್ಗವಾಗಿದ್ದು, ಸಾರ್ವಜನಿಕರು ಸೆಸ್ಕ್ ಸಿಬ್ಬಂದಿಗೆ ಮಾಹಿತಿ ನೀಡುತ್ತಿದ್ದಾರೆ.

ಮನೆ ಮನೆಗೆ ಭೇಟಿ ಸಂದರ್ಭದಲ್ಲಿ ಫಲಾನುಭವಿಗಳು ಆಧಾರ್ ಕಾರ್ಡ್ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ, ಮತದಾರರ ಗುರುತಿನ ಚೀಟಿ ಪಾನ್ ಕಾರ್ಡ್, ರೇಷನ್ ಕಾರ್ಡ್, ಪಡಿತರ ಚೀಟಿ ಮತ್ತಿತರ ದಾಖಲೆಗಳನ್ನು ನೀಡಿ ಗೃಹಜ್ಯೋತಿ ಯೋಜನೆ ಪರಿಷ್ಕರಣಾ ಕಾರ್ಯಕ್ಕೆ ಕೈಜೋಡಿಸುವ ಕಾರ್ಯ ನಡೆದಿದೆ ಎಂದು ಸೆಸ್ಕ್ ಇಇ ರಾಮಚಂದ್ರ ಅವರು ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಗೃಹಜ್ಯೋತಿ ಯೋಜನೆ ಪಡೆದಿರುವ 1,47,812 ಕುಟುಂಬಗಳಲ್ಲಿ 31,255 ಕುಟುಂಬಗಳ ಸರ್ವೆ ಕಾರ್ಯ ನಡೆದಿದ್ದು, ಶೇ.21.15 ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ಸೆಸ್ಕ್ ಇಇ ರಾಮಚಂದ್ರ ಅವರು ಮಾಹಿತಿ ನೀಡಿದ್ದಾರೆ.

## ಬೇಟೆಗೆ ಸಜ್ಜಾಗಿದ್ದ ನಾಲ್ವರ ಬಂಧನ



ಗುಂಡ್ಲುಪೇಟೆ: ಕಾಡು ಪ್ರಾಣಿಗಳ ಬೇಟೆಗೆ ಅಕ್ರಮವಾಗಿ ನಾಡ ಬಂದೂಕುಗಳನ್ನು ಸಾಗಿಸುತ್ತಿದ್ದ ನಾಲ್ವರನ್ನು ತೆರಕಣಾಂಬಿ ಪೊಲೀಸರು ಬಂಧಿಸಿದ್ದು, ಅವರಿಂದ ಮೂರು ಬಂದೂಕುಗಳು, 18 ಕಾರ್ಟ್ರಿಜ್ ಗುಂಡುಗಳು, ಎರಡು ಚಾಕುಗಳು ಹಾಗೂ ಒಂದು ಕಾರನ್ನು ವಶಪಡಿಸಿಕೊಂಡಿದ್ದಾರೆ.

ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕಿನ ಕೂಗೂರು ಗ್ರಾಮದ ಕುಮಾರಪ್ಪ, ಸುನೀಲ್, ದಿನೇಶ್ ಹಾಗೂ ಕಾಂತ ಎಂಬ ನಾಲ್ವರು ಬಂಧಿತ ಆರೋಪಿಗಳು. ತೆರಕಣಾಂಬಿ ಪೊಲೀಸ್ ಠಾಣೆಯ ಆರಕ್ಷಕ ಉಪನಿರೀಕ್ಷಕ ಜವರೇಗೌಡ ಹಾಗೂ ಅಪರಾಧ ವಿಭಾಗದ ಸಿಬ್ಬಂದಿಗಳು ಪೊಲೀಸ್ ಠಾಣೆ ಮುಂಭಾಗ ವಾಹನಗಳನ್ನು ತಪಾಸಣೆ ನಡೆಸುತ್ತಿದ್ದ ವೇಳೆ ಮಾರುತಿ ಓಮ್ನಿ ಕಾರು ಅನ್ನು ತಡೆದು ಪರಿಶೀಲಿಸಿದರು. ಈ ವೇಳೆ ವಾಹನದಲ್ಲಿ ಕಾಡು ಪ್ರಾಣಿಗಳ ಬೇಟೆಗೆ ಬಳಸಲಾಗುತ್ತಿದ್ದ ಎರಡು ಒಂಟಿ ನಳಿಕೆಯ ಬಂದೂಕುಗಳು, ಒಂದು ನಾಡ ಬಂದೂಕು, ಪ್ಲಾಸ್ಟಿಕ್ ಕವರ್‌ನಲ್ಲಿದ್ದ 18 ಕಾರ್ಟ್ರಿಜ್ ಗುಂಡುಗಳು ಹಾಗೂ ಎರಡು ಕಬ್ಬಿಣದ ಚಾಕುಗಳು ಪತ್ತೆಯಾಗಿವೆ. ತಕ್ಷಣ ಆರೋಪಿಗಳನ್ನು ಬಂಧಿಸಿದ್ದಾರೆ.

ಈ ಸಂಬಂಧ ತೆರಕಣಾಂಬಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

# ಮೇಕೆದಾಟು ಯೋಜನೆಗೆ ಒತ್ತಾಯ

## ವಾಟಾಳ್ ನಾಗರಾಜ್‌ರಿಂದ ಖಾಲಿ ಬಿಂದಿಗೆಗಳೊಂದಿಗೆ ಪ್ರತಿಭಟನೆ



ರಾಮನಗರ: ಮೇಕೆದಾಟು ಯೋಜನೆ ವಿಚಾರದಲ್ಲಿ ರಾಜಕೀಯ ಸಲ್ಲದು, ಯೋಜನೆ ವಿಚಾರದಲ್ಲಿ ರಾಜ್ಯ ಸರ್ಕಾರ ಮತ್ತು ತಮಿಳುನಾಡು ಸರ್ಕಾರ ಕನ್ನಡಿಗರಿಗೆ ಮೋಸ ಮಾಡುತ್ತಿವೆ ಎಂದು ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಹೇಳಿದರು.

ಮೇಕೆದಾಟು ಯೋಜನೆ ಜಾರಿಗೆ ಆಗ್ರಹಿಸಿ ನಗರದ ಐಜೂರು ವೃತ್ತದಲ್ಲಿ ಖಾಲಿ ಬಿಂದಿಗೆಗಳ ಚಳವಳಿಯ ವೇಳೆ ಅವರು ಮಾತನಾಡಿದರು. ಪ್ರತಿಭಟನೆಕಾರರು ಖಾಲಿ ಬಿಂದಿಗೆ ಹಿಡಿದು ರಾಜ್ಯ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕುಡಿಯುವ ನೀರಿನ ಯೋಜನೆಗೆ ಯಾರು ಅಡ್ಡಿಪಡಿಸಬಾರದು, ತಮಿಳುನಾಡು ಮುಖ್ಯಮಂತ್ರಿ ಜೋಸೆಫ್ ವಿಜಯ್ ಯಾವುದೇ ಕಾರಣಕ್ಕೂ ಮೇಕೆದಾಟು ಯೋಜನೆಗೆ ವಿರೋಧ ಮಾಡಬಾರದು. ಮೇಕೆದಾಟು ಯೋಜನೆಯಿಂದ ಬೆಂಗಳೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ಕುಡಿಯುವ ನೀರು ಲಭಿಸಲಿದೆ. ಈ ವಿಚಾರದಲ್ಲಿ ರಾಜಕೀಯ ಸಲ್ಲದು ಎಂದರು.

ಮೇಕೆದಾಟು ಯೋಜನೆ ಸಂಬಂಧ ತಮಿಳುನಾಡು ಹಾಗೂ ರಾಜ್ಯ ಸರ್ಕಾರ ಕನ್ನಡಿಗರಿಗೆ ಮೋಸ ಮಾಡುತ್ತಿದೆ. ಮೇಕೆದಾಟು ಜಾರಿ ಸಂಬಂಧ ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮ, ಮೀಸಲಿಟ್ಟ ಹಣ, ನೀಲನಕ್ಷೆ ವಿಚಾರದಲ್ಲಿ ಸ್ಪಷ್ಟತೆ ಇಲ್ಲ. ಮೇಕೆದಾಟು ಸ್ಥಳ ಗುರುತಿಸಿರುವ ಕುರಿತು ಮಾಹಿತಿ ಬಹಿರಂಗ ಪಡಿಸಬೇಕು ಎಂದು ಆಗ್ರಹಿಸಿದರು.

ಮೇಕೆದಾಟು ಯೋಜನೆ ಜಾರಿಗೆ ಬಂದರೆ, ಮುಳುಗುವ ಪ್ರದೇಶ, ಪ್ರಾಣಿಗಳಿಗೆ ಆಗುವ ಅನುಕೂಲ ಎಲ್ಲವನ್ನು ರಾಜ್ಯ ಸರ್ಕಾರ ಗಮನಿಸಿ, ಯಾರಿಗೂ ಅನ್ಯಾಯವಾಗದಂತೆ ಅರಣ್ಯ ನಷ್ಟವಾಗದಂತೆ ಮೇಕೆದಾಟು ಜಾರಿ ಮಾಡಬೇಕು ಎಂದರು.

ಮೇಕೆದಾಟು ಜಾರಿ ಸಂಬಂಧ ಕನ್ನಡ ಪರ ಸಂಘಟನೆಗಳು ಸುಮ್ಮನೆ ಕೂರುವ ಮಾತೇ ಇಲ್ಲ. ತಮಿಳುನಾಡು ಹಾಗೂ ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಲಾಗುತ್ತದೆ ಎಂದರು ಎಚ್ಚರಿಕೆ ನೀಡಿದರು. ಪ್ರತಿಭಟನೆಯ ವೇಳೆ ಕರುನಾಡ ಸೇನೆ ರಾಜ್ಯ ಉಪಾಧ್ಯಕ್ಷ ಎಂ.ಜಗದೀಶ್ ಐಜೂರು. ಮುಖಂಡರಾದ ಗಂಗಾಧರ್, ಜಿಲ್ಲಾಧ್ಯಕ್ಷ ಸಿ.ಎಸ್. ಜಯಕುಮಾರ್ ಪುಷ್ಪಲತಾ, ಕೆ.ಜಯರಾಜು, ಕೆಂಪರಾಜು, ಕುಮಾರ್, ಸಿ.ಎಂ.ವಿಜಯಕುಮಾರ್, ಪಿ.ಸುರೇಶ್, ಪಾರ್ಥಸಾರಥಿ ಮುಂತಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

### ಬಿಡದಿ ಸಮಗ್ರ ಉಪನಗರ ಯೋಜನೆಗೂ ವಿರೋಧ

**ಬಿಡದಿ ರೈತರ ಹೋರಾಟಕ್ಕೆ ಸಂಪೂರ್ಣ ನಮ್ಮ ಬೆಂಬಲ ಇದೆ. ರಾಜ್ಯ ಸರ್ಕಾರ ಯಾವುದೇ ಕಾರಣಕ್ಕೂ ಬಿಡದಿ ಸಮಗ್ರ ಉಪನಗರ ಯೋಜನೆಯನ್ನು ಜಾರಿಗೆ ತರುವುದು ಬೇಡ. ಜೆಸಿಬಿ ಸಂಸ್ಕೃತಿಯ ದರ್ಬಾರು, ಸರ್ವಾಧಿಕಾರ ಹಾಗೂ ಸಾಮಾನ್ಯ ಜನರ ಮೇಲೆ ನಡೆಯುತ್ತಿರುವ ದರ್ಪ ನಿಲ್ಲಬೇಕು ಎಂದು ಆಗ್ರಹಿಸಿದರು.**

## ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭ

ಗುಂಡ್ಲುಪೇಟೆ: ಪಟ್ಟಣದ ಜೆಎಸ್‌ಎಸ್ ಪ್ರೌಢ ಶಾಲೆಯಲ್ಲಿ 2026-27ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಖ್ಯಾತ ವನ್ಯಜೀವಿ ಛಾಯಾಗ್ರಾಹಕ ಆರ್.ಕೆ. ಮಧು ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿ ಸಂಘವು ವಿದ್ಯಾರ್ಥಿಗಳಲ್ಲಿ ನಾಯಕತ್ವ, ಜವಾಬ್ದಾರಿ ಹಾಗೂ ಸಂಘಟನಾ ಕೌಶಲ್ಯ ಗಳನ್ನು ಬೆಳೆಸುವ ಮಹತ್ವದ ವೇದಿಕೆಯಾಗಿದೆ ಎಂದು ತಿಳಿಸಿದರು. ಶಿಕ್ಷಣವು ಪ್ರತಿಯೊಬ್ಬರ ಜೀವನದಲ್ಲಿ ಯಶಸ್ಸಿನ ಅಡಿಪಾಯವಾಗಿದ್ದು, ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ವ್ಯಕ್ತಿತ್ವ ವಿಕಸನಕ್ಕೂ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಜೆಎಸ್‌ಎಸ್ ಮಹಿಳಾ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಮಲ್ಲಪ್ಪ ಮಾತನಾಡಿ, ವಿದ್ಯಾರ್ಥಿಗಳ ಸಮಗ್ರ ಬೆಳವಣಿಗೆಗೆ ಪಠ್ಯೇತರ ಹಾಗೂ ಕ್ರೀಡಾ ಚಟುವಟಿಕೆಗಳು ಅಗತ್ಯವಾಗಿದ್ದು, ಅವುಗಳಿಗೆ ವಿದ್ಯಾರ್ಥಿ ಸಂಘವು ಪ್ರಮುಖ ವೇದಿಕೆಯಾಗುತ್ತದೆ ಎಂದು ಹೇಳಿದರು.

ಶಾಲೆಯ ಮುಖ್ಯ ಶಿಕ್ಷಕ ಎಚ್.ಪಿ. ಪಶುಪತಿ ಮಾತನಾಡಿ, ಸುತ್ತೂರು ಶ್ರೀಮಠವು ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ದೊರಕುವ ಉದ್ದೇಶದಿಂದ ತಾಲೂಕಿನಾದ್ಯಂತ ಹಲವು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದು, ಶಿಕ್ಷಣ ಕ್ಷೇತ್ರದಲ್ಲಿ ವಿಶಿಷ್ಟ ಸೇವೆ ಸಲ್ಲಿಸುತ್ತಿದೆ. ಶ್ರೀಗಳ ಆಶಯದಂತೆ ವಿದ್ಯಾರ್ಥಿಗಳು ಶಿಕ್ಷಣದ ಮೂಲಕ ತಮ್ಮ ಜೀವನವನ್ನು ರೂಪಿಸಿಕೊಂಡು ಸಮಾಜಕ್ಕೆ ಉತ್ತಮ ಪ್ರಜೆಗಳಾಗಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ದೈಹಿಕ ಶಿಕ್ಷಣ ಶಿಕ್ಷಕ ರಾಜಶೇಖರಪ್ಪ, ಶಿಕ್ಷಕರಾದ ಜಯಶ್ರೀ, ಮೋನಿಕಾ, ಸ್ಫೂರ್ತಿ ಸೇರಿದಂತೆ ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



## ಭಾರಿ ವಾಹನಗಳ ಸಂಚಾರ ನಿಯಂತ್ರಿಸಿ





ರಾಮನಗರ: ನಗರದೊಳಗೆ ಭಾರಿ ವಾಹನಗಳ ಸಂಚಾರವನ್ನು ತಕ್ಷಣ ನಿಯಂತ್ರಿಸುವಂತೆ ಎಸ್.ಡಿ.ಪಿ.ಐ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಸಂಚಾರ ವಿಭಾಗದ ಪೊಲೀಸರಿಗೆ ಮನವಿ ಮಾಡಿದ್ದು, ಕ್ರಮ ಕೈಗೊಳ್ಳದಿದ್ದರೆ ಪ್ರತಿಭಟನೆಯನ್ನು ಹಮ್ಮಿಕೊಳ್ಳುವುದು ಅನಿವಾರ್ಯ ಎಂದು ಕಾರ್ಯಕರ್ತರು ತಿಳಿಸಿದ್ದಾರೆ.

ರಾಮನಗರ ನಗರದ ವಸತಿ ಹಾಗೂ ವಾಣಿಜ್ಯ ಪ್ರದೇಶಗಳಲ್ಲಿ ಮಣ್ಣು ಮತ್ತು ಕಲ್ಲು ಸಾಗಿಸುವ 10 ಹಾಗೂ 12 ಚಕ್ರಗಳ ಭಾರೀ ಲಾರಿಗಳ ನಿರಂತರ ಸಂಚಾರದಿಂದ ಅಪಾರ ಪ್ರಮಾಣದ ಧೂಳು ಹರಡುತ್ತಿದ್ದು, ಮನೆಗಳು, ಅಂಗಡಿಗಳು, ಶಾಲೆಗೆ ತೆರಳುವ ಮಕ್ಕಳು ಹಾಗೂ ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ.

ಈ ಗಂಭೀರ ಸಮಸ್ಯೆಯನ್ನು ಸ್ಥಳೀಯ ಪೊಲೀಸ್ ಇಲಾಖೆಯ ಗಮನಕ್ಕೆ ಹಲವು ಬಾರಿ ತಂದಿದ್ದರೂ, ಇದುವರೆಗೆ ಯಾವುದೇ ಪರಿಣಾಮಕಾರಿ ಕ್ರಮ ಕೈಗೊಳ್ಳಲಾಗಿಲ್ಲ. ನಗರದೊಳಗಿನ ಭಾರೀ ಲಾರಿಗಳ ಸಂಚಾರವನ್ನು ತಕ್ಷಣವೇ ನಿಲ್ಲಿಸಿ ಸಾರ್ವಜನಿಕರ ಆರೋಗ್ಯ ಹಾಗೂ ಸುರಕ್ಷತೆಯನ್ನು ಕಾಪಾಡುವಂತೆ ಎಸ್‌ಡಿಪಿಐ ರಾಮನಗರ ವಿಧಾನಸಭೆ ಘಟಕ ಒತ್ತಾಯಿಸುತ್ತದೆ. ಕೂಡಲೇ ಕ್ರಮ ಕೈಗೊಳ್ಳದಿದ್ದಲ್ಲಿ, ಎಸ್‌ಡಿಪಿಐ ರಾಮನಗರ ವಿಧಾನಸಭೆ ಘಟಕ ಸಾರ್ವಜನಿಕರೊಂದಿಗೆ ಸೇರಿ ಉಗ್ರ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಸ್.ಡಿ.ಪಿ.ಐ ಎಚ್ಚರಿಸಿದೆ.

## ತ್ಯಾಜ್ಯ ವಾಹನಗಳ ವಿರುದ್ಧ ಆಕ್ರೋಶ



ರಾಮನಗರ: ದುರ್ವಾಸನೆ ಬೀರು ತ್ಯಾಜ್ಯವನ್ನು ಸಾಗಿಸುವ ವಾಹನಗಳಿಂದಾಗಿ ಆಗುತ್ತಿರುವ ಕಿರಿಕಿರಿಯನ್ನು ತಪ್ಪಿಸುವಂತೆ ನಗರದ ವರ್ತಕರು ಮತ್ತು ಸಾರ್ವಜನಿಕರು ನಗರಸಭೆಗೆ ಮನವಿ ಸಲ್ಲಿಸಿದ್ದಾರೆ.

ಸತ್ತ ಕೋಳಿ ತ್ಯಾಜ್ಯ ಮತ್ತು ಇತರೆ ದುರ್ವಾಸನೆ ಬೀರುವ ತ್ಯಾಜ್ಯವನ್ನು ಹೊತ್ತ ವಾಹನಗಳು ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸುತ್ತವೆ. ತ್ಯಾಜ್ಯದಿಂದ ಹೊರಬರುವ ದುರ್ವಾಸನೆಯಿಂದ ವರ್ತಕರು ಮತ್ತು ಗ್ರಾಹಕರಿಗೆ ತುಂಬಾ ಕಿರಿಕಿರಿಯಾಗುತ್ತಿದೆ. ದಿನನಿತ್ಯ 50 ರಿಂದ 60 ಲಗ್ಗೇಜ್ ಆಟೋಗಳು ಮತ್ತು ಏಸ್ ವಾಹನಗಳು ದುರ್ವಾಸನೆ ಬೀರುವ ತ್ಯಾಜ್ಯವನ್ನು ಸಾಗಿಸುತ್ತಿವೆ. ಹೀಗೆ ವಾಹನಗಳು ಸಾಗುವಾಗ ಅವುಗಳಿಂದ ಸೂಸುವ ದುರ್ವಾಸನೆ ಅನೇಕರಿಗೆ ವಾಕರಿಕೆ ತರಿಸುತ್ತಿದೆ. ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಂಭವ ಹೆಚ್ಚು. ದುರ್ವಾಸನೆ ಸೂಸದಂತೆ ಯಾವ ಮುನ್ನೆಚ್ಚರಿಕೆಯ ಕ್ರಮಗಳನ್ನು ವಾಹನಗಳಲ್ಲಿ ಕೈಗೊಂಡಿರುವುದಿಲ್ಲ. ಹೀಗಾಗಿ ಇಂತಹ ವಾಹನಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಂಡು ನಾಗರೀಕರ ಆರೋಗ್ಯವನ್ನು ಕಾಪಾಡಬೇಕು ಎಂದು ಮನವಿ ಮಾಡಿರುವುದಾಗಿ ಮುಖ್ಯರಸ್ತೆ ಸೇರಿದಂತೆ ವಿವಿಧ ರಸ್ತೆಗಳಲ್ಲಿನ ವರ್ತಕರು ತಿಳಿಸಿದ್ದಾರೆ.

**ಹನೂರು ವಿಧಾನಸಭಾ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಶಾಸಕ ಮಂಜುನಾಥ್ ಚಾಲನೆ**

# 9.80 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ



ಹನೂರು: ಹನೂರು ವಿಧಾನಸಭಾ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ 9.80 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಮಂಜುನಾಥ್ ಚಾಲನೆ ನೀಡಿದರು.

ನಂತರ ಮಾತನಾಡಿದ ಶಾಸಕರು, ಮಲೆ ಮಹದೇಶ್ವರ ಬೆಟ್ಟದಲ್ಲಿ ನಡೆದ ಸಚಿವ ಸಂಪುಟ ಸಭೆಯ ನಿರ್ಣಯದಂತೆ ಲೋಕೋಪಯೋಗಿ ಇಲಾಖೆಯಿಂದ ಮಂಜೂರಾದ ಅನುದಾನದ ಭಾಗವಾಗಿ, ಸುಮಾರು 9.50 ಕೋಟಿ ವೆಚ್ಚದ ಡಾಂಬರ್ ರಸ್ತೆ, ಸಿಸಿ ರಸ್ತೆ, ಚರಂಡಿ ಹಾಗೂ ಸೇತುವೆ ನಿರ್ಮಾಣ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ.

ಈ ಅನುದಾನದಲ್ಲಿ ನಾಲ್ ರೋಡ್‌ನಿಂದ ಮಾರ್ಟಳ್ಳಿವರೆಗೆ 3.5 ಕಿ.ಮೀ ರಸ್ತೆ ಮರು ಡಾಂಬರೀಕರಣ, ನಾಲ್ ರೋಡ್, ಸಂದನಪಾಳ್ಯ, ಸುಳುವಾಡಿ, ಮೆಟ್ಟುತೆರು ಹಾಗೂ ಹಳೆ ಮಾರ್ಟಳ್ಳಿ ಗ್ರಾಮಗಳಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಅಲ್ಲದೆ, ಎಲಚಿಕೆರೆ ಗ್ರಾಮದಲ್ಲಿ ?30 ಲಕ್ಷ ವೆಚ್ಚದಲ್ಲಿ ಸೇತುವೆ ನಿರ್ಮಾಣ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನವನ್ನು ಬಳಸಿಕೊಳ್ಳಲಾಗುತ್ತಿದೆ.

ಅರಣ್ಯ ಇಲಾಖೆಯ ಸರ್ವೆ ಕಾರ್ಯ ನಡೆಯುತ್ತಿದೆ. ಈ ಸರ್ವೇ ವರದಿಯ ಆಧಾರದ ಮೇಲೆ ಚೆಕ್ ಡ್ಯಾಂಗಳ ನೀರು ಸಂಗ್ರಹ ಸಾಮರ್ಥ್ಯವನ್ನು ಹೆಚ್ಚಿಸುವ ಉದ್ದೇಶದಿಂದ ಹೊಸ ಯೋಜನೆಗಳನ್ನು ರೂಪಿಸಲಾಗುವುದು. ತಾಲೂಕಿನಾದ್ಯಂತ ಜಲ ಸಂಗ್ರಹಣೆಗೆ ಅವಕಾಶವಿರುವ ಪ್ರದೇಶಗಳಲ್ಲಿ ಅಗತ್ಯ ಕಾಮಗಾರಿಗಳನ್ನು ಕೈಗೊಳ್ಳುವ ಮೂಲಕ ನೀರಿನ ಸಂರಕ್ಷಣೆಗೂ ಆದ್ಯತೆ ನೀಡಲಾಗುವುದು

ಮಾರ್ಟಳ್ಳಿ ಇತಿಹಾಸದಲ್ಲೇ ಈ ಹಿಂದೆ ಕಂಡಿರದ ಅಭಿವೃದ್ಧಿ ಕಾಮಗಾರಿಗಳು ಮುಂದಿನ ದಿನಗಳಲ್ಲಿ ನಡೆಯಲಿವೆ. ನಮ್ಮ ವಿರುದ್ಧ ಟೀಕೆ ಮತ್ತು ಅಪಪ್ರಚಾರ ಮಾಡುವವರಿಗೆ ನಮ್ಮ ಅಭಿವೃದ್ಧಿ ಕಾರ್ಯಗಳೇ ಉತ್ತರವಾಗಲಿವೆ ಎಂದು ಅವರು ಹೇಳಿದರು. ಈ ಸಮಯದಲ್ಲಿ ಲೋಕೋಪಯೋಗಿ ಇಲಾಖೆಯ ಎಇಇ ಚಿನ್ನಣ್ಣ, ಕೆ ಆರ್ ಐಡಿಎಲ್ ಇಂಜಿನಿಯರ್ ಕಾರ್ತಿಕ್, ಮಾಜಿ ತಾಲೂಕು ಪಂಚಾಯತ್ ಸದಸ್ಯರಾದ ಮಣಿ, ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರಾದ ಮಂಜೇಶ್ ಗೌಡ, ಡಿ ಆರ್ ಹಾರ್ಡ್ವೇರ್ ಸೀನಣ್ಣ, ಬಾಲಯ್ಯ, ಪೌಲ್ ರಾಜ್, ಅಂತೋನಿಸ್ವಾಮಿ, ಕಾಶಿಮ್, ಜೋಸೆಫ್, ಚಾರ್ಲ್ಸ್, ವಿನೋದ್, ಡೇವಿಡ್, ತಿರುಪತಿ, ಹೂಗ್ಯಾಮ್ ಗ್ರಾಮ ಪಂ ಮಾಜಿ ಅಧ್ಯಕ್ಷರಾದ ಮುರುಗೇಶ್, ಸೆಲ್ವಮ್ ,ಜಪಮಾಲೆ, ಪಳನಿಸ್ವಾಮಿ, ವಿಜಯ್ ಕುಮಾರ್, ಡಿ ಕೆ ರಾಜು, ಎಸ್ ಆರ್ ಮಹದೇವ್, ಮಹೇಶ್, ರಾಜೇಂದ್ರ, ಸೆಂಥಿಲ್,,ಸೇರಿದಂತೆ ಇನ್ನಿತರರು ಇದ್ದರು...

## ವಿದ್ಯುತ್ ವ್ಯತ್ಯಯ

ಮೈಸೂರು:- ಚಾಮುಂಡಿಪುರಂ ಹಾಗೂ ಜ್ಯೋತಿನಗರ ಉಪವಿಭಾಗದ ವ್ಯಾಪ್ತಿಯಲ್ಲಿ ಭೂಗತ ಕೇಬಲ್ ಕಾಮಗಾರಿಯನ್ನು ನಿಮಿತ್ತ ಜುಲೈ 18 ಮತ್ತು 20 ಹಾಗೂ 21 ರಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ವಿದ್ಯಾರಣ್ಯಪುರಂ 1ನೇ ಮೇನ್, ಕನಕಗಿರಿ ಸರ್ಕಾರಿ ಶಾಲೆ 100 ಕೆ.ವಿ.ಎ ಪರಿವರ್ತಕದ ಸುತ್ತ-ಮುತ್ತ, ಗುಂಡುರಾವ್‌ನಗರ, ಮುನೇಶ್ವರನಗರ ಹಾಗೂ ಸುತ್ತ-ಮುತ್ತಲಿನ ಪ್ರದೇಶಗಳು. ಮತ್ತು ಜುಲೈ 20 ರಂದು ವಿದ್ಯಾರಣ್ಯಪುರಂ 4ನೇ ಮೇನ್ 3ನೇ ಕ್ರಾಸ್ ಮತ್ತು 13ನೇ ಕ್ರಾಸ್ ಸುತ್ತ-ಮುತ್ತಾ, ಸೆಂಟ್ ಥಾಮಸ್ ಶಾಲೆ, ಚಾಮುಂಡಿವನ ಹಾಗೂ ಸುತ್ತ-ಮುತ್ತಲಿನ ಪ್ರದೇಶಗಳು.

ಜುಲೈ 18 ಹಾಗೂ 20 ರಂದು ರಾಘವೇಂದ್ರನಗರ, ಕೆ.ವಿ ಶಾಲೆ, ಸ್ಲಂ ರಸ್ತೆ, ಜ್ಯೋತಿ ಶಾಲೆ, ಶಬ್ಧ ಎಲೆಕ್ಟ್ರಿಕಲ್ಸ್ ಹಾಗೂ ಸುತ್ತ-ಮುತ್ತಲಿನ ಪ್ರದೇಶಗಳು ಮತ್ತು ಜುಲೈ 20 ರಂದು ಕಾವೇರಿ ರಸ್ತೆ, ಗಿರಿಯಾ ಭೋವಿ ಪಾಳ್ಯ, ಯರಗನಹಳ್ಳಿ, ದೇವೇಗೌಡ ವೃತ್ತ ಹಾಗೂ ಸುತ್ತ-ಮುತ್ತಲಿನ ಪ್ರದೇಶಗಳು ಹಾಗೂ ಜುಲೈ 21 ರಂದು ಜ್ಯೋತಿನಗರ ಕೆ.ಇ.ಬಿ ಕ್ವಾಟರ?ಸ್, ಶಕ್ತಿನಗರ, ಸಾತಗಳ್ಳಿ ಬಡಾವಣೆ ಹಾಗೂ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ನ.ರಾ.ಮೊಹಲ್ಲಾ ವಿಭಾಗ ಕಾರ್ಯನಿರ್ವಾಹಕ ಇಂಜಿನಿಯರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಚಾ ನಗರದಲ್ಲಿ ಎಸ್.ಐ.ಆರ್ ಕಾರ್ಯ ನಿರ್ವಹಣೆ

### 5,85,277 ಗಣತಿ ನಮೂನೆ ಡಿಜಿಟಲೀಕರಣ

ಚಾಮರಾಜನಗರ, ಚಾಮರಾಜನಗರ ಜಿಲ್ಲೆಯಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್.ಐ.ಆರ್) ಪ್ರಕ್ರಿಯೆಯು ಪ್ರಗತಿಯಲ್ಲಿದೆ. ಮತಗಟ್ಟೆ ಮಟ್ಟದ ಅಧಿಕಾರಿ (ಬಿ.ಎಲ್.ಒ)ಗಳು ಮನೆ ಮನೆಗೆ ಭೇಟಿ ನೀಡಿ, ಗಣತಿ ನಮೂನೆ (ಎನ್ಯುಮರೇಷನ್ ಫಾರಂ) ಗಳನ್ನು ವಿತರಿಸುತ್ತಿದ್ದು, ಈವರೆಗೆ 5,85,277 ಗಣತಿ ನಮೂನೆಗಳನ್ನು ಡಿಜಿಟಲೀಕರಣಗೊಳಿಸಲಾಗಿದೆ.

ಹನೂರು ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 2,24,616 ಮತದಾರರಿದ್ದು, 254 ಮತಗಟ್ಟೆ ಮಟ್ಟದ ಅಧಿಕಾರಿಗಳು 2,24,616 ಮತದಾರರಿಗೆ ಗಣತಿ ನಮೂನೆ (ಎನ್ಯುಮರೇಷನ್ ಫಾರಂ) ಗಳನ್ನು ವಿತರಿಸಿದ್ದಾರೆ. ಈ ಪೈಕಿ 1,49,606 ಗಣತಿ ನಮೂನೆಗಳು ಡಿಜಿಟಲೀಕರಣಗೊಂಡಿದೆ.

ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 2,21,151 ಮತದಾರರಿದ್ದು, 241 ಬಿಎಲ್.ಒ ಗಳಿಂದ 2,21,151 ಮತದಾರರಿಗೆ ಗಣತಿ ನಮೂನೆಗಳನ್ನು ವಿತರಿಸಲಾಗಿದೆ. ಇದರಲ್ಲಿ 1,49,143 ಗಣತಿ ನಮೂನೆಗಳನ್ನು ಡಿಜಿಟಲೀಕರಣಗೊಳಿಸಲಾಗಿದೆ.

ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 2,17,852 ಮತದಾರರಿದ್ದು, 239 ಮತಗಟ್ಟೆ ಮಟ್ಟದ ಅಧಿಕಾರಿಗಳು 2,17,852 ಮಂದಿ ಮತದಾರರಿಗೆ ಗಣತಿ ನಮೂನೆಗಳನ್ನು ವಿತರಿಸಿದ್ದಾರೆ. ಈ ಪೈಕಿ 1,42,716 ಗಣತಿ ನಮೂನೆಗಳು ಡಿಜಿಟಲೀಕರಣಗೊಂಡಿದೆ.

ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 2,16,605 ಮತದಾರರಿದ್ದು, 249 ಬಿಎಲ್.ಒಗಳು 2,16,605 ಮತದಾರರಿಗೆ ಗಣತಿ ನಮೂನೆಗಳನ್ನು ವಿತರಿಸಿದ್ದಾರೆ. ಇದರಲ್ಲಿ 1,43,812 ಗಣತಿ ನಮೂನೆಗಳನ್ನು ಡಿಜಿಟಲೀಕರಣಗೊಳಿಸಲಾಗಿದೆ. ಜಿಲ್ಲೆಯಲ್ಲಿ ಒಟ್ಟಾರೆ 8,80,224 ಮತದಾರರಿದ್ದು, 983 ಮತಗಟ್ಟೆ ಮಟ್ಟದ ಅಧಿಕಾರಿಗಳು 8,80,224 ಮತದಾರರಿಗೆ ಗಣತಿ ನಮೂನೆಗಳನ್ನು ವಿತರಿಸಿದ್ದಾರೆ. 5,85,277 ಗಣತಿ ನಮೂನೆಗಳನ್ನು ಈಗಾಗಲೇ ಡಿಜಿಟಲೀಕರಣಗೊಳಿ ಸಲಾಗಿದೆ. ಗೈರು ಹಾಜರಿ, ಸ್ಥಳಾಂತರ, ಮರಣ ಹೊಂದಿರುವ ಹಾಗೂ ಎರಡು ಕಡೆ ನೋಂದಣಿಯಾಗಿರುವ ಬಗ್ಗೆ ಹನೂರು ವಿಧಾನ ಸಭಾ ಕ್ಷೇತ್ರದಲ್ಲಿ 3897, ಕೊಳ್ಳೇಗಾಲ 12175, ಚಾಮರಾಜನಗರ 8165 ಹಾಗೂ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಲ್ಲಿ 4003 ಮತದಾರರು ಸೇರಿದಂತೆ ಜಿಲ್ಲೆಯಲ್ಲಿ ಒಟ್ಟಾರೆ 28240 ಮತದಾರರನ್ನು ಗುರುತಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾ

## ಇಂದು ಕೊತ್ತತ್ತಿಯಲ್ಲಿ ಉಚಿತ ವಿಶೇಷ ಆರೋಗ್ಯ ತಪಾಸಣಾ ಶಿಬಿರ

ಮಂಡ್ಯ: ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯತ್ ಹಾಗೂ ಆದಿಚುಂಚನಗಿರಿ ಆಸ್ಪತ್ರೆ, ಬಿ.ಜಿ.ನಗರ, ನಾಗಮಂಗಲ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಂಡ್ಯ, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ ಹಾಗೂ ಕಿದ್ವಾಯಿ ಸಂಸ್ಥೆ, ಬೆಂಗಳೂರು, ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಇವರುಗಳ ಸಹಯೋಗದೊಂದಿಗೆ ತಜ್ಞ ವೈದ್ಯಾಧಿಕಾರಿಗಳ ತಂಡದಿಂದ ಉಚಿತ ವಿಶೇಷ ಆರೋಗ್ಯ ತಪಾಸಣಾ ಶಿಬಿರ ಕಾರ್ಯಕ್ರಮವನ್ನು ಇಂದು

(ಜುಲೈ 18 ರಂದು) ಬೆಳಿಗ್ಗೆ 9.00 ಗಂಟೆಗೆ ಮಂಡ್ಯ ತಾಲ್ಲೂಕಿನ ಕೊತ್ತತ್ತಿ ಗ್ರಾಮದ ಶ್ರೀ ವಿದ್ಯಾಗಣಪತಿ ಶಿಕ್ಷಣ ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾಗಿದೆ ಆದಿಚುಂಚನಗಿರಿ ಮಹಾಸಂಸ್ಥಾನಮಠದ ಪೀಠಾಧ್ಯಕ್ಷ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿರವರು ಹಾಗೂ ಆದಿಚುಂಚನಗಿರಿ ಮಹಾಸಂಸ್ಥಾನಮಠದ ಪ್ರಧಾನ ಕಾರ್ಯದರ್ಶಿಗಳಾದ ಪುರುಷೋತ್ತಮಾನಂದನಾಥ ಸ್ವಾಮೀಜಿ ಕಾರ್ಯಕ್ರಮದ ಸಾನಿಧ್ಯವಹಿಸಲಿದ್ದಾರೆ.

ಭಾರತ ಸರ್ಕಾರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ ರವರು ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ. ಕರ್ನಾಟಕ ಸರ್ಕಾರ ಬೃಹತ್ ಮತ್ತು ಮಧ್ಯಮ ನೀರಾವರಿ ಇಲಾಖಾ ಸಚಿವರು ಹಾಗೂ ಮಂಡ್ಯ ಜಿಲ್ಲಾ ಮೇಲುಸ್ತುವಾರಿ ಸಚಿವರಾದ ರಾಮಲಿಂಗರೆಡ್ಡಿರವರು ಕಾರ್ಯಕ್ರಮದ ಗೌರವ ಉಪಸ್ಥಿತಿ ವಹಿಸಲಿದ್ದಾರೆ. ಶ್ರೀ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಅಧ್ಯಕ್ಷರು ಹಾಗೂ ಶ್ರೀರಂಗಪಟ್ಟಣ ವಿಧಾನಸಭಾ ಶಾಸಕರಾದ ಎ.ಬಿ ರಮೇಶ ಬಂಡಿಸಿದ್ದೇಗೌಡ ರವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರು ಹಾಗೂ ವಿಧಾನಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ,ವಿಧಾನ ಪರಿಷತ್ ಶಾಸಕರುಗಳಾದ ಮಧು ಜಿ. ಮಾದೇಗೌಡ, ಕೆ. ವಿವೇಕಾನಂದ ರವರು ಆಗಮಿಸಲಿದ್ದಾರೆ. ವಿಶೇಷ ಆಹ್ವಾನಿತರಾಗಿ ಮಂಡ್ಯ ಜಿಲ್ಲಾ ಜಿಲ್ಲಾಧಿಕಾರಿಗಳಾದ ಡಾ. ಕುಮಾರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಾದ ಕೆ. ಆರ್. ನಂದಿನಿ, ಮಂಡ್ಯ ಜಿಲ್ಲಾ ಪೊಲೀಸ್ ಅಧಿಕ್ಷಕರಾದ ಡಾ. ವಿ. ಜೆ. ಶೋಭಾರಾಣಿ, ಅಪರ ಜಿಲ್ಲಾಧಿಕಾರಿಗಳಾದ ಬಿ.ಸಿ ಶಿವಾನಂದಮೂರ್ತಿ, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕರಾದ ನರಸಿಂಹಮೂರ್ತಿ, ನಾಗಮಂಗಲ ಆದಿಚುಂಚನಗಿರಿ ಆಸ್ಪತ್ರೆಯ ಅಧೀಕ್ಷಕರಾದ ಡಾ. ಕೆ.ಎಂ.ಶಿವಕುಮಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ. ಬೆಟ್ಟಸ್ವಾಮಿ, ಮಂಡ್ಯ ಉಪವಿಭಾಗಾಧಿಕಾರಿಗಳಾದ ಶಿವಮೂರ್ತಿ ಎಂ., ಬೆಂಗಳೂರು ಕಿದ್ವಾಯಿ ಆಸ್ಪತ್ರೆ ಮುಖ್ಯಸ್ಥರು ಹಾಗೂ ಕ್ಯಾನ್ಸರ್ ತಜ್ಞರಾದ ಡಾ. ಶೋಭಾ, ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಸಭಾಧ್ಯಕ್ಷರಾದ ಮೀರಾ ಶಿವಲಿಂಗಯ್ಯ, ಶ್ರೀ ವಿದ್ಯಾ ಗಣಪತಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಜವರೇಗೌಡ ರವರು ಆಗಮಿಸಲಿದ್ದಾರೆ.

### ತೆಂಗು ಬೆಳೆಗಾರರ ಸಂಘದ ಚುನಾವಣೆ

## ಎ.ಎಂ.ಮಹೇಶ್ ಪ್ರಭು, ತಂಡ ಗೆಲ್ಲಿಸಲು ಮಹೇಶ್ ಕುಮಾರ್ ಮನವಿ

### ಬಿಡದಿ ಟೌನ್ ಶಿಫ್ ಕೈಬಿಡಲು ಆಗ್ರಹ

ಚಾಮರಾಜನಗರ : ತಾಲೂಕು ತೆಂಗು ಬೆಳೆಗಾರರ ಸಂಸ್ಕರಣಾ ಮತ್ತು ಮಾರಾಟ ಸಹಕಾರ ಸಂಘದ ಚುನಾವಣೆಯಲ್ಲಿ ಎ.ಎಂ.ಮಹೇಶ್ ಪ್ರಭು ಮತ್ತು ತಂಡವನ್ನು ಗೆಲ್ಲಿಸಿಕೊಡಬೇಕು ಎಂದು ಕರ್ನಾಟಕ ರೈತ ಸಂಘ, ವಿಶ್ವ ರೈತ ಸಂಘಟನೆಯ ಸದಸ್ಯ ಹೆಗ್ಗವಾಡಿಪುರ ಮಹೇಶ್ ಕುಮಾರ್ ಸಂಘದ ಸದಸ್ಯರಲ್ಲಿ ಮನವಿ ಮಾಡಿದರು.



ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ ಜು. 19 ರಂದು ನಡೆಯುವ ಚುನಾವಣೆಯಲ್ಲಿ ವಿಶ್ವರೈತ ನಾಯಕರು, ವಿಶ್ವಚೇತನ ಪ್ರೊ. ಎಂ.ಡಿ.ನಂಜುಂಡಸ್ವಾಮಿ ಅವರ ಸಿದ್ಧಾಂತವನ್ನು ಚಾಚುತಪ್ಪದೆ ಪಾಲಿಸುತ್ತಿರುವ ಎ.ಎಂ.ಮಹೇಶ್ ಪ್ರಭು ಅವರು ಸಂಕಷ್ಟದಲ್ಲಿರುವ ರೈತರಿಗೆ ಏನಾದರೂ ಮಾಡಬೇಕು ಎಂದು ಯೋಚನೆ ಮಾಡಿ ತೆಂಗು ಬೆಳೆಗಾರರ ಸಂಘ ಮಾಡಿ 50 ಸಾವಿರ ತೆಂಗಿನ ಕಾಯಿ ಅರೆಯುವಂತ ಒಂದು ಸಂಸ್ಕರಣಾ ಘಟಕ ಮಾಡಿದರು. ಆದರಿಂದ ರೈತ ಭಾಂದವರಿಗೆ ಒಳ್ಳೆಯ ಲಾಭ ದೊರೆತಿದೆ. ಇಂತಹ ಕಾರ್ಖಾನೆಯು ರಾಜ್ಯದಲ್ಲಿ ಎಲ್ಲಿಯೂ ಇಲ್ಲ. ಸರ್ಕಾರದ ಅನುದಾನ ತಂದು ಎಲ್ಲ ಷೇರುದಾರರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಮುಂದಿನ ದಿನಗಳಲ್ಲೂ ರೈತಭಾಂದವರಿಗೆ ಒಳ್ಳೆಯ ಕೆಲಸ ಮಾಡಲಿದ್ದಾರೆ. ಆಗಾಗಿ ಸಂಘದ ಸದಸ್ಯ ತಮ್ಮ ಅಮೂಲ್ಯವಾದ ಮತವನ್ನು ಅವರಿಗೆ ಮತ್ತು ಅವರ ತಂಡಕ್ಕೆ ನೀಡಿ ಜಯಶೀಲರನ್ನಾಗಿ ಮಾಡುವಂತೆ ಮನವಿ ಮಾಡಿದರು. ಬಿಡದಿ ಟೌನ್‌ಶಿಫ್ ಯೋಜನೆ ಕೈಬಿಡಲು ಆಗ್ರಹ.: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಬಿಡದಿ ಟೌನ್ ಶಿಪ್ ಯೋಜನೆ ಕೈಬಿಡಬೇಕು ಎಂದು ಮಹೇಶ್‌ಕುಮಾರ್ ಒತ್ತಾಯಿಸಿದರು. ರೈತರ ಭೂಮಿಗೆ ನುಗ್ಗಿ ರೈತರ ಮೇಲೆ ಎಫ್‌ಐಆರ್ ದಾಖಲು ಮಾಡುವುದು ಎಷ್ಟು ಸರಿ? ಪೊಲೀಸರು ಇರುವುದು ಮಾಡುವುದು ಅಧಿಕಾರಿಗಳು, ಚುನಾಯಿತ ಜನಪ್ರತಿನಿಧಿಗಳ ರಕ್ಷಣೆಗೆ ಮಾತ್ರವೇ? ಕೂಡಲೇ ಬಿಡದಿ ಶಿಪ್ ಯೋಜನೆ ಕೈ ಬಿಡಬೇಕು. ಇಲ್ಲದಿದ್ದರೆ ದೊಡ್ಡ ಚಳವಳಿ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು.

# ಭಯ ಹೋಗಲಾಡಿಸಲು ಅಣುಕು ಪರೀಕ್ಷೆಗಳು ಸಹಕಾರಿ



ಮೈಸೂರು:- ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವ ಉದ್ಯೋಗಾಕಾಂಕ್ಷಿಗಳ ಮನಸ್ಸಿನಲ್ಲಿರುವ ಭಯ ಮತ್ತು ಆತಂಕವನ್ನು ಹೋಗಲಾಡಿಸಲು ಅಣುಕು ಪರೀಕ್ಷೆಗಳು ಹೆಚ್ಚು ಸಹಕಾರಿಯಾಗಲಿವೆ ಎಂದು ಕರ್ನಾಟಕ ಪೊಲೀಸ್ ಅಕಾಡೆಮಿ ಉಪನಿರ್ದೇಶಕರಾದ ಎಸ್.ಎಲ್. ಚೆನ್ನಬಸವಣ್ಣ (ಐ.ಪಿ.ಎಸ್) ಅವರು ಹೇಳಿದರು.

ಇಂದು ಮೈಸೂರಿನ ನಗರ ಕೇಂದ್ರ ಗ್ರಂಥಾಲಯದ ವತಿಯಿಂದ ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳಿಗಾಗಿ ಹಮ್ಮಿಕೊಳ್ಳಲಾಗಿದ್ದ ವಿಶೇಷ ಅಣುಕು ಪರೀಕ್ಷೆಗೆ ಚಾಲನೆ ನೀಡಿ, ಅಭ್ಯರ್ಥಿಗಳನ್ನು ಉದ್ದೇಶಿಸಿ ಅವರು ಮಾತನಾಡಿದರು.

ಮೈಸೂರಿನ ನಗರ ಕೇಂದ್ರ ಗ್ರಂಥಾಲಯವು ಹಮ್ಮಿಕೊಂಡಿರುವ ಈ ಅಣುಕು ಪರೀಕ್ಷೆಗಳ ಸರಣಿ ಅತ್ಯಂತ ವಿಶೇಷವಾದುದಾಗಿದೆ. ಇದು ಬಡ ಹಾಗೂ ಗ್ರಾಮೀಣ ಭಾಗದ ನೂರಾರು ವಿದ್ಯಾರ್ಥಿಗಳಿಗೆ ದಾರಿದೀಪವಾಗಲಿದೆ ಎಂದು ಅವರು ಶ್ಲಾಘಿಸಿದರು. ಇದೇ ವೇಳೆ ತಮ್ಮ ಹಳೆಯ ದಿನಗಳನ್ನು ನೆನಪಿಸಿಕೊಂಡ ಅವರು, ನಾವು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಿದ್ದ ಕಾಲದಲ್ಲಿ ಯಾವುದೇ ಸಂಸ್ಥೆಗಳೂ ಈ ರೀತಿಯ ಅಣುಕು ಪರೀಕ್ಷೆಗಳನ್ನು ನಡೆಸುತ್ತಿರಲಿಲ್ಲ. ಹಾಗಾಗಿ ನಾನು ಮತ್ತು ನನ್ನ ಸ್ನೇಹಿತರು ನಮ್ಮ ಕೊಠಡಿಗಳಲ್ಲೇ ಇಂತಹ ಅಣುಕು ಪರೀಕ್ಷೆಗಳನ್ನು ಸ್ವತಃ ಸಿದ್ಧಪಡಿಸಿಕೊಂಡು ಅಭ್ಯಾಸ ಮಾಡುತ್ತಿದ್ದೆವು. ಆದರೆ ಇಂದು ವಿದ್ಯಾ ರ್ಥಿಗಳಿಗೆ ಇಂತಹ ಉತ್ತಮ ಅವಕಾ ಶಗಳು ಸಿಗುತ್ತಿದ್ದು, ಇದರ ಸದುಪಯೋ ಗ ಪಡೆದುಕೊಳ್ಳ ಬೇಕು ಎಂದರು.

ಪೊಲೀಸ್ ಇಲಾಖೆಗೆ ಸೇರಲು ಇಚ್ಛಿಸುವವರು ಕೇವಲ ಉದ್ಯೋಗ ಕ್ಕಾಗಿ ಬರಬಾರದು. ಸೇವೆಗೆ ಸೇರ್ಪಡೆಗೊಂಡ ನಂತರ ಇಲಾಖೆಯ ವರ್ಚಸ್ಸು ಮತ್ತು ಘನತೆಯನ್ನು ಹೆಚ್ಚಿಸುವಂತೆ ನಡೆದುಕೊಳ್ಳಬೇಕು. ಶಿಷ್ಟ ರಕ್ಷಣೆ, ದುಷ್ಟರ ನಿಗ್ರಹ ಎಂಬುದು ಕೇವಲ ಘೋಷವಾಕ್ಯವಾಗುಳಿಯದೆ, ಅದು ಪ್ರತಿಯೊಬ್ಬರ ಕರ್ತವ್ಯದ ಮಂತ್ರವಾಗಬೇಕು ಎಂದರು.

ನಗರ ಕೇಂದ್ರ ಗ್ರಂಥಾಲಯದ ಉಪನಿರ್ದೇಶಕ 'ರಾದ ಮಂಜುನಾಥ್ ಬಿ. ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ನಮ್ಮ ಗ್ರಂಥಾಲಯ ನಡೆಸುತ್ತಿರುವ ಈ ಅಣುಕು ಪರೀಕ್ಷೆಗಳು ರಾಜ್ಯದ ಗಮನ ಸೆಳೆದಿವೆ. ಹಿಂದುಳಿದ ರ್ಗಮಗಳ ಕಲ್ಯಾಣ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಯು ತಮ್ಮ ವಸತಿ ನಿಲಯಗಳಲ್ಲಿರುವ ಉದ್ಯೋಗಾಕಾಂಕ್ಷಿ ವಿದ್ಯರ್ಥಿಡಗಳಿಗೂ ಇಂತಹ ಅಣುಕು ಪರೀಕ್ಷೆಯ ಪ್ರಶ್ನೆ ಪತ್ರಿಕೆ ಹಾಗೂ ಓದುವ ಸಾಮಗ್ರಿಗಳನ್ನು ನೀಡಿ ಸಹಕರಿಸುವಂತೆ ಕೋರಿವೆ. ಈ ನಿಟ್ಟಿನಲ್ಲಿ ನಮ್ಮ ಗ್ರಂಥಾಲಯ ಹಾಗೂ ಬೆಂಗಳೂರಿನ ಜ್ಞಾನಗಂಗೋತ್ರಿ ಸಂಸ್ಥೆಯು ಜಂಟಿಯಾಗಿ ಆ ಸಂಸ್ಥೆಗಳ ವಿದ್ಯರ್ಥಿಗಳಿಗೆ ನೆರವು ನೀಡಲು ಮುಂದಾಗಿದೆ ಎಂದು ಹೇಳಿದರು.

ವೈ.ವಿ. ಗಾಯತ್ರಿ ಅವರು ಮಾತನಾಡಿ, ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಅಭ್ಯರ್ಥಿಗಳು ಹೇಗೆ ಸಿದ್ಧರಾಗಬೇಕು, ಸಮಯ ನಿರ್ವಹಣೆ ಮತ್ತು ಏಕಾಗ್ರತೆಯನ್ನು ಹೇಗೆ ಕಾಯ್ದುಕೊಳ್ಳಬೇಕು ಎಂಬ ಕುರಿತು ಉಪಯುಕ್ತ ಸಲಹೆಗಳನ್ನು ನೀಡಿದರು. ಮತ್ತು ಮೈಸೂರು ನಗರ ಗ್ರಂಥಾಲಯ ಪ್ರಾಧಿಕಾರದ ಸದಸ್ಯರು ಹಾಗೂ ವಾಣಿಜ್ಯ ತೆರಿಗೆ ಇಲಾಖೆಯ ನಿವೃತ್ತ ಉಪ ಆಯುಕ್ತರಾದ ರಮೇಶ್ ನರಸಯ್ಯ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

# ಸಿಮ್ಸ್: ಭೌತಚಿಕಿತ್ಸೆ ಸಲಕರಣೆಗೆ ಚಾಲನೆ

## ಚಾ.ನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಮೆದುಳು ಆರೋಗ್ಯ ಕೇಂದ್ರ


ಚಾಮರಾಜನಗರ:- ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿರುವ ಮೆದುಳು ಆರೋಗ್ಯ ಕೇಂದ್ರಕ್ಕೆ (ಬಿಎಚ್‌ಸಿ) ಉಜ್ಜೀವನ್ ಸ್ಮಾಲ್ ಫೈನಾನ್ಸ್ ಸಂಸ್ಥೆಯಿಂದ ಕೊಡುಗೆ ನೀಡಿರುವ ಭೌತಚಿಕಿತ್ಸೆಯ ಸಲಕರಣೆಗಳಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ರಾಜೇಶ್ ಕುಮಾರ್ ಅವರು ಚಾಲನೆ ನೀಡಿದರು.

ಕರ್ನಾಟಕ ಮೆದುಳು ಆರೋಗ್ಯ ಉಪಕ್ರಮ ಕಾರ್ಯಕ್ರಮದಡಿ ಸಿಮ್ಸ್‌ನಲ್ಲಿ ನರರೋಗಗಳಿಗೆ ಪರಿಣಾಮಕಾರಿ ಚಿಕಿತ್ಸೆ ನೀಡುವ ಸಲುವಾಗಿ ಸ್ಥಾಪಿಸಲಾಗಿರುವ ಮೆದುಳು ಆರೋಗ್ಯ ಕೇಂದ್ರಕ್ಕೆ ನೀಡಲಾಗಿರುವ ಭೌತಚಿಕಿತ್ಸೆಯ ಸಲಕರಣೆಗಳನ್ನು ಆರೋಗ್ಯಾಧಿಕಾರಿಗಳು ಟೇಪ್ ಕತ್ತರಿಸುವ ಮೂಲಕ ಸಾರ್ವಜನಿಕರ ಉಚಿತ ಸೇವೆಗೆ ಸಮರ್ಪಿಸಿದರು.

ಇದೇ ವೇಳೆ ಮಾತನಾಡಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ರಾಜೇಶ್ ಕುಮಾರ್ ಅವರು ತಲೆನೋವು, ಅಪಸ್ಮಾರ, ಬುದ್ಧಿಮಾಂದ್ಯತೆ ಮತ್ತು ಪಾರ್ಶ್ವವಾಯುನಂತಹ ನಾಲ್ಕು ಪ್ರಮುಖ ನರವೈಜ್ಞಾನಿಕ ಸಮಸ್ಯೆಗಳನ್ನು ಪರಿಹರಿಸಲು ಭೌತಚಿಕಿತ್ಸೆಯ ಸಲಕರಣೆಗಳು ನೆರವಾಗಲಿದೆ. ರೋಗಿಯ ಫಲಿತಾಂಶಗಳನ್ನು ಸುಧಾರಿಸಲು ಆರಂಭಿಕ ಗುರುತಿಸುವಿಕೆ, ಸಕಾಲಿಕ ಚಿಕಿತ್ಸೆ ಮತ್ತು ಟೆಲಿ-ನರಶಾಸ್ತ್ರ, ಟೆಲಿ-ಪುನರ್ವಸತಿ ಮತ್ತು ಭೌತಚಿಕಿತ್ಸೆಯ ಸೇವೆಗಳ ಲಭ್ಯತೆಯ ಮಹತ್ವ ತಿಳಿಸಲಿದೆ ಎಂದರು.

ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ. ಚಂದ್ರಶೇಖರ್ ಅವರು ಮಾತನಾಡಿ ಜಿಲ್ಲೆಯಾದ್ಯಂತ ಪುನರ್ವಸತಿ ಸೇವೆಗಳನ್ನು ಬಲಪಡಿಸಲು, ನರವೈಜ್ಞಾನಿಕ ಆರೋಗ್ಯ ಜಾಗೃತಿ ಮೂಡಿಸಲು ಮತ್ತು ರೋಗಿಗಳ ಆರೈಕೆಯ ಗುಣಮಟ್ಟವನ್ನು ಸುಧಾರಿಸಲು ಆರೋಗ್ಯ ಇಲಾಖೆ ಬದ್ಧವಾಗಿದೆ. ಭೌತಚಿಕಿತ್ಸೆ ಸಲಕರಣೆಗಳ ಉಚಿತ ಸೇವೆಯನ್ನು ಸಾರ್ವಜನಿಕರು ಸದ್ಬಳಕೆ ಮಾಡಿಕೊಳ್ಳುವಂತೆ ಸಲಹೆ ಮಾಡಿದರು.

ಸಿಮ್ಸ್ ವೈದ್ಯಕೀಯ ಅಧೀಕ್ಷಕರಾದ ಡಾ. ಸಿ.ಎಸ್. ಮಾರುತಿ, ನಿವಾಸಿ ವೈದ್ಯಾಧಿಕಾರಿ ಡಾ. ಏಜಾಜ್ ಖಾನ್, ಮನೋವೈದ್ಯಾಧಿಕಾರಿ ಡಾ. ರಘು, ಕ್ಲಿನಿಕಲ್ ಸೈಕಲಜಿಸ್ಟ್ ಡಾ. ಗೋವಿಂದರಾಜು, ನರ್ಸಿಂಗ್ ಅಧೀಕ್ಷಕರಾದ ಜಮುನಾ, ಫಿಸಿಯೋಥೆರಪಿಸ್ಟ್ ನಂದಿನಿ, ಉಜ್ಜಿವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ನ ಜಿಲ್ಲಾ ವ್ಯವಸ್ಥಾಪಕರಾದ ಕಿರಣ್ ಕುಮಾರ್, ಮೆದುಳು ಆರೋಗ್ಯ ಉಪಕ್ರಮ ಜಿಲ್ಲಾ ಸಂಯೋಜಕರಾದ ಸತೀಶ್, ಇತರರು ಕಾರ್ಯಕ್ರಮದಲ್ಲಿ ಇದ್ದರು.



## ವೈದ್ಯಕೀಯ ಶಿಕ್ಷಣದಲ್ಲಿ ಮೂಲ ವಿಷಯ ಕುರಿತು ವೈದ್ಯರಿಗೆ ನಡೆದ ಕಾರ್ಯಾಗಾರ



**ಚಾಮರಾಜನಗರ:** ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವೈದ್ಯಕೀಯ ಶಿಕ್ಷಣ ಘಟಕದ (ಮೆಡಿಕಲ್ ಎಜುಕೇಷನ್ ಯೂನಿಟ್) ವತಿಯಿಂದ (ಬೇಸಿಕ್ ಕೋರ್ಸ್ ಇನ್ ಮೆಡಿಕಲ್ ಎಜುಕೇಷನ್) ವೈದ್ಯಕೀಯ ಶಿಕ್ಷಣದಲ್ಲಿ ಮೂಲ ವಿಷಯ ಕುರಿತು ವೈದ್ಯರಿಗೆ ಆಯೋಜಿಸಲಾಗಿದ್ದ ಮೂರು ದಿನಗಳ ವಿಶೇಷ ತರಬೇತಿ ಮತ್ತು ಕಾರ್ಯಾಗಾರ ಗುರುವಾರ (ಜು.16) ನಡೆಯಿತು.

ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಡೀನ್ ಹಾಗೂ ನಿರ್ದೇಶಕರಾದ ಡಾ. ಆರ್.ಎನ್.ದೇವಕಿ ಅವರು ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಮಾತನಾಡಿ ವೈದ್ಯರಿಗೆ ವೈದ್ಯಕೀಯ ಶಿಕ್ಷಣ ಎಷ್ಟು ಪ್ರಾಮುಖ್ಯತೆಯನ್ನು ಕೇಂದ್ರೀಕರಿಸಿದೆ. ಇದರಿಂದ ಮುಂಬರುವ ವೈದ್ಯರ ಕಾರ್ಯ ಮತ್ತು ದಕ್ಷತೆಯ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಈ ಕಾರ್ಯಗಾರವು ಪ್ರಮುಖ ಪಾತ್ರ ವಹಿಸುತ್ತದೆ ಎಂದರು.


ಬೆಂಗಳೂರಿನ ಸೆಂಟ್ ಜಾನ್ಸ್ ಆಸ್ಪತ್ರೆಯ ಡಾ. ಶೀಜಿಲ್ ಅವರು ಮಾತನಾಡಿ ಮುಂಬರುವ ವೈದ್ಯರು ರೋಗಿಗಳ ಆರೋಗ್ಯ ತಪಾಸಣೆಯನ್ನು ಅತ್ಯುನ್ನತ ಗುಣಮಟ್ಟದಲ್ಲಿ ಹೆಚ್ಚಿಸುವಲ್ಲಿ ಈ ಕಾರ್ಯಗಾರವು ಪ್ರಾಮುಖ್ಯತೆ ವಹಿಸುತ್ತದೆ ಎಂದರು.

ಸಿಮ್ಸ್‌ನ ಪ್ರಾಂಶುಪಾಲರಾದ ಡಾ. ಕೆ.ಟಿ ಅಜಯ್, ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಅಧಿಕಾರಿ ಡಾ. ಗಿರೀಶ್ ವಿ ಪಾಟೀಲ್ ಅವರು ಕಾರ್ಯಾಗಾರದಲ್ಲಿ ಉಪಸ್ಥಿತರಿದ್ದರು.

ಸಿಮ್ಸ್ ನ ಸಮುದಾಯ ವೈದ್ಯಕೀಯ ವಿಭಾಗದ ಮುಖ್ಯಸ್ಥರಾದ ಡಾ. ಎಂ.ಎನ್. ದಮಯಂತಿ, ಅರವಳಿಕೆ ಶಾಸ್ತ್ರ ವಿಭಾಗ ಮುಖ್ಯಸ್ಥರಾದ ಡಾ. ಎಂ.ಎಸ್. ದರ್ಶನ್, ತುರ್ತು ವೈದ್ಯಕೀಯ ವಿಭಾಗದ ಮುಖ್ಯಸ್ಥರಾದ ಡಾ. ಕೆ.ಬಿ. ಅಭಿಷೇಕ್, ಕಿವಿ, ಮೂಗು ಮತ್ತು ಗಂಟಲು ವಿಭಾಗದ ಮುಖ್ಯಸ್ಥರಾದ ಡಾ. ಶರೀಫ್, ಡಾ. ವಸಿಂ ಅಂಜುಮ್, ಡಾ. ಬಿ.ಬಿ. ದರ್ಶನ್, ಡಾ. ವಿದ್ಯಾಸಾಗರ್, ಡಾ. ಪಿ. ಶಶಿಧರ್, ಡಾ. ಎಂ.ಎಸ್. ರಾಘವೇಂದ್ರ, ಡಾ. ಹೆಚ್.ಎಲ್ ಆಶಾ ಹಾಗೂ ಸಂಸ್ಥೆಯ ಎಲ್ಲಾ ವಿಭಾಗದ ವೈದ್ಯರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ತರಬೇತಿಯಲ್ಲಿ ಭಾಗವಹಿಸಿದ್ದರು.

## ಮಂಡ್ಯದಲ್ಲಿ ಜುಲೈ 19ರಂದು ಸಂಡೆ ಲೈಬ್ರರಿ ಆಯೋಜನೆ

ಮಂಡ್ಯ: ಪರಿಚಯ ಪ್ರಕಾಶನವು ದೇವರ ಕಾಡು ಬಳಗ ,ಮಂಡ್ಯ ಜಿಲ್ಲಾ ನಾಗರೀಕ ಹಿತರಕ್ಷಣಾ ಟ್ರಸ್ಟ್ (ರಿ) ಸಹಕಾರದೊಂದಿಗೆ ನಗರದಲ್ಲಿ ಜುಲೈ 19ರಂದು 'ಸಂಡೇ ಲೈಬ್ರರಿ'ಯನ್ನು ಶಿವನಂಜಪ್ಪ ಪಾರ್ಕ್ ನಲ್ಲಿ ಬೆಳಿಗ್ಗೆ 10.30 ಕ್ಕೆ ಆಯೋಜಿಸಲಾಗಿದೆ.



ಪರಿಚಯ ಪ್ರಕಾಶನವು ಮಕ್ಕಳ ಮನೋವಿಕಾಸಕ್ಕಾಗಿ, ನಿಸರ್ಗದ ನಡುವಿನ ಕಲಿಕೆಗಾಗಿ ಮತ್ತು ಪುಸ್ತಕಗಳ ಮೇಲಿನ ಆಸಕ್ತಿ ಹೆಚ್ಚಿಸಲು ಪ್ರತಿ ತಿಂಗಳ ಮೂರನೇ ಭಾನುವಾರ "ಸಂಡೇ ಲೈಬ್ರರಿ" ಎಂಬ ವಿನೂತನ ಕಾರ್ಯಕ್ರಮ ಹಮಿ ್ಮಕೊಂಡು ಬರುತ್ತಿದೆ. ಈ ಭಾನುವಾರದ ವಿಶೇಷವೇನೆಂದರೆ ನಟ,ರಂಗಭೂಮಿ ನಿರ್ದೇಶಕ,ಸಾಹಿತಿ ಅರಸೀಕೆರೆ ಯೋಗಾನಂದರವರು ಚಿಣ್ಣರಿಗೆ ರಂಗಭೂಮಿಯನ್ನು ಪರಿಚಯಿಸಲಿದ್ದಾರೆ. ಕಥೆ ,ನಟನೆ,ರಂಗಗೀತೆಗಳನ್ನು ಹೇಳಿಕೊಡುತ್ತಿದ್ದಾರೆ ಎಂದು ಪರಿಚಯ ಪ್ರಕಾಶನದ ಸಂಸ್ಥಾಪಕ ಶಿವಕುಮಾರ್ ಆರಾಧ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಹಕಾರ ಕೇಂದ್ರ ಬ್ಯಾಂಕು; ಕುಂದುಕೊರತೆ ಸಭೆ

ಮಡಿಕೇರಿ:-ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು ನಿಯಮಿತ ಮಡಿಕೇರಿ ಇದರ ಗ್ರಾಹಕರ ಕುಂದುಕೊರತೆ ಸಭೆಯು ಬ್ಯಾಂಕಿನ ಮುಖ್ಯ ಕಚೇರಿ ಶಾಖೆ ಹಾಗೂ ಕಾಲೇಜು ರಸ್ತೆ ಶಾಖೆಯಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಕೊಡಂದೇರ ಪಿ ಗಣಪತಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮುಖ್ಯ ಕಚೇರಿ ಶಾಖೆಯಲ್ಲಿ 60 ಹಾಗೂ ಕಾಲೇಜು ರಸ್ತೆ ಶಾಖೆಯಲ್ಲಿ 63 ಗ್ರಾಹಕರು ಹಾಜರಿದ್ದರು. ಸಭೆಯಲ್ಲಿ ಗ್ರಾಹಕರು ಬ್ಯಾಂಕಿನಲ್ಲಿ ಗ್ರಾಹಕರಿಗೆ ಸಿಗುವ ವಿವಿಧ ರೀತಿಯ ಸಾಲ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆದರು.

ಎರಡೂ ಶಾಖೆಗಳಲ್ಲಿ ಗ್ರಾಹಕರು ಬ್ಯಾಂಕಿನ ಅಭಿವೃದ್ಧಿಯ ಬಗ್ಗೆ, ಬ್ಯಾಂಕಿನ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿಯ ಉತ್ತಮ ಕಾರ್ಯವೈಖರಿ ಹಾಗೂ ಸಿಬ್ಬಂದಿಗಳು ಉತ್ತಮ ಸೇವೆ ನೀಡುತ್ತಿರುವುದಾಗಿ ಪ್ರಶಂಸೆ ವ್ಯಕ್ತಪಡಿಸಿದರು. ಗ್ರಾಹಕರುಗಳು ಸಭೆಯಲ್ಲಿ ಕೇಳಿಕೊಂಡ ಪ್ರಶ್ನೆಗಳಿಗೆ ಬ್ಯಾಂಕಿನ ಅಧ್ಯಕ್ಷರು ಸ್ಥಳದಲ್ಲೇ ಉತ್ತರ ನೀಡಿದರು. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅವರು ಬ್ಯಾಂಕಿನ ಪ್ರಗತಿಯ ಅಂಕಿ ಅಂಶಗಳನ್ನು ಸಭೆಗೆ ಮಾಹಿತಿ ನೀಡಿದರು. ಗ್ರಾಹಕರು ಬ್ಯಾಂಕಿನ ಪ್ರಗತಿಯ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು.



ಬ್ಯಾಂಕಿನ ಅಧ್ಯಕ್ಷರಾದ ಕೊಡಂದೇರ ಪಿ ಗಣಪತಿ ಅವರು ಮಾತನಾಡಿ 105 ವರ್ಷಗಳ ಇತಿಹಾಸವಿರುವ ಕೊಡಗು ಡಿಸಿಸಿ ಬ್ಯಾಂಕು ಜಿಲ್ಲೆಯಲ್ಲಿರುವ ವಿವಿಧ 23 ಬ್ಯಾಂಕುಗಳ ಪೈಕಿ ಠೇವಣಾತಿ ಸಂಗ್ರಹಣೆ ಹಾಗೂ ಸಾಲ ವಿತರಣೆಯಲ್ಲಿ ಅಗ್ರ ಸ್ಥಾನದಲ್ಲಿರುವುದಾಗಿ ಹಾಗೂ ಸಾಲ ವಸೂಲಾತಿಯಲ್ಲಿ ಶೇ.98 ರಷ್ಟು ಸಾಧನೆ ಮಾಡಿರುವುದಾಗಿ ತಿಳಿಸಿದರು. ಜಿಲ್ಲೆಯ ರೈತರು, ಠೇವಣಿದಾರರು ಹಾಗೂ ಸಹಕಾರ ಸಂಘಗಳ ಸಹಕಾರದಿಂದ ಬ್ಯಾಂಕು ಈ ಸಾಧನೆಗೈಯಲು ಸಾಧ್ಯವಾಗಿದೆ ಎಂದರು. ಬ್ಯಾಂಕಿನ ಎನ್‌ಪಿಎ ಗಣನೀಯವಾಗಿ ಇಳಿಕೆಯಾಗಿದ್ದು ನಿವ್ವಳ ಎನ್‌ಪಿಎ ಶೂನ್ಯವಾಗಿದೆ ಎಂದು ಸಭೆಗೆ ತಿಳಿಸಿದರು. ಗ್ರಾಹಕರ ಕುಂದುಕೊರತೆ ಸಭೆ ವರ್ಷಕ್ಕೆ ಎರಡು ಬಾರಿ ನಡೆಸುತ್ತಿದ್ದು, ಬ್ಯಾಂಕಿನ ಎಲ್ಲಾ 26 ಶಾಖೆಗಳಲ್ಲಿಯೂ ಸ್ಥಳೀಯ ನಿರ್ದೇಶಕರ ಉಪಸ್ಥಿತಿಯಲ್ಲಿ ನಡೆಸಲಾಗುವುದು ಎಂದು ತಿಳಿಸಿದರು. ಸಭೆಯಲ್ಲಿ ಬ್ಯಾಂಕಿನ ನಿರ್ದೇಶಕರಾದ ಹೊಸೂರು ಸತೀಶ್‌ಕುಮಾರ್, ಕಾಂಗೀರ ಸತೀಶ್, ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಾದ ಮಣವಟ್ಟಿರ ಬೆಳ್ಯಪ್ಪ, ಶಾಖಾ ಸಿಬ್ಬಂದಿಗಳು ಹಾಜರಿದ್ದರು.

### ದಸಂಸ (ಅಂಬೇಡ್ಕರ್ ವಾದ) ಜಿಲ್ಲಾ ಸಂಚಾಲಕ ಮಲ್ಲಹಳ್ಳಿ ನಾರಾಯಣ್ ಬೇಸರ

# ಜಮೀನಿಗಾಗಿ ಹಲ್ಲೆ: ದೂರು, ಪ್ರತಿದೂರು ದಾಖಲು

ಸರಗೂರು: ಸ್ವತಂತ್ರ ದೊರಕಿ ಎಂಬತ್ತು ವರ್ಷ ಆಗುತ್ತಿದ್ದರು ಕೂಡ ದಲಿತರು ಇಂದಿಗೂ ಭೂಮಿ ಉಳಿಸಿಕೊಳ್ಳಲು ತಮ್ಮ ಪ್ರಾಣ ಪಣಕ್ಕಿಟ್ಟು ಹೋರಾಟ ಮಾಡಬೇಕಾದ ಅನಿವಾರ್ಯತೆ ಇದೆ ಎಂದು ದಸಂಸ (ಅಂಬೇಡ್ಕರ್ ವಾದ) ಜಿಲ್ಲಾ ಸಂಚಾಲಕ ಮಲ್ಲಹಳ್ಳಿ ನಾರಾಯಣ್ ಬೇಸರ ವ್ಯಕ್ತಪಡಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಸರಗೂರು ತಾಲ್ಲೂಕು ಕಾಡಬೇಗೂರು ಗ್ರಾಮದ ದಲಿತ ಮಹಿಳೆ ಸವರ್ಣೀಯರಿಂದ ಹಲ್ಲೆಗೆ ಒಳಗಾಗಿ ಚಿಕಿತ್ಸೆ ಪಡೆಯುತ್ತಿರುವ ಮಹಿಳೆಯನ್ನು ಬುಧವಾರ ಬೇಟಿ ನೀಡಿ ಆರೋಗ್ಯ ವಿಚಾರಿಸಿದ ನಂತರ ಮಾತನಾಡಿದರು. ಸರಗೂರು ತಾಲೂಕಿನ ಕಾಡಬೇಗೂರು ಗ್ರಾಮದ ದಲಿತ ಸಮುದಾಯದ ಸುಮಾ ಮತ್ತು ಲತಾ ಇಬ್ಬರು ಅಕ್ಕ ತಂಗಿಯರು ಮೂವತ್ತು ನಲವತ್ತು ವರ್ಷಗಳಿಂದ ತಮ್ಮ ತಂದೆ ಕಾಲದಿಂದ ಅನುಭವದಲ್ಲಿ ಇದ್ದುಕೊಂಡು ವ್ಯವಸಾಯ ಮಾಡುತ್ತಿದ್ದ ಜಮೀನಿಗೆ ಅದೇ ಗ್ರಾಮದ ದಾಸಪ್ಪನ ಮಕ್ಕಳಾದ ಸ್ವಾಮಿ, ಸುಂದರಾದಾಸು ಹಾಗೂ ಇವರ




ಸಂಬಂಧಿಕರು ಸೇರಿಕೊಂಡು ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದ ಸುಮಾಳ ಮೇಲೆ ಮಹಿಳೆ ಎಂಬುದನ್ನು ಲೆಕ್ಕಿಸದೆ ಮಾರಣಾಂತಿಕವಾಗಿ ಹಲ್ಲೇ ಮಾಡಿರುವುದು ಇಡೀ ನಾಗರಿಕ ಸಮಾಜ ತಲೆತಗ್ಗಿಸುವ ವಿಚಾರವಾಗಿದೆ ಹಾಗಾಗಿ ಈ ಕೂಡಲೇ ಆರೋಪಿಗಳನ್ನು ಬಂಧಿಸಬೇಕು. ಮಹಿಳೆಯ ಮೇಲೆ ಹಲ್ಲೆ ನಡೆಸಿರುವ ಆರೋಪಿಗಳ ವಿರುದ್ಧ ಈಗಾಗಲೇ ಎಸ್.ಸಿ/ಎಸ್.ಟಿ (ದೌರ್ಜನ್ಯ ತಡೆ) ಕಾಯ್ದೆ ಸೇರಿದಂತೆ ಹಲ್ಲೆ ಪ್ರಕರಣ ಸರಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾನೂನಿನ ಅಡಿಯಲ್ಲಿ ತಪ್ಪಿಸಿಕೊಳ್ಳದ ರೀತಿಯಲ್ಲಿ ನ್ಯಾಯಾಲಯಕ್ಕೆ ವರದಿ ಮಾಡಬೇಕು ಎಂದರು.

ನಂತರ ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಸಭೆ ನಡೆಸಿದ ಮುಖಂಡರು ಮಹಿಳೆಯರ ಮೇಲೆ ಆರೋಪಿಗಳು ಪೊಲೀಸ್ ಠಾಣೆಗೆ ಪ್ರತಿ ದೂರು ನೀಡಿದ್ದಾರೆ ಇದನ್ನು ಪೊಲೀಸ್ ಇಲಾಖೆ ಅಧಿಕಾರಿಗಳು ಪರಿಶೀಲನೆ ಮಾಡಿ ಆರೋಪಿಗಳು ನೀಡಿರುವ ದೂರನ್ನು ವಜಾ ಮಾಡಬೇಕು. ಹಾಗೆಯೇ ಆರೋಪಿಗಳನ್ನು ತಕ್ಷಣದಲ್ಲೇ ಬಂಧಿಸಬೇಕು ಎಂದು ಮೇಲೆ ಅಧಿಕಾರಿಗಳಿಗೆ ಮನವಿ ಮಾಡಲು ತೀರ್ಮಾನ ಮಾಡಲಾಯಿತು.

ದೊಡ್ಡಸಿದ್ದು ಹಾದನೂರು, ಸಣ್ಣಸ್ವಾಮಿ, ಮಲ್ಲಿಕಾರ್ಜುನ, ಕಳ್ಳಿಮುದ್ದನಹಳ್ಳಿ ಚಂದ್ರು, ಸಿದ್ದರಾಜು ಶಂಕರಪುರ, ವಾಟಾಳ ನಾಗರಾಜು, ಬೊಮ್ಮೇನಹಳ್ಳಿ ಕುಮಾರ್, ಗೋವಿಂದರಾಜು, ಗಟ್ಟವಾಡಿ ಮಹೇಶ್, ಕಾಳಪ್ಪಾಜಿ, ಮಹೇಶ್ ಕಟ್ಟೇಮಳಲವಾಡಿ, ವರದಯ್ಯ, ಮಟಕೆರೆ ಮಹೇಶ್, ಆನಂದ, ಕೃಷ್ಣ, ಮಹಾದೇವ, ಚಂದ್ರು ಹಾದನೂರು, ಆನಂದ ಬ್ಯಾಳಾರು, ಶಿವು ಕಪ್ಪಸೋಗೆ, ಅನಿಲ ದೇಬೂರು, ಪಾಪಣ್ಣ, ರತ್ನಯ್ಯ, ಲೋಕೇಶ್, ಹೈರಿಗೆ ಕುಮಾರ್, ಅನಿಲ್, ಚಲುವರಾಜು, ಮಣಿಕಂಠ, ಸೀರಮ್ಮ, ಪಾರ್ವತಿ, ಸಬ್ ಇನ್ಸ್ ಪೆಕ್ಟರ್ ಕಿರಣ್, ದೊಡ್ಡಸಿದ್ದು, ಚಂದ್ರು, ಕಾಳಪ್ಪಾಜಿ, ಮಹೇಶ್ ಇದ್ದರು.



# ಜಗಜೀವನ್ ರಾಂ ಭವನ ನಿರ್ಮಾಣ ಕಾಮಗಾರಿ ಗುಣಮಟ್ಟದಿಂದ ಪೂರ್ಣಗೊಳಿಸಿ : ಡಾ. ಕುಮಾರ

**ಮಂಡ್ಯ:** ಬಾಬು ಜಗಜೀವನ್ ರಾಂ ಭವನ ನಿರ್ಮಾಣ ಕಾಮಗಾರಿಯನ್ನು ಯಾವುದೇ ಲೋಪದೋಷಗಳಿಗೆ ಅವಕಾಶ ನೀಡದೆ, ನಿಗದಿತ ಮಾನದಂಡಗಳಂತೆ ಗುಣಮಟ್ಟದಿಂದ ಪೂರ್ಣಗೊಳಿಸಬೇಕು ಎಂದು ಜಿಲ್ಲಾಧಿಕಾರಿಗಳಾದ ಡಾ. ಕುಮಾರ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಶುಕ್ರವಾರ ನಡೆದ ಬಾಬು ಜಗಜೀವನ್ ರಾಂ ಭವನ ನಿರ್ವಹಣಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸುಮಾರು ?3.80 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಭವನದ ಸಿವಿಲ್ ಕಾಮಗಾರಿ ಅಂತಿಮ ಹಂತ ತಲುಪಿದ್ದು, ಕಾಮಗಾರಿಯ ಪ್ರತಿಯೊಂದು ಹಂತದಲ್ಲೂ ಗುಣಮಟ್ಟವನ್ನು ಕಟ್ಟುನಿಟ್ಟಾಗಿ ಪರಿಶೀಲಿಸಬೇಕು. ಸಾರ್ವಜನಿಕರ ಉಪಯೋಗಕ್ಕೆ ಬರುವ ಈ ಕಟ್ಟಡವು ದೀರ್ಘಕಾಲ ಬಾಳಿಕೆ ಬರುವಂತೆ ಮತ್ತು ಉತ್ತಮ ಗುಣಮಟ್ಟದ ಮಾದರಿ ಕಟ್ಟಡವಾಗಿ ರೂಪುಗೊಳ್ಳುವಂತೆ ಅಧಿಕಾರಿಗಳು ವಿಶೇಷ ಗಮನಹರಿಸಬೇಕು ಎಂದು ತಿಳಿಸಿದರು.

ಭವನಕ್ಕೆ ಅಗತ್ಯವಿರುವ ಪೀಠೋಪಕರಣಗಳು, ಸೌಂಡ್ ಸಿಸ್ಟಮ್ ಸೇರಿದಂತೆ ಇತರೆ ಸೌಲಭ್ಯಗಳನ್ನು ನಿರ್ಮಿತಿ ಕೇಂದ್ರದ ಮೂಲಕ ಗುಣಮಟ್ಟದ ಮಾನದಂಡಗಳಿಗೆ ಅನುಗುಣವಾಗಿ ಅಳವಡಿಸಬೇಕು. ಕಾಮಗಾರಿಯ ಪೂರ್ಣಗೊಳಿಸುವಿಕೆಯಲ್ಲಿಯೂ ಯಾವುದೇ ನಿರ್ಲಕ್ಷ್ಯ ತೋರದೆ, ನಿಗದಿತ ಅವಧಿಯೊಳಗೆ ಎಲ್ಲ ಕೆಲಸಗಳನ್ನು ಸಮರ್ಪಕವಾಗಿ ಮುಗಿಸಬೇಕು ಎಂದು ಸೂಚಿಸಿದರು. ಸಭೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಶ್ರೀನಿವಾಸ್ ಮತ್ತು ಭವನ ನಿರ್ವಹಣಾ ಸಮಿತಿಯ ಮುಖಂಡರುಗಳು ಉಪಸ್ಥಿತರಿದ್ದರು.

# ಅಂಬೇಡ್ಕರ್ ಭವನಕ್ಕೆ ಮೂಲಸೌಕರ್ಯ ಕಲ್ಪಿಸಲು ಡಿಸಿ ಡಾ. ಕುಮಾರ ಸೂಚನೆ

**ಮಂಡ್ಯ;** ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನಕ್ಕೆ ಅಗತ್ಯ ಮೂಲಸೌಕರ್ಯಗಳನ್ನು ಹಂತ ಹಂತವಾಗಿ ಕಲ್ಪಿಸುವುದರ ಜೊತೆಗೆ, ವಿದ್ಯುತ್ ವೆಚ್ಚವನ್ನು ಕಡಿಮೆಗೊಳಿಸುವ ಉದ್ದೇಶದಿಂದ ರೂಫ್‌ಟಾಪ್ ಸೌರ ವಿದ್ಯುತ್ (ರೂಫ್‌ಟಾಪ್ ಸೋಲಾರ್) ವ್ಯವಸ್ಥೆಯನ್ನು ಅಳವಡಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಕುಮಾರ ಸೂಚಿಸಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಡಾ. ಬಿ.ಆರ್. ಅಂಬೇಡ್ಕರ್ ಭವನ ನಿರ್ವಹಣಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅಂಬೇಡ್ಕರ್ ಭವನದಲ್ಲಿ ಆಯೋಜನೆಯಾಗುವ ಕಾರ್ಯಕ್ರಮಗಳಿಂದ ಸಂಗ್ರಹವಾಗುವ ಬಾಡಿಗೆ ಆದಾಯವನ್ನು ಭವನದ ಉನ್ನತೀಕರಣ, ಅಗತ್ಯ ಮೂಲಸೌಕರ್ಯಗಳ ಅಭಿವೃದ್ಧಿ ಹಾಗೂ ಸಾರ್ವಜನಿಕರಿಗೆ ಉತ್ತಮ ಸೌಲಭ್ಯಗಳನ್ನು ಒದಗಿಸಲು ಬಳಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಭವನಕ್ಕೆ ಆಗಮಿಸುವ ಸಾರ್ವಜನಿಕರ ಅನುಕೂಲಕ್ಕಾಗಿ ಶೌಚಾಲಯ ಸೇರಿದಂತೆ ಅಗತ್ಯ ಮೂಲಸೌಕರ್ಯಗಳಿಗೆ ಆದ್ಯತೆ ನೀಡಬೇಕು. ಅಲ್ಲದೆ, ಭವನದ ಆವರಣ ಹಾಗೂ ಒಳಾಂಗಣವನ್ನು ಸ್ವಚ್ಛ, ಸುಸಜ್ಜಿತ ಮತ್ತು ಆಕರ್ಷಕವಾಗಿ ನಿರ್ವಹಿಸುವ ಮೂಲಕ ಉತ್ತಮ ವಾತಾವರಣವನ್ನು ಕಾಪಾಡಿಕೊಳ್ಳಬೇಕು ಎಂದು ಸೂಚಿಸಿದರು.




ಸಭೆಯಲ್ಲಿ ಇತ್ತೀಚೆಗೆ ನಿರ್ಮಾಣಗೊಂಡಿರುವ ಮಿನಿ ಸಭಾಂಗಣಕ್ಕೆ ಅಗತ್ಯ ಮೂಲಸೌಕರ್ಯಗಳನ್ನು ಶೀಘ್ರದಲ್ಲೇ ಕಲ್ಪಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು. ಇದೇ ವೇಳೆ, ಮಿನಿ ಸಭಾಂಗಣಕ್ಕೆ "ರಾಮಬಾಯಿ ಅಂಬೇಡ್ಕರ್ ಮಿನಿ ಸಭಾಂಗಣ" ಎಂದು ನಾಮಕರಣ ಮಾಡುವ ಕುರಿತು ಸಭೆಯಲ್ಲಿ ಚರ್ಚೆ ನಡೆಯಿತು.

ಸಭೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಮಾತನಾಡಿ 2025?26ನೇ ಸಾಲಿನಲ್ಲಿ ಅಂಬೇಡ್ಕರ್ ಭವನದಲ್ಲಿ ಒಟ್ಟು 49 ಕಾರ್ಯಕ್ರಮಗಳು ನಡೆದಿದ್ದು, ಅವುಗಳಿಂದ ರೂ.14,16,219 ಬಾಡಿಗೆ ಆದಾಯ ಸಂಗ್ರಹವಾಗಿದೆ ಎಂದು ತಿಳಿಸಿದರು.

ಸಂಗ್ರಹವಾಗುವ ಆದಾಯವನ್ನು ಭವನದ ವಿದ್ಯುತ್ ನಿರ್ವಹಣೆ, ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯ ವೇತನ ಪಾವತಿ ಹಾಗೂ ವಿವಿಧ ನಿರ್ವಹಣಾ ಕಾಮಗಾರಿಗಳಿಗೆ ಬಳಸಲಾಗುತ್ತಿದೆ ಎಂದು ವಿವರಿಸಿದರು.

ಸಭೆಯಲ್ಲಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಉಪಾಧ್ಯಕ್ಷರಾದ ವಿಜಯಲಕ್ಷ್ಮಿ ರಘುನಂದನ್, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಶ್ರೀನಿವಾಸ್ ರವರು ಉಪಸ್ಥಿತರಿದ್ದರು.

# ಹೊಳಲಿನಲ್ಲಿ. ಪಟ್ಟಲದಮ್ಮ -ಚಿತ್ತನಾಳಮ್ಮ ದೇವಿ ವಿಜೃಂಭಣೆಯ ಪೂಜೆ



**ಮಂಡ್ಯ:** ತಾಲೂಕು ಹೊಳಲು ಗ್ರಾಮದಲ್ಲಿ ಶ್ರೀ ಪಟ್ಟಲದಮ್ಮ ದೇವಿ ಶ್ರೀ ಚಿತ್ತಾಳಮ್ಮ ದೇವಿ ದೇವಸ್ಥಾನದಲ್ಲಿ ಪ್ರಥಮ ಆಷಾಢ ಶುಕ್ರವಾರದ ಪ್ರಯುಕ್ತ ಬೆಳಗಿನಿಂದಲೇ ಶ್ರೀ ಪಟ್ಟಲದಮ್ಮ ದೇವಿ ದೇವರಿಗೆ ವಿಶೇಷ ಹೂವಿನ ಅಲಂಕಾರ ಅಭಿಷೇಕ, ಕುಂಕುಮ ಅರ್ಚನೆ ನೆರವೇರಿಸಿ ವಿಶಿಷ್ಟವಾಗಿ ಪೂಜೆ ಮಾಡಲಾಯಿತು.

ಶ್ರೀ ಚಿತನಾಳಮ್ಮ ದೇವಿಗೆ ಅರಿಶಿನ ,ಕುಂಕುಮ, ಅಲಂಕಾರ ಮಾಡಿ ಪೂಜೆ ನೆರವೇರಿಸಲಾಯಿತು. ವಿಶೇಷವಾಗಿ ಶ್ರೀರಾಮ ಗೆಳೆಯರ ಬಳಗದ ವತಿಯಿಂದ ಆಷಾಢ ಮಾಸದ ಪ್ರಯುಕ್ತ ಭಕ್ತಾದಿಗಳಿಗೆ ಅನ್ನಸಂತರ್ಪಣೆಯನ್ನು ಏರ್ಪಡಿಸಲಾಗಿತ್ತು. ಮಕ್ಕಳು ಮಹಿಳೆಯರು ದೇವರಿಗೆ ವಿಶೇಷವಾಗಿ ಪೂಜೆ ನೆರವೇರಿಸಿ ಆರತಿ ಬೆಳಗಿಸಿ ಹರಕೆಯನ್ನು ತೀರಿಸಿದರು. ಶ್ರೀ ಪಟ್ಟಲದಮ್ಮ ದೇವಿಯ ಪ್ರಧಾನ ಅರ್ಚಕರಾದ ಕೃಷ್ಣಕಾಂತ್ ರವರು ಮಾತನಾಡುತ್ತಾ ಈ ದಿನ ವಿಶೇಷವಾದ್ದರಿಂದ ಪ್ರತಿಯೊಬ್ಬರೂ ದೇವರಿಗೆ ಪ್ರದಕ್ಷಣೆ ಮಾಡಿ, ಭಕ್ತಿಯಿಂದ ನೆನೆದು ಇಷ್ಟಾರ್ಥಗಳ ಸಿದ್ದಿಸಿ ಕೊಡುತ್ತಾಳೆ ಎಂದು ಹೇಳಿದರು.

ನಂತರ ಶ್ರೀರಾಮ ಗೆಳೆಯರ ಬಳಗದ ಸದಸ್ಯರಾದ ಪ್ರಶಾಂತ್ ಮಾತನಾಡುತ್ತಾ ಈ ದಿನ ವಿಶೇಷವಾದ್ದರಿಂದ ದೇವಸ್ಥಾನದ ಆವರಣದಲ್ಲಿ ಶ್ರೀ ಚಾಮುಂಡೇಶ್ವರಿ ದೇವಿಯನ್ನು ಪ್ರತಿಷ್ಠಾಪಿಸಿ ಪೂಜೆ



ನೆರವೇರಿಸಿದ್ದೇವೆ ಹಾಗೂ ಬಂದ ಭಕ್ತಾದಿಗಳಿಗೆ ಅನ್ನ ಸಂತರ್ಪಣೆಯನ್ನು ಏರ್ಪಡಿಸಲಾಯಿತು. ಪ್ರತಿಯೊಬ್ಬರಿಗೂ ಆ ತಾಯಿ ಚಾಮುಂಡೇಶ್ವರಿ ಒಳ್ಳೆಯದನ್ನು ಮಾಡಲಿ ಹಾಗೂ ನಾಡಿಗೆ ಮಳೆ ಬೆಳೆ ಕರುಣಿಸಲಿ ಎಂದು ಹೇಳಿದರು. ಈ ಸಂದರ್ಭ ದಲ್ಲಿ ದೇವಸ್ಥಾನದ ಪದಾಧಿಕಾರಿಗಳಾದ ಮಾಜಿ ಶಾಸಕರಾದ ಎಚ್. ಬಿ. ರಾಮು ,ಎಚ್ .ಎಲ್, ಶಿವಣ್ಣ, ಮೋಹನ್ ಕುಮಾರ್, ವಿಜಯ್ ಕುಮಾರ್, ರಾಮಕೃಷ್ಣ, ಅರುಣ್ ಕುಮಾರ್ , ಪತ್ರಕರ್ತ ಕೆ.ಪಿ. ಕುಮಾರ್, ಬ್ರಹ್ಮ, ಹೊಳಲು ಆಡಳಿತ ಅಧಿಕಾರಿ ಗುಣಶೇಖರ್, ವಿಶೇಷ ಪೂಜೆಯಲ್ಲಿ ದೇವರ ದರ್ಶನ ಪಡೆದರು. ದೇವಸ್ಥಾನದ ಪ್ರಧಾನ ಅರ್ಚಕರಾದ ಕೃಷ್ಣಕಾಂತ್ ,ನರಸಿಂಹಮೂರ್ತಿ, ಶ್ರೀಧರ್, ಉಪಸ್ಥಿತರಿದ್ದರು. ಅಕ್ಕ ಪಕ್ಕದ ಗ್ರಾಮದ ಸಾವಿರಾರು ಭಕ್ತಾದಿಗಳು ದೇವರ ದರ್ಶನ ಪಡೆದರು

# ಅನಾರೋಗ್ಯದ ದುರುಪಯೋಗ; ಕೋಟ್ಯಾಂತರ ರೂ. ಆಸ್ತಿ ಲಪಟಾಯಿಸಿದ ಆರೋಪ ಕ್ರಮಕ್ಕೆ ಆಗ್ರಹ

**ಮಂಡ್ಯ:** ನಗರದ ಕುವೆಂಪುನಗರ ವಾಸಿಗಳಾದ ಎಚ್.ಮಂಚಮ್ಮ ಅವರ ಅನಾರೋಗ್ಯ ಮತ್ತು ಅಸಹಾಯಕ ಪರಿಸ್ಥಿತಿಯನ್ನು ದುರುಪಯೋಗಪಡಿಸಿಕೊಂಡು, ಷಡ್ಯಂತ್ರ ರೂಪಿಸಿ ಕೋಟ್ಯಾಂತರ ರೂ. ಬೆಲೆಬಾಳುವ ಆಸ್ತಿಯನ್ನು ಲಪಟಾಯಿಸಿದವರ ವಿರುದ್ಧ ಕ್ರಮ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಡಾ.ಬಿ.ಆರ್.ಅಂಬೇಡ್ಕರ್ ಸ್ವಾಭಿಮಾನ-ಜಾಗೃತಿ ಅಭಿಯಾನ ಸಮಿತಿಯ ರಾಜ್ಯಾಧ್ಯಕ್ಷ ಸಿ.ಎಂ. ಕೃಷ್ಣ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಂಚಮ್ಮ ಅವರಿಗೆ "ವಿಲ್ ಪತ್ರ"ವೆಂದು ಸುಳ್ಳು ಮಾಹಿತಿ ನೀಡಿ, ಅವರ ಇಚ್ಛೆಗೆ ವಿರುದ್ಧವಾಗಿ ಮತ್ತು ಒತ್ತಾಯ ಪೂರ್ವಕವಾಗಿ ನಂಬಿಕೆ ದ್ರೋಹದ ಮೂಲಕ ?ಶುದ್ಧ ಕ್ರಯಪತ್ರಕ್ಕೆ ಸಹಿ ಹಾಕಿಸಿಕೊಂಡು ಮೋಸ ಮಾಡಲಾಗಿದೆ




ಎಂದರು.

ಅಲ್ಲದೇ ಸದರಿ ಸ್ವತ್ತಿನ ಮೂಲ ದಾಖಲಾತಿಗಳನ್ನು ಮಾಲೀಕರ ಮನೆಯಿಂದ ಕಳ್ಳತನ ಮಾಡಿ, ಮುತ್ತೂಟ್ ಹೌಸಿಂಗ್ ಫೈನಾನ್ಸ್, ಗಾಂಧಿನಗರ, ಮಂಡ್ಯ ಶಾಖೆಯಲ್ಲಿ ಅಡಮಾನವಿರಿಸಿ ಇಪ್ಪತ್ತು ಲಕ್ಷ ರೂ.ಗಳ ಸಾಲ ತೆಗೆದುಕೊಳ್ಳಲಾಗಿದೆ. ಮಾಲೀಕರಿಗೆ ಆರ್ಥಿಕ ದೌರ್ಜನ್ಯವೆಸಗಿ, ಪ್ರಶ್ನಿಸಿದ್ದಕ್ಕೆ ಜೀವ ಬೆದರಿಕೆ ಹಾಕಿ, ದಿನನಿತ್ಯ ಶೋಷಣೆ ಮಾಡುತ್ತಿರುವ ವಕೀಲ ಎಂ.ಎಸ್.ವೆಂಕಟೇಶ್, ಪ್ರೇಮ ವೆಂಕಟೇಶ್ ಹಾಗೂ ಇವರ ಸಹಚರರಾದ ಕೆಂಪರಾಜು, ನವೀನ್ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಎಫ್‌ಐಆರ್ ದಾಖಲಾಗಿದೆ ಎಂದರು.


ಮಂಡ್ಯ ಉಪ ನೋಂದಣಾಧಿಕಾರಿ ಧನಲಕ್ಷ್ಮಿ ರವರು ನೋಂದಣಿ ಮಾಡುವಾಗ ಅನುಸರಿಸಬೇಕಾದ ನಿಯಮಗಳನ್ನು ಗಾಳಿಗೆ ತೂರಿ ಕರ್ತವ್ಯಲೋಪವೆಸಗಿದ್ದಾರೆ. ಆರೋಪಿತ ವ್ಯಕ್ತಿಗಳಿಗೆ ಸಹಾಯ ಮಾಡುವ ರೀತಿಯಲ್ಲಿ ಪರೋಕ್ಷವಾಗಿ ವಂಚನೆ ಕೃತ್ಯದಲ್ಲಿ ಶಾಮೀಲಾಗಿದ್ದು ಜಿಲ್ಲಾ ನೋಂದಣಾಧಿಕಾರಿಯಾದ ಜಿಲ್ಲಾಧಿಕಾರಿಗಳು ಇವರನ್ನು ಅಮಾನತು ಮಾಡುವಂತೆ ಆಗ್ರಹಿಸಿದರು.

ಗೋಷ್ಠಿಯಲ್ಲಿ ಸಂತ್ರಸ್ಥೆ ಮಂಚಮ್ಮ, ಅವರ ಪತಿ ಡಿ.ತ್ಯಾಗರಾಜು, ಸಮಿತಿ ಮುಖಂಡರಾದ ಹನಕೆರೆ ಗಂಗರಾಜು, ಶ್ರೀಕಂಠ, ಗುರುಶಂಕರ್ ಇದ್ದರು.

## ಶಾಸಕ ರವಿಕುಮಾರ್ ಗೌಡ ವಿರುದ್ಧದ ಬಿ.ಆರ್. ರಾಮಚಂದ್ರ ಹೇಳಿಕೆ ಖಂಡಿಸಿದ ಕಾಂಗ್ರೆಸ್ ಮುಖಂಡರು

**ಮಂಡ್ಯ:** ಶಾಸಕ ರವಿಕುಮಾರ್ ಗೌಡ ಅವರ ವಿರುದ್ಧ ಜೆಡಿಎಸ್ ಮುಖಂಡ ಬಿ.ಆರ್. ರಾಮಚಂದ್ರ ನೀಡಿರುವ ಹೇಳಿಕೆಯನ್ನು ಕಾಂಗ್ರೆಸ್ ಮುಖಂಡರು ಖಂಡಿಸಿದರು.

ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್ ನೇತೃತ್ವದಲ್ಲಿ ಸುದ್ದಿಗೋಷ್ಠಿ ನಡೆಸಿದ ಜಿಲ್ಲ ಕಾಂಗ್ರೆಸ್ ಮುಖಂಡರು ಬಿ.ಆರಾಮಚಂದ್ರು ಅವರು ಶಾಸಕ ರವಿಕುಮಾರ್ ಅವರ ವಿರುದ್ಧ ಇಲ್ಲಸಲ್ಲದ ಆರೋಪ ಮಾಡಿದ್ದಾರೆ. ರವಿಕುಮಾರ್ ಕುಮಾರಸ್ವಾಮಿ ಅವರ ಕಾಲಿಗೆ ಬಿದ್ದು ನಮಸ್ಕಾರ ಮಾಡುತ್ತಾರೆ. ನಂತರ ಅವರನ್ನೇ ಟೀಕೆ ಮಾಡುತ್ತಾರೆ ಎಂದು ತಿಳಿಸಲು ಮಾತನಾಡಿರುವ ಶೈಲಿ ಸರಿಯಲ್ಲ ಎಂದು ಕಿಡಿ ಕಾರಿದರು.




ಈ ವೇಳೆ ಕಾಂಗ್ರೆಸ್ ವಕ್ತಾರ ಸಿ.ಎಂ. ದ್ಯಾವಪ್ಪ ಮಾತನಾಡಿ, ಕುಮಾರಸ್ವಾಮಿ ಅವರು ಹಿರಿಯರು ಅವರ ಕಾಲಿಗೆ ಬಿದ್ದು ನಮಸ್ಕಾರ ಮಾಡುವುದು ನಮ್ಮ ಸಂಸ್ಕಾರ ಅದರಲ್ಲಿ ತಪ್ಪೇನಿದೆ. ರವಿಕುಮಾರ್ ಅವರು ಕ್ಷೇತ್ರದ ಅಭಿವೃದ್ಧಿಗೆ ಕೋಟ್ಯಾಂತರ ರೂ.ಗಳ ಅನುದಾನ ತಂದಿರುವುದು ಸಹಿಸಲಾಗದೆ ಕಾಮಗಾರಿಗಳ ಸಂಬಂಧ ಆರೋಪ ಮಾಡಿದ್ದಾರೆ ಎಂದು ಆರೋಪಿಸಿದರು. ಮಂಡ್ಯ ವಿಧಾನಸಭಾ ಕ್ಷೇತ್ರದವರೇ ಅಲ್ಲದ ತಾವು ಜೆಡಿಎಸ್ ಪಕ್ಷದ ವರಿಷ್ಠರಿಗೆ ಕಪ್ಪಕಾಣಿಕೆ ನೀಡಿ ಟಿಕೆಟ್ ಪಡೆದು ಸ್ಪರ್ಧೆ ಮಾಡಿದ್ದೀರಿ. ಇಲ್ಲಿ ಪಕ್ಷಕ್ಕಾಗಿ ದುಡಿದವರಿಗೆ ಟಿಕೆಟ್ ದೊರೆಯದೇ ಅನ್ಯಾಯವಾಗಿದೆ. ಕಾಮಗಾರಿಗಳ ಸಂಬಂಧ ಚರ್ಚೆಗೆ ಶಾಸಕರು ಬೇಕಿಲ್ಲ ಕಾಂಗ್ರೆಸ್ ಮುಖಂಡರೇ ಉತ್ತರ ನೀಡುತ್ತೇವೆ ಎಂದು ಬಹಿರಂಗ ಚರ್ಚೆ ನಡೆಸಲು ಆಹ್ವಾನ ನೀಡಿದರು.

ಗೋಷ್ಠಿಯಲ್ಲಿ ಕಾಂಗ್ರೆಸ್ ಕಾರ್ಮಿಕ ವಿಭಾಗದ ಅಧ್ಯಕ್ಷ ಕೆ.ಎಂ.ರಾಮಕೃಷ್ಣ, ಜಿಲ್ಲಾ ವಕ್ತಾರ ಯೋಗೇಶ್, ಮುಖಂಡರಾದ ಪಿ.ಎನ್.ಸಿದ್ದೇಗೌಡ, ಯೋಗೇಶ್, ವಿ.ಗೀತಾ, ಚಂದ್ರಿಕಾ, ಆನಂದ್ ಇದ್ದರು.

# ಭಾರತ ದೇಶದ ಪುರಾತನ ನಗರಗಳು



| ವೀಣಾ ಹೇಮಂತ್‌ಗೌಡ ಪಾಟೀಲ್

ಜಗತ್ತಿನ ಉಳಿದೆಲ್ಲ ರಾಷ್ಟ್ರಗಳು ಆಗ ತಾನೇ ಕಣ್ತೆರೆಯುತ್ತಿರುವಾಗ ಭಾರತ ದೇಶವು ಅಗಾಧವಾದ ಜ್ಞಾನದ ಭಂಡಾರವಾಗಿ ಕಂಗೊಳಿಸುತ್ತಿತ್ತು. ಕಲೆ, ಸಾಹಿತ್ಯ, ಸಂಗೀತ, ನೃತ್ಯ, ಶಿಕ್ಷಣ, ಆಯುರ್ವೇದ, ಯೋಗ, ವ್ಯಾಪಾರ ಹೀಗೆ ಹತ್ತು ಹಲವು ವಿಷಯಗಳಲ್ಲಿ ಅಪಾರವಾದ ಅಭಿವೃದ್ಧಿಯನ್ನು ಸಾಧಿಸಿತ್ತು. ಜಗತ್ತಿನ ಉಳಿದ ಭಾಗಗಳಲ್ಲಿ ನಾಗರಿಕತೆ ಕಣ್ಣು ಬಿಡುವ ಹೊತ್ತಿಗೆ

ಭಾರತ ದೇಶದಲ್ಲಿ ಜ್ಞಾನದ ಸದುಪಯೋಗ ಪಡೆದುಕೊಳ್ಳುವ ನಿಟ್ಟಿನಲ್ಲಿ ಜನರು ತೊಡಗಿಕೊಂಡಿದ್ದರು.

ಅದೆಷ್ಟೇ ನಾಗರಿಕತೆಗಳು ಬಂದು ಹೋದರೂ, . ಸಾಮ್ರಾಜ್ಯಗಳು ಉರುಳಿದರೂ, ಶತಶತಮಾನಗಳು ಕಳೆದರೂ, ಕೆಲ ನಗರಗಳು ಮಾತ್ರ ಭಾರತದಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಬಂದವು. ಎಲ್ಲವನ್ನು ಕಳೆದುಕೊಂಡು ಸುಟ್ಟು ಬೂದಿಯಾದರೂ ಕೂಡ ಮತ್ತೆ ಫೀನಿಕ್ಸ್ ನಂತೆ ಉಳಿಸಿ ಬರುವ ಈ ನಗರಗಳಲ್ಲಿ ಧಾರ್ಮಿಕ, ಆಧ್ಯಾತ್ಮಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ತಲೆ ನಿರಂತರವಾಗಿ ತನ್ನ ಕುರುಹನ್ನು ಸಾರುತ್ತಿತ್ತು. ಇಲ್ಲಿ ಇತಿಹಾಸವು ಕೇವಲ ಲಿಪಿಗಳಲ್ಲಿ ದೊರೆಯುವುದಿಲ್ಲ, ಬದಲಾಗಿ ಆ ನಗರಗಳೇ ಜೀವಂತ ಪ್ರದರ್ಶನಾಲಯಗಳಾಗಿದ್ದು ತಮ್ಮ ಐತಿಹಾಸಿಕ, ಧಾರ್ಮಿಕ ಕಥೆಯನ್ನು ಸಾರಿ ಹೇಳುತ್ತವೆ. ನಮ್ಮಲ್ಲಿರುವ ದೇವಸ್ಥಾನಗಳು, ಸಂಪ್ರದಾಯಗಳು, ಹಬ್ಬ ಹುಣ್ಣಿಮೆಗಳು ಹಾಗೂ ದೈನಂದಿನ ಬದುಕಿನಿಂದ ತಮ್ಮ ಅಸ್ಮಿತೆಯನ್ನು ತೋರುತ್ತವೆ. ಅಂತಹ ಕೆಲ ನಗರಗಳನ್ನು ಇಲ್ಲಿ ನೋಡೋಣ.

ಮೊದಲನೆಯದ್ದು ವಾರಣಾಸಿ.

ವಾರಣಾಸಿ.... ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಕಾಶಿಯ ವಿಶ್ವನಾಥ ಮಂದಿರವೂ ಒಂದು. ಭಾರತ ದೇಶದ ಪ್ರತಿ ಶ್ರದ್ಧಾಳುವಿನ ಮನದಲ್ಲಿ ಪುಳಕವನ್ನು ಉಂಟುಮಾಡುವ ಈ ವಾರಣಾಸಿ ನಗರವು ಕೇವಲ ಜನರು ವಾಸಿಸುವ ಪ್ರದೇಶ ಮಾತ್ರವಲ್ಲ ಇದು ಅವರ ಭಕ್ತಿ ಭಾವದ ಉತ್ತುಂಗದ ಪ್ರತೀಕ. ಶಿವನು ವಿಶ್ವನಾಥನಾಗಿ, ತಾಯಿ ಪಾರ್ವತಿಯು ವಿಶಾಲಾಕ್ಷಿಯಾಗಿ ವಾಸ ಮಾಡುತ್ತಿದ್ದ ಜಾಗ. ಜಗತ್ತಿನ ಅತ್ಯಂತ ಪ್ರಾಚೀನ ನಗರ ಎಂದು ಗುರುತಿಸಲ್ಪಡುವ ಈ ನಗರವು ವಾರಣಾ ಮತ್ತು ಅಸಿ ಎಂಬ ಎರಡು ನದಿಗಳ ಹೆಸರನ್ನು ತನ್ನದಾಗಿಸಿಕೊಂಡು ವಾರಣಾಸಿಯಾಗಿದೆ ಆಸ್ತಿಕ ಶ್ರದ್ಧಾಳುಗಳು ಇದನ್ನು ಕಾಶಿ ಎಂದು ಕರೆಯುತ್ತಾರೆ. ರಾಜ ಮನುವಿನ ರಾಜಧಾನಿಯಾಗಿರುವ ಕಾಶಿಯು ಸನಾತನ ಧರ್ಮದ ಹೃದಯವಾಗಿದೆ. ಪವಿತ್ರ ಗಂಗಾ ನದಿಯು ಹರಿಯುತ್ತಿರುವ ಈ ಪ್ರದೇಶವು ಸತ್ಯಕ್ಕಾಗಿ ತನ್ನ ಬದುಕನ್ನು ಮುಡುಪಾಗಿಟ್ಟ ರಾಜ ಹರಿಶ್ಚಂದ್ರನ ಕರ್ಮಭೂಮಿಯಾಗಿತ್ತು.. ಇಲ್ಲಿಯೇ ಹರಿಶ್ಚಂದ್ರ ಮಹಾರಾಜನು ಸ್ಮಶಾನ ಕಾಯ್ದದ್ದು. ಕಾಶಿಯಲ್ಲಿ ಸತ್ತರೆ ಆ ವ್ಯಕ್ತಿಯು ಜೀವನ್ಮರಣಗಳ ಚಕ್ರದ ಸುಳಿಯಲ್ಲಿ ಸಿಲುಕದೆ ಮೋಕ್ಷ ಪಡೆಯುತ್ತಾನೆ ಎಂಬ ನಂಬಿಕೆಯು ನಮ್ಮ ಭಾರತೀಯ ಶ್ರದ್ಧಾಳುಗಳಲ್ಲಿ ಇದೆ. ಬದುಕಿನಲ್ಲಿ ಕಾಶಿಯನ್ನು ಒಮ್ಮೆ ದರ್ಶಿಸಿದರೆ ಎಲ್ಲ ಪಾಪಗಳಿಂದ ಮುಕ್ತವಾಗಬಹುದು ಎಂಬ ಭಾವ ಎಲ್ಲ ಭಾರತೀಯ

ಜನರದ್ದು. ಕಾಶಿಯಲ್ಲಿ ಪಂಡಿತ್ ಮದನ್ ಮೋಹನ್ ಮಾಲವಿಯಾ ಅವರು ಸ್ಥಾಪಿಸಿದ ಬನಾರಸ ಹಿಂದೂ ವಿಶ್ವವಿದ್ಯಾಲಯವು ಇದ್ದು ಇಲ್ಲಿ ಎಲ್ಲ ಬಗೆಯ ವಿದ್ಯೆಗಳನ್ನು ಶಾಸ್ತ್ರೋಕ್ತವಾಗಿ ಕಲಿಯುವ ವ್ಯವಸ್ಥೆ ಇದೆ. ಜಂಗಮ ಮಠದ ಪೀಠಾಧಿಪತಿಗಳು ಕೂಡ ಮೊದಲು ಇಲ್ಲಿ ಅಧ್ಯಯನ ಮಾಡಿಯೇ ನಂತರ ತಮ್ಮ ತಮ್ಮ ನಿಯೋಜಿತ ಸ್ಥಳಗಳಲ್ಲಿ ಕಾರ್ಯ ಆರಂಭ ಮಾಡುತ್ತಾರೆ.

ಉಜ್ಜಯಿನಿ.... ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದಾದ ಮಹಾಕಾಲೇಶ್ವರನ ಮಂದಿರವು ಇಲ್ಲಿದೆ. ಕೃಷ್ಣ ಬಲರಾಮ ಹಾಗೂ ಸುಧಾಮರು ಕಲಿತ ಸಂದೀಪನಿ ಮಹರ್ಷಿಗಳ ಆಶ್ರಮವು ಇಲ್ಲಿಯೇ ಇತ್ತು. ಜ್ಯೋತಿಷ್ಯ ಶಾಸ್ತ್ರಕ್ಕೆ ಹೆಸರಾದ ಈ ಮಹಾನಗರದಲ್ಲಿ ಸಂಸ್ಕೃತ ವ್ಯಾಕರಣ ಖಗೋಳಗಳ ಶಾಸ್ತ್ರದ ಎಲ್ಲ ಬಗೆಯ ಅಭ್ಯಾಸಕ್ಕೆ ಅನುಕೂಲಕರ ವಾತಾವರಣ ಇತ್ತು. ಕ್ಷಿಪ್ರಾ ನದಿಯ ದಂಡೆಯಲ್ಲಿ ಇರುವ ಈ ನಗರದಲ್ಲಿ ಪ್ರತಿ 12 ವರ್ಷಗಳಿಗೊಮ್ಮೆ ಕುಂಭಮೇಳ ನಡೆಯುತ್ತದೆ. ಉಜ್ಜಯಿನಿಯ ರಾಮಘಾಟ್ ನಲ್ಲಿ ಸಾವಿರಾರು ಲಕ್ಷಾಂತರ ಜನ ಪವಿತ್ರ ಸ್ನಾನಗೆ?ದು

ಧನ್ಯತಾ ಭಾವವನ್ನು ಅನುಭವಿಸುತ್ತಾರೆ. ನಾಲ್ಕನೇ ಶತಮಾನದಿಂದಲೇ ಉಜ್ಜಯಿನಿಯು ಜ್ಯೋತಿಷ್ಯ ಶಾಸ್ತ್ರದ ಅಧ್ಯಯನ ಕೇಂದ್ರವಾಗಿದ್ದು ನಕ್ಷತ್ರಗಳು ಹಾಗೂ ಗ್ರಹಗಳ ಚಲನೆಯ ಆಧಾರದ ಮೇಲೆ ವೇದ ಶಾಲೆಯ ವೀಕ್ಷಣಾಲಯವನ್ನು ಇಲ್ಲಿ ತೆರೆಯಲಾಗಿದ್ದು 1726 ರಲ್ಲಿ ಇದನ್ನು ಪುನರ್ ನಿರ್ಮಿಸಿ ಜಂತರ್ ಮಂತರ್ ಎಂದು ಕರೆಯಲಾಗಿದೆ.

ಮಧುರೈ.... ಮೀನಾಕ್ಷಿ ಅಮ್ಮ ಎಂದೇ ಕರೆಯಲ್ಪಡುವ ಮಧುರೈ ಮೀನಾಕ್ಷಿ ತಾಯಿಯ ಬೃಹತ್ ದೇವಸ್ಥಾನವು ಇಲ್ಲಿದ್ದು ತಮಿಳರ ಸಂಸ್ಕೃತಿ, ಸಾಹಿತ್ಯ ಮತ್ತು ಭಕ್ತಿ ಭಾವಗಳ ಕಳೆದ ನೂರಾರು ವರ್ಷಗಳಿಂದ ಇಲ್ಲಿ ತಾಂಡವವಾಡುತ್ತಿದೆ. ಎರಡುವರೆ ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿರುವ ಮಧುರೈ ನಗರವು ಪೂರ್ವದ ಅಥೆನ್ಸ್ ನಗರ ಎಂದು ಕರೆಯಲ್ಪಟ್ಟಿದೆ. ಸಾವಿರ ಕಂಬಗಳ ಅತಿ ದೊಡ್ಡ ಸಭಾಂಗಣ, 17ನೇ ಶತಮಾನದಲ್ಲಿ ನಿರ್ಮಿತವಾದ ದ್ರಾವಿಡ ಶೈಲಿಯ ಕೆತ್ತನೆಯನ್ನು ಹೊಂದಿದ ಶಿಲ್ಪಕಲೆಯ ಬೀಡು, ಬೃಹದಾಕಾರದ ಗೋಪುರಗಳನ್ನು ಹೊಂದಿದ ದೇವಾಲಯಗಳ ನಿಶ್ಚಯವಾಗಿರುವ ಈ ನಗರ ತಮಿಳರ ಹೃದಯದ ಭಾಗ. ಎಂದೂ ಮಲಗದ ನಗರ ಎಂದೇ ಹೆಸರಾಗಿರುವ ಮಧುರೈ ನಗರವು. ಮಧುರೈ ಮಲ್ಲಿಗೆಯು ಅತ್ಯಂತ ಪ್ರಸಿದ್ಧವಾದ ಮಲ್ಲಿಗೆಯ ತಳಿಯಾಗಿದ್ದು ಸುಗಂಧದ ದ್ರವ್ಯಗಳ ಬಳಕೆಗೆ ಅಂತರಾಷ್ಟ್ರೀಯವಾಗಿ ರಫ್ತು ಮಾಡಲಾಗುತ್ತದೆ.

ಮಧುರೈ ಗೆ ಅತ್ಯಂತ ಹತ್ತಿರದಲ್ಲಿ ಇತ್ತೀಚೆಗೆ ಉತ್ಖನನ ಮಾಡಲಾದ ಖೀಜಡಿ ಎಂಬ ಪ್ರದೇಶದಲ್ಲಿ ಸಿಂಧು ಕಣಿವೆಯ ನಾಗರಿಕತೆಯನ್ನು ಹೋಲುವ ಅವಶೇಷಗಳು ದೊರೆತಿದ್ದು ಸಂಗಮ ಕಾಲದ ಅವಶೇಷಗಳು ಎಂದು ಊಹಿಸಲಾಗಿದೆ.

ಪಾಟಲಿಪುತ್ರ..... ಪ್ರಸ್ತುತ ಬಿಹಾರದ ರಾಜಧಾನಿಯಾಗಿರುವ ಪಾಟ್ನಾ ಎಂಬ ಹೆಸರಿನಿಂದ ಕರೆಯಲ್ಪಡುವ ಮೌರ್ಯ ಹಾಗೂ ಗುಪ್ತ ಸಾಮ್ರಾಜ್ಯಗಳ ರಾಜಧಾನಿಯಾಗಿದ್ದ ಪಾಟಲಿಪುತ್ರವು ಸಾಮ್ರಾಟ್ ಅಶೋಕನ ರಾಜಧಾನಿಯಾಗಿತ್ತು. ಭಾರತ ದೇಶದ ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ಹಿರಿಮೆಗಳನ್ನು ಸಾರುವ ಕೇಂದ್ರವಾಗಿತ್ತು. ರಾಜ ಅಜಾತಶತ್ರುವಿನ ರಾಜಧಾನಿ ಪಾತಲಿ ಗ್ರಾಮವಾಗಿದ್ದು, ಅತಿ ದೊಡ್ಡ ಪೊಲೀಸ್ ವ್ಯವಸ್ಥೆಯನ್ನು ಹೊಂದಿತ್ತು.

22 ಕಿ.ಮೀ ಸುತ್ತಳತೆಯ 64 ದ್ವಾರಗಳನ್ನು ಹೊಂದಿದ 574 ಗೋಪುರಗಳನ್ನು ಹೊಂದಿದ ವಿಶಾಲವಾದ ನಗರ ಅದಾಗಿತ್ತು. ಪಾಟಲಿಪುತ್ರವು ಗಂಗೆ, ಸೋನ ಹಾಗೂ ಗಂಧಕ ನದಿಗಳಿಂದ ಸುತ್ತುವರೆದಿದ್ದು ವೈರಿಗಳು ಆಕ್ರಮಿಸಿಕೊಳ್ಳಲು ಸಾಧ್ಯವಾಗದ ರೀತಿಯಲ್ಲಿ ಜಲದುರ್ಗ ಎನಿಸಿಕೊಂಡಿತ್ತು. ಇಲ್ಲಿ ಇರುವ ಬಹುತೇಕ ನದಿಗಳು ಅರಬ್ಬಿ ಸಮುದ್ರವನ್ನು ಸೇರುತ್ತಿದ್ದ ಕಾರಣ ಮಧ್ಯ ಏಷ್ಯಾದೊಂದಿಗೆ ಇದು ವ್ಯಾಪಾರ ವ್ಯವಹಾರಗಳ ಸಂಪರ್ಕವನ್ನು ಹೊಂದಿದ ಬಹುದೊಡ್ಡ ಬಂದರು ಪ್ರದೇಶವಾಗಿತ್ತು. ಮೌರ್ಯರ ರಾಜಕೀಯ ಗುರು ಚಾಣಕ್ಯ, ಶೂನ್ಯವನ್ನು ಕಂಡುಹಿಡಿದ ಆರ್ಯಭಟ ಹಾಗೂ ಕಾಮಸೂತ್ರದ ಕರ್ತೃ ವಾತ್ಸಾಯನ ಈ ಭಾಗಕ್ಕೆ ಸೇರಿದವರಾಗಿದ್ದರು. ಬೌದ್ಧ ಮತ್ತು ಜೈನ ಧರ್ಮಗಳಿಗೆ ಆಶ್ರಯ ತಾಣವಾಗಿದ್ದ ಪಾಟಲಿಪುತ್ರದಲ್ಲಿ ಮೂರನೇ ಅತಿದೊಡ್ಡ ಬೌದ್ಧ ಸಮ್ಮೇಳನ ನಡೆದಿತ್ತು.

ವೈಶಾಲಿ.... ಬಿಹಾರದ ಜಿಲ್ಲಾ ಕೇಂದ್ರವಾಗಿರುವ ವೈಶಾಲಿಯು ಒಂದೊಮ್ಮೆ ಬೌದ್ಧ ಮತ್ತು ಜೈನ ಧರ್ಮಗಳ ಕೇಂದ್ರವಾಗಿತ್ತು. ಜೈನ ತೀರ್ಥಂಕರರಾದ ಮಹಾವೀರರು ಜನಿಸಿದ ಸ್ಥಳ ವೈಶಾಲಿ. ಮಹಾಭಾರತ ಕಾಲದಲ್ಲಿ ವಿಶಾಲ ಎಂಬ ಮಹಾರಾಜನ ಹೆಸರಿನಲ್ಲಿ ವೈಶಾಲಿ ಎಂಬ ಊರನ್ನು ನಿರ್ಮಾಣ ಮಾಡಲಾಯಿತು. ಬುದ್ಧನು ತನ್ನ ಕೊನೆಯ ಪ್ರವಚನವನ್ನು ಇಲ್ಲಿಯೇ ಮಾಡಿದ್ದನು ಎಂದು ಹೇಳಲಾಗುತ್ತದೆ. ಅಮರಪಾಲಿ, ಅಂಬಾಪಾಲಿ ಎಂದೆಲ್ಲಾ ಕರೆಯಲ್ಪಡುವ ವೇಶ್ಯೆಯೊಬ್ಬಳು ಮುಂದೆ ದೊಡ್ಡ ಬೌದ್ಧ ಸಾಧಕಿಯಾಗಿದ್ದ ಕಥೆಯನ್ನು ನಾವು ಕೇಳಿಯೇ ಇದ್ದೇವೆ, ಆಕೆಯ ಊರು ಕೂಡ ವೈಶಾಲಿಯೇ.

ಕಾಂಚಿಪುರ..... ಸಾವಿರಾರು ದೇಗುಲಗಳನ್ನು ಹೊಂದಿರುವ ದಂತಕಥೆಯ ಊರು ಕಾಂಚಿಪುರ. ವಾಸ್ತುಶಿಲ್ಪ, ತತ್ವಶಾಸ್ತ್ರ ಹಾಗೂ ಆಧ್ಯಾತ್ಮಿಕ ಕಲಿಕೆಯ ಅತಿ ದೊಡ್ಡ ಕೇಂದ್ರವಾಗಿದ್ದ ಕಾಂಚಿಪುರದಲ್ಲಿ ಅನೇಕ ಗುರುಕುಲಗಳು ಇದ್ದವು. ಈ ಊರುಗಳು ಕೇವಲ ನಗರಗಳಾಗಿರಲಿಲ್ಲ ಆದರೆ ಭಾರತೀಯ ನಾಗರಿಕತೆಯ ಪುರಾತನ ಕೇಂದ್ರಗಳಾಗಿದ್ದವು.

ಈ ಎಲ್ಲಾ ಊರುಗಳಲ್ಲಿನ ಪ್ರತಿಯೊಂದು ದೇವಸ್ಥಾನ, ಪ್ರತಿಯೊಂದು ಕಲ್ಲು, ಪ್ರತಿಯೊಂದು ಓಣಿ ಹಲವಾರು ತಲೆಮಾರುಗಳ ಕಥೆಯನ್ನು ಹೇಳುತ್ತದೆ. ನಮ್ಮ ದೇಶದ ಸಾಂಸ್ಕೃತಿಕ ಪಯಣದ ಇತಿಹಾಸವನ್ನು ಭೂಮಿಯ ಅಡಿಯಲ್ಲಿ ಕೂತು ಹಾಕಲಾಗಿಲ್ಲ.

ನಮ್ಮ ಸಂಸ್ಕೃತಿಯ ಹಿರಿಮೆಯನ್ನು ಅರಿತುಕೊಂಡು ಗೌರವಿಸೋಣ. ಅದನ್ನು ಎತ್ತಿ ಹಿಡಿಯುವ ನಿಟ್ಟಿನಲ್ಲಿ ನಮ್ಮ ಕೈಲಾದಷ್ಟು ಪ್ರಯತ್ನವನ್ನು ಮಾಡೋಣ.... ಏನಂತೀರಾ ಸ್ನೇಹಿತರೆ ?



# ಸಾಮಾಜಿಕ ಜಾಲತಾಣಗಳಲ್ಲಿ ಭಯ ಹುಟ್ಟಿಸಿ ಹಣಗಳಿಸುವ ವ್ಯವಸ್ಥಿತ ಉದ್ಯಮ

ಇತ್ತೀಚಿನ ದಿನಗಳಲ್ಲಿ ಬೆಳಗ್ಗೆ ಎದ್ದು ಮೊಬೈಲ್ ಕೈಗೆತ್ತಿಕೊಂಡರೆ ಸಾಕು?"ನಾವು ತಿನ್ನುವ ಆಹಾರದಲ್ಲಿ ಅಡಗಿರುವ ವಿಷ", "ಮುಂದಿನ ದಿನಗಳಲ್ಲಿ ಎದುರಾಗಲಿರುವ ಆರ್ಥಿಕ ಕುಸಿತ", ಅಥವಾ "ನಮ್ಮ ಆರೋಗ್ಯವನ್ನು ಆಪೋಶನ ತೆಗೆದುಕೊಳ್ಳುತ್ತಿರುವ ಗುಪ್ತ ಕಾಯಿಲೆಗಳು"?ಹೀಗೆ ಸಾಲು ಸಾಲು ಆತಂಕಕಾರಿ ವಿಷಯಗಳು ನಮ್ಮ ಪರದೆಯ ಮೇಲೆ ಪ್ರತ್ಯಕ್ಷವಾಗುತ್ತವೆ. ಜಾಗತಿಕ ಮಟ್ಟದಲ್ಲಿ ಇದನ್ನು 'ಡೂಮ್-ಸ್ಕ್ರೋಲಿಂಗ್' (ಆಠಠಟ-ಥಿಡಿಠಟಟುಟಿರ) ಅಥವಾ ಕೆಟ್ಟ ಸುದ್ದಿಗಳನ್ನೇ ಸತತವಾಗಿ ಓದುವ ವ್ಯಸನ ಎಂದು ಕರೆಯಲಾಗುತ್ತದೆ. ಇದು ಕೇವಲ ಕಾಕತಾಳೀಯವಲ್ಲ. ಇದರ ಹಿಂದೆ ಮಾನವನ ಮೆದುಳಿನ ಸೂಕ್ಷ್ಮತೆಗಳನ್ನು ಬಳಸಿಕೊಂಡು ಹಣ ಮಾಡುವ ವ್ಯವಸ್ಥಿತ ತಂತ್ರಜ್ಞಾನ ಮತ್ತು ಉದ್ಯಮ ಕೆಲಸ ಮಾಡುತ್ತಿದೆ.

1. **ಭೀತಿಯೇ ಇಲ್ಲಿನ ಬಂಡವಾಳ (The Algorithm of Fear):** ಮಾನವನ ವಿಕಾಸದ ಇತಿಹಾಸವನ್ನು ಗಮನಿಸಿದರೆ, ನಮ್ಮ ಮೆದುಳು ಧನಾತ್ಮಕ ವಿಷಯಗಳಿಗಿಂತಲೂ ಅಪಾಯದ ಮುನ್ಸೂಚನೆಗಳಿಗೆ ಬೇಗನೆ ಸ್ಪಂದಿಸುತ್ತದೆ. ಇದನ್ನು ಮನಃಶಾಸ್ತ್ರದಲ್ಲಿ 'ನೆಗೆಟಿವಿಟಿ ಬಯಾಸ್' (ಓಜಠಚಿಣುತುಣಥಿ ಏಚಿ) ಅಥವಾ ನಕಾರಾತ್ಮಕತೆಯ ಕಡೆಗಿನ ಸಹಜ ಒಲವು ಎನ್ನಲಾಗುತ್ತದೆ. ಕಾಡಿನಲ್ಲಿ ಬದುಕುತ್ತಿದ್ದ ಕಾಲದಲ್ಲಿ ಪ್ರಾಣಿಗಳಿಂದ ಆತ್ಮರಕ್ಷಣೆ ಮಾಡಿಕೊಳ್ಳಲು ಈ ಗುಣ ಅನಿವಾರ್ಯವಾಗಿತ್ತು.

ಆದರೆ, ಇಂದಿನ ತಂತ್ರಜ್ಞಾನ ಸಂಸ್ಥೆಗಳು ಇದನ್ನೇ ತಮ್ಮ ಲಾಭಕ್ಕೆ ಬಳಸಿಕೊಳ್ಳುತ್ತಿವೆ. ನಾವು ಒಂದು ಆತಂಕಕಾರಿ ಸುದ್ದಿಯ ಮೇಲೆ ಕೆಲವು ಸೆಕೆಂಡುಗಳ ಕಾಲ ಕಣ್ಣಿಟ್ಟರೆ, ಅಲ್ಲಿನ ಅಲ್ಗಾರಿದಮ್ (ಂಟರಠಡಿಣಘಟ) ಅದನ್ನು ಗುರುತಿಸುತ್ತದೆ. ನಮಗೆ ಆ ವಿಷಯದಲ್ಲಿ ಆಸಕ್ತಿ ಇದೆ ಎಂದು ಭಾವಿಸಿ, ಅಂತಹದ್ದೇ ನೂರಾರು ನಕಾರಾತ್ಮಕ ವಿಡಿಯೋ ಅಥವಾ ಬರಹಗಳನ್ನು ನಮ್ಮ ಫೀಡ್‌ಗೆ ತಂದು ಸುರಿಯುತ್ತದೆ. ಬಳಕೆದಾರರು ಎಷ್ಟು ಹೆಚ್ಚು ಸಮಯ ಪರದೆಯ ಮೇಲೆ ಕಳೆಯುತ್ತಾರೋ, ಅಷ್ಟು ಹೆಚ್ಚು ಜಾಹೀರಾತುಗಳು ಪ್ರದರ್ಶನಗೊಳ್ಳುತ್ತವೆ; ಕಂಪನಿಗಳ ಆದಾಯವೂ ಅಷ್ಟು ಹೆಚ್ಚಾಗುತ್ತದೆ.

1. ಸಮಸ್ಯೆ ಮತ್ತು ಪರಿಹಾರದ ವಾಣಿಜ್ಯ ಚಕ್ರ

ಸೋಷಿಯಲ್ ಮೀಡಿಯಾದಲ್ಲಿ ಸಕ್ರಿಯರಾಗಿರುವ ಅನೇಕ ಪ್ರಭಾವಿಗಳು (Influencers)ಜನರಲ್ಲಿ ಆತಂಕ ಬಿತ್ತಲು ಮೂರು ಹಂತಗಳ ಸರಳ ಸೂತ್ರವನ್ನು ಬಳಸುತ್ತಾರೆ: ಆತಂಕದ ಸೃಷ್ಟಿ: ಮೊದಲು ನಮ್ಮ ನಿತ್ಯ ಜೀವನದ ಸಾಮಾನ್ಯ ಸಂಗತಿಯೊಂದನ್ನು ತೀವ್ರ ಅಪಾಯಕಾರಿ ಎಂಬಂತೆ ಬಿಂಬಿಸುವುದು. (ಉದಾಹರಣೆಗೆ: "ನಿಮ್ಮ ಹೊಟ್ಟೆಯ ಆರೋಗ್ಯ ಹಾಳಾಗಲು ನೀವು ಪ್ರತಿದಿನ




ಕುಡಿಯುವ ಕಾಫಿಯೇ ಕಾರಣ!")

ಅಪರಾಧ ಪ್ರಜ್ಞೆಯ ಜಾಗೃತಿ: ನಿಮ್ಮ ಆಯಾಸ, ತೂಕ ಹೆಚ್ಚಳ ಅಥವಾ ಮಾನಸಿಕ ಒತ್ತಡಕ್ಕೆ ಈ ನಿರ್ದಿಷ್ಟ ಅಂಶವೇ ಕಾರಣ ಎಂದು ನಂಬಿಸುವುದು.

ಪರಿಹಾರದ ಮಾರಾಟ: ಕೊನೆಯಲ್ಲಿ, ಈ ಆತಂಕದಿಂದ ಪಾರಾಗಲು ತಮ್ಮದೇ ಆದ ಒಂದು ದುಬಾರಿ ಪ್ರೋಟೀನ್ ಪೌಡರ್, ಹೆಲ್ತ್ ಕೋರ್ಸ್ ಅಥವಾ ಪೇಯ್ಡ್ ನ್ಯೂಸ್‌ಲೆಟರ್ ಅನ್ನು ಖರೀದಿಸುವಂತೆ ಪ್ರೇರೇಪಿಸುವುದು.

ಇದು ಆರೋಗ್ಯ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿಲ್ಲ. ಷೇರು ಮಾರುಕಟ್ಟೆ, ರಿಯಲ್ ಎಸ್ಟೇಟ್ ಮತ್ತು ಕೌಟುಂಬಿಕ ಸಂಬಂಧಗಳ ವಿಷಯದಲ್ಲೂ ಇಂತಹದ್ದೇ ಭೀತಿಯ ಮಾರುಕಟ್ಟೆ ಸೃಷ್ಟಿಯಾಗಿದೆ.

1. **ನಕಲಿ ವಿಜ್ಞಾನ ಮತ್ತು 'ಸ್ಯೂಡೋ-ಸೈನ್ಸ್' ಹಾವಳಿ**

ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳು ವೈಜ್ಞಾನಿಕ ಮುಖವಾಡ ಧರಿಸಿದ ಸುಳ್ಳು ಮಾಹಿತಿಗಳ (Pseudo-science) ಕೇಂದ್ರಗಳಾಗಿವೆ. ಬಿಳಿ ಕೋಟು ಧರಿಸಿದ ಅಥವಾ ಹೆಸರಿನ ಮುಂದೆ 'ಡಾಕ್ಟರ್' ಎಂದು ಹಾಕಿಕೊಂಡ ತಕ್ಷಣ ಜನರು ಅವರ ಮಾತುಗಳನ್ನು ಸುಲಭವಾಗಿ ನಂಬುತ್ತಾರೆ. ಯಾವುದೇ ಕ್ಲಿನಿಕಲ್ ಪ್ರಯೋಗಗಳಿಲ್ಲದ, ಸೂಕ್ತ ಸಂಶೋಧನೆಗಳಿಲ್ಲದ ದೇಶಿ ಅಥವಾ ವಿದೇಶಿ ಮೂಲಿಕೆಗಳನ್ನು "ಕ್ಯಾನ್ಸರ್ ಮುಕ್ತ ಜಗತ್ತು" ಅಥವಾ "ಮಧುಮೇಹಕ್ಕೆ ರಾಮಬಾಣ" ಎಂದು ಪ್ರಚಾರ ಮಾಡಲಾಗುತ್ತದೆ. ಆಧುನಿಕ ವೈದ್ಯಕೀಯ ಪದ್ಧತಿಯ ಬಗ್ಗೆ ಜನರಲ್ಲಿ ತೀವ್ರ ಭಯ ಮತ್ತು ಅಪನಂಬಿಕೆ ಹುಟ್ಟುಹಾಕುವುದು ಈ ಉದ್ಯಮದ ಮೊದಲ ತಂತ್ರ. ಈ ಭೀತಿಯ ವಾತಾವರಣದಿಂದಾಗಿ ರೋಗಿಗಳು ನಿಜವಾದ ಚಿಕಿತ್ಸೆಯನ್ನು ಅರ್ಧಕ್ಕೆ ನಿಲ್ಲಿಸಿ ಪ್ರಾಣಕ್ಕೆ ಕುತ್ತು ತಂದುಕೊಂಡ ಉದಾಹರಣೆಗಳು ನಮ್ಮ ದೇಶದಲ್ಲಿ ಸಾಕಷ್ಟಿವೆ.

1. ಯುವ ಪೀಳಿಗೆ ಮತ್ತು ಮಕ್ಕಳ ಮೇಲಿನ ಸೌಮ್ಯ ವಿಷ

ಈ ಆತಂಕದ ಉದ್ಯಮಕ್ಕೆ ಅತಿ ಸುಲಭವಾಗಿ ಬಲಿಯಾಗುತ್ತಿರುವುದು ಇಂದಿನ ಯುವ ಪೀಳಿಗೆ. ಹದಿಹರೆಯದವರಲ್ಲಿ ತಾವೆಲ್ಲೋ ಉಳಿದುಬಿಡುತ್ತಿದ್ದೇವೆ ಎನ್ನುವ 'ಫೋಮೋ' (FOMO - Fear of Missing Out) ಭಾವನೆ ತೀವ್ರವಾಗಿರುತ್ತದೆ. ತಮಗಿಂತ ಇತರರು ಸುಂದರವಾಗಿದ್ದಾರೆ, ಶ್ರೀಮಂತರಾಗಿದ್ದಾರೆ ಅಥವಾ ಹೆಚ್ಚು ಸಂತೋಷವಾಗಿದ್ದಾರೆ ಎಂಬ ಭ್ರಮೆಯನ್ನು ಇನ್‌ಸ್ಟಾಗ್ರಾಮ್‌ನಂತಹ ಆಪ್‌ಗಳು ಸೃಷ್ಟಿಸುತ್ತವೆ. ಇದರ ಜೊತೆಗೆ, ಕೆರಿಯರ್ ಗೈಡೆನ್ಸ್ ಹೆಸರಿನಲ್ಲಿ "ನೀವು 25 ವರ್ಷಕ್ಕೆ ಕೋಟ್ಯಧಿಪತಿಯಾಗದಿದ್ದರೆ ನಿಮ್ಮ ಜೀವನ ವ್ಯರ್ಥ" ಎಂದು ಬಿಂಬಿಸುವ ರೀಲ್ಸ್‌ಗಳು ಯುವಕರಲ್ಲಿ ಕೀಳರಿಮೆ ಮತ್ತು ಖಿನ್ನತೆಯನ್ನು ಬಿತ್ತುತ್ತಿವೆ. ಪರಿಣಾಮವಾಗಿ, ಇಂದಿನ ಯುವಕರಲ್ಲಿ ತಾಳ್ಮೆ ಕಡಿಮೆಯಾಗುತ್ತಿದ್ದು, ಅತಿ ಶೀಘ್ರವಾಗಿ ಆತಂಕದ ಕಾಯಿಲೆಗಳಿಗೆ (Anxiety disorders) ತುತ್ತಾಗುತ್ತಿದ್ದಾರೆ.

1. **ಸಾಮಾಜಿಕ ಪರಿಣಾಮಗಳು:** ನಮ್ಮ ಸಾಂಪ್ರದಾಯಿಕ ಮತ್ತು ಭಾವನಾತ್ಮಕ ಸಮಾಜದಲ್ಲಿ ಇದರ ಪರಿಣಾಮಗಳು ಕೊಂಚ ಆಳವಾಗಿವೆ. ನಮ್ಮಲ್ಲಿ ಕೌಟುಂಬಿಕ ಮೌಲ್ಯಗಳು ಮತ್ತು ಆರೋಗ್ಯದ ಬಗ್ಗೆ ಕಳಕಳಿ ಹೆಚ್ಚು. ಇದನ್ನೇ ಬಂಡವಾಳ ಮಾಡಿಕೊಳ್ಳುವ ಜಾಲತಾಣಗಳು, ವಾಟ್ಸಾಪ್ ಯೂನಿವರ್ಸಿಟಿಗಳ ಮೂಲಕ ಹರಡುವ ಇಂತಹ ಸುದ್ದಿಗಳು ಹಿರಿಯ ನಾಗರಿಕರಲ್ಲಿ ಅನಗತ್ಯ ಮಾನಸಿಕ ಒತ್ತಡವನ್ನು ಉಂಟುಮಾಡುತ್ತಿವೆ. ಅಷ್ಟೇ ಅಲ್ಲದೆ, ಹಬ್ಬಗಳು, ಆಹಾರ ಪದ್ಧತಿ ಮತ್ತು ಆಚರಣೆಗಳ ಸುತ್ತ ನಕಲಿ ಇತಿಹಾಸ ಅಥವಾ ದ್ವೇಷವನ್ನು ಸೃಷ್ಟಿಸಿ ಸಮಾಜದಲ್ಲಿ ಧ್ರುವೀಕರಣ ಉಂಟುಮಾಡುವ ಪ್ರಯತ್ನಗಳೂ ಲಾಭಕೋರತನದ ಭಾಗವಾಗಿ ನಡೆಯುತ್ತಿವೆ.

1. ಅಂಕಿ-ಅಂಶಗಳು

ಜಾಗತಿಕ ಸಂಶೋಧನೆಗಳ ಪ್ರಕಾರ, ಇಂತಹ ನಕಾರಾತ್ಮಕ ಮಾಹಿತಿಗಳ ಸತತ ಬಳಕೆಯು ಜನರ ಮಾನಸಿಕ ಆರೋಗ್ಯದ ಮೇಲೆ ತೀವ್ರ ಪರಿಣಾಮ ಬೀರುತ್ತಿದೆ.

ಅಮೆರಿಕನ್ ಸೈಕಲಾಜಿಕಲ್ ಅಸೋಸಿಯೇಷನ್ (APA) ನಡೆಸಿದ ಅಧ್ಯಯನದ ಪ್ರಕಾರ, ಶೇಕಡಾ 80 ಕ್ಕೂ ಹೆಚ್ಚು ವಯಸ್ಕರು ಸತತವಾಗಿ ನೆಗೆಟಿವ್ ನ್ಯೂಸ್ ಮತ್ತು ಸಾಮಾಜಿಕ ಜಾಲತಾಣಗಳ ಬಳಕೆಯಿಂದಾಗಿ ತೀವ್ರ ಮಾನಸಿಕ ಒತ್ತಡ ಹಾಗೂ ನಿದ್ದೆಯಿಲ್ಲದ ಸಮಸ್ಯೆಯಿಂದ ಬಳಲುತ್ತಿದ್ದಾರೆ.

? 'ನೇಚರ್ ಹ್ಯೂಮನ್ ಬಿಹೇವಿಯರ್' (Nature Human Behaviour) ಪತ್ರಿಕೆಯಲ್ಲಿ ಪ್ರಕಟವಾದ ಸಂಶೋಧನೆಯೊಂದರ ಪ್ರಕಾರ, ಸಾಮಾಜಿಕ ಜಾಲತಾಣಗಳ ಮುಖ್ಯಾಂಶಗಳಲ್ಲಿ ಬಳಕೆಯಾಗುವ ಪ್ರತಿಯೊಂದು ನಕಾರಾತ್ಮಕ ಪದವೂ ಆ ಪೋಸ್ಟ್ ಮೇಲಿನ ಕ್ಲಿಕ್ ಪ್ರಮಾಣವನ್ನು (Click-through rate) ಶೇಕಡಾ 2.3 ರಷ್ಟು ಹೆಚ್ಚಿಸುತ್ತದೆ.

1. ನಮ್ಮನ್ನು ನಾವು ರಕ್ಷಿಸಿಕೊಳ್ಳುವುದು ಹೇಗೆ? (Practical Digital Hygiene)

ಈ ಡಿಜಿಟಲ್ ವ್ಯೂಹದಿಂದ ಹೊರಬರಲು ನಾವೇ ಸ್ವತಃ ಜಾಗೃತರಾಗಬೇಕು. ಅದಕ್ಕಾಗಿ ಕೆಲವು ಸರಳ ನಿಯಮಗಳನ್ನು ರೂಢಿಸಿಕೊಳ್ಳಬಹುದು:

ಮೂರು ಸೆಕೆಂಡುಗಳ ನಿಯಮ (The 3-Second Rule): ಯಾವುದೇ ಒಂದು ಪೋಸ್ಟ್ ಅಥವಾ ವಿಡಿಯೋ ನಿಮ್ಮಲ್ಲಿ ತೀವ್ರ ಕೋಪ ಅಥವಾ ಆತಂಕ ಉಂಟುಮಾಡುತ್ತಿದ್ದರೆ, ಅಲ್ಲಿ ಕಮೆಂಟ್ ಮಾಡದೆ, ಶೇರ್ ಮಾಡದೆ 3 ಸೆಕೆಂಡುಗಳ ಒಳಗೆ ಮುಂದೆ ಸಾಗಿ (Scroll). ನಿಮ್ಮ ನಿಷ್ಕ್ರಿಯತೆಯೇ ಅಲ್ಗಾರಿದಮ್‌ಗೆ ನೀಡುವ ದೊಡ್ಡ ಪೆಟ್ಟು.

ಮಾಹಿತಿಯ ಮೂಲವನ್ನು ಪರಿಶೀಲಿಸಿ: ಆರೋಗ್ಯ ಅಥವಾ ಆರ್ಥಿಕತೆಗೆ ಸಂಬಂಧಿಸಿದ ಮಾಹಿತಿಗಾಗಿ ಸಾಮಾಜಿಕ ಜಾಲತಾಣಗಳನ್ನು ನೆಚ್ಚಿಕೊಳ್ಳಬೇಡಿ. ಬದಲಿಗೆ ಅಧಿಕೃತ ಸರ್ಕಾರಿ ವೆಬ್‌ಸೈಟ್‌ಗಳು ಅಥವಾ ಪ್ರಮಾಣಿತ ಸುದ್ದಿ ಸಂಸ್ಥೆಗಳನ್ನು ಮಾತ್ರ ಗಮನಿಸಿ.

ನಿಮ್ಮ ಫೀಡ್ ಅನ್ನು ಬದಲಿಸಿ: ಅತಿಯಾದ ರಾಜಕೀಯ, ಅಪರಾಧ ಅಥವಾ ಆರೋಗ್ಯ ಭೀತಿಯ ಪೋಸ್ಟ್‌ಗಳನ್ನು 'Not Interested' ಎಂದು ಮಾರ್ಕ್ ಮಾಡಿ. ಅದರ ಬದಲಿಗೆ ಕಲೆ, ಸಾಹಿತ್ಯ, ಗಿಡ ಬೆಳೆಸುವುದು ಅಥವಾ ಪ್ರಕೃತಿಯಂತಹ ಶಾಂತಿಯುತ ವಿಷಯಗಳನ್ನು ಫಾಲೋ ಮಾಡಿ. ಇಂದಿನ ಡಿಜಿಟಲ್ ಯುಗದಲ್ಲಿ ಯಾವುದೇ ಒಂದು ಮಾಹಿತಿ ನಮ್ಮಲ್ಲಿ ತೀವ್ರ ಆತಂಕವನ್ನು ಉಂಟು ಮಾಡುತ್ತಿದ್ದರೆ, ಅದರ ಹಿಂದೆ ಯಾರದ್ದೋ ಆರ್ಥಿಕ ಅಥವಾ ರಾಜಕೀಯ ಲಾಭ ಅಡಗಿದೆ ಎಂಬುದನ್ನು ನೆನಪಿಡಬೇಕು. ವಾರಕ್ಕೊಮ್ಮೆ ಡಿಜಿಟಲ್ ಉಪವಾಸ (Digital Detox) ಮಾಡುವುದು ನಮ್ಮ ಮಾನಸಿಕ ಆರೋಗ್ಯಕ್ಕೆ ಇಂದಿನ ತುರ್ತು ಅಗತ್ಯವಾಗಿದೆ. ತಂತ್ರಜ್ಞಾನ ನಮ್ಮನ್ನು ಬಳಸಿಕೊಳ್ಳುವ ಮುನ್ನ, ನಾವು ತಂತ್ರಜ್ಞಾನವನ್ನು ಹಿತಮಿತವಾಗಿ ಬಳಸುವುದನ್ನು ಕಲಿಯಬೇಕಿದೆ.



। ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email : Swamynathann@gmail.com

# ಸಂಪತ್ತನ್ನಲ್ಲ, ಸತ್ಯವನ್ನೇ ಬಿಟ್ಟುಹೋದ ಅಲೆಕ್ಸಾಂಡರ್





। ಶಿವಬಸಪ್ಪ
ಗು ಜಂಗಾಲಿ

ಇತಿಹಾಸದಲ್ಲಿ ಕೆಲವರು ತಮ್ಮ ವಿಜಯಗಳಿಂದ ನೆನಪಾಗುತ್ತಾರೆ. ಕೆಲವರು ತಮ್ಮ ಸಾಮ್ರಾಜ್ಯಗಳಿಂದ ಪ್ರಸಿದ್ಧರಾಗುತ್ತಾರೆ. ಆದರೆ ಕೆಲವೇ ಅಪರೂಪದ ವ್ಯಕ್ತಿಗಳು ತಮ್ಮ ಜೀವನದ ಕೊನೆಯ ಕ್ಷಣಗಳಲ್ಲಿ ಹೇಳಿದ ಮಾತುಗಳಿಂದ ಶತಮಾನಗಳವರೆಗೆ ಜನರ ಮನಸ್ಸಿನಲ್ಲಿ ಉಳಿದುಕೊಳ್ಳುತ್ತಾರೆ. ಅಂತಹ ವ್ಯಕ್ತಿಗಳಲ್ಲಿ ಪ್ರಮುಖ ಹೆಸರು ಅಲೆಕ್ಸಾಂಡರ್. ಬಾಲ್ಯದಲ್ಲಿಯೇ ಮಹತ್ವಾಕಾಂಕ್ಷೆಯ ಕನಸು ಕಂಡ, ಅನೇಕ ದೇಶಗಳನ್ನು ಗೆದ್ದು "ವಿಶ್ವವಿಜೇತ" ಎಂಬ ಬಿರುದನ್ನು ಪಡೆದ ಈ ಮಹಾನ್ ರಾಜನ ಅಂತಿಮ ಕ್ಷಣಗಳು, ಅವನ ವಿಜಯಗಳಿಗಿಂತಲೂ ದೊಡ್ಡ ಸಂದೇಶವನ್ನು ಮಾನವಕುಲಕ್ಕೆ ನೀಡಿವೆ.

ಲೋಕವನ್ನು ಗೆಲ್ಲಲು ಹೊರಟ ಮನುಷ್ಯನಿಗೆ ಕೊನೆಯಲ್ಲಿ ಅರಿವಾದದ್ದು ಒಂದೇ ಸತ್ಯ ಜೀವನ ಶಾಶ್ವತವಲ್ಲ. ಅಧಿಕಾರ, ಸಂಪತ್ತು, ಕೀರ್ತಿ, ಸೈನ್ಯ, ಅರಮನೆಗಳು, ವಿಜಯೋತ್ಸವಗಳು? ಇವೆಲ್ಲವೂ ಒಂದು ದಿನ ನಮ್ಮನ್ನು ಬಿಟ್ಟು ಹೋಗುತ್ತವೆ. ಉಳಿಯುವುದು ನಮ್ಮ ಕರ್ಮ, ನಮ್ಮ ಗುಣ ಮತ್ತು ನಾವು ಜನರ ಹೃದಯದಲ್ಲಿ ಬಿತ್ತಿದ ಪ್ರೀತಿ ಮಾತ್ರ.

ಅಲೆಕ್ಸಾಂಡರ್‌ಗೆ ಸಂಬಂಧಿಸಿದಂತೆ ಜನಪ್ರಿಯವಾಗಿ ಹೇಳಲಾಗುವ ಮೂರು ಅಂತಿಮ ಆಶಯಗಳು ಇಂದಿಗೂ ಅನೇಕ ಜನರನ್ನು ಚಿಂತನೆಗೆ ದೂಡುತ್ತವೆ. ಇವುಗಳ ಐತಿಹಾಸಿಕ ನಿಖರತೆ ಬಗ್ಗೆ ಇತಿಹಾಸಕಾರರಲ್ಲಿ ಭಿನ್ನಾಭಿಪ್ರಾಯಗಳಿದ್ದರೂ, ಅವು ಸಾರುವ ಜೀವನ ಸಂದೇಶ ಅತ್ಯಂತ ಮೌಲ್ಯಯುತವಾಗಿದೆ.

ಮೊದಲ ಮಾತು ? ನನ್ನ ಶವಪೆಟ್ಟಿಗೆಯನ್ನು ವೈದ್ಯರೇ ಹೊತ್ತುಕೊಂಡು ಹೋಗಲಿ.

ಈ ಆಶಯದ ಹಿಂದೆ ಅಡಗಿರುವ ಅರ್ಥ ಬಹಳ ಆಳವಾಗಿದೆ. ಜಗತ್ತಿನ ಅತ್ಯುತ್ತಮ ವೈದ್ಯರೂ ಕೊನೆಯಲ್ಲಿ ಸಾವನ್ನು ತಡೆಯಲು ಸಾಧ್ಯವಿಲ್ಲ ಎಂಬ ಸಂದೇಶ ಇದರಲ್ಲಿ ಅಡಗಿದೆ. ವೈದ್ಯರು ಜೀವ ಉಳಿಸಲು ಶ್ರಮಿಸುತ್ತಾರೆ. ಆದರೆ ಪ್ರಕೃತಿಯ ನಿಯಮದ ಮುಂದೆ ಯಾರಿಗೂ ಅಂತಿಮ ಜಯ ಸಾಧ್ಯವಿಲ್ಲ.

ಇಂದು ನಾವು ಆರೋಗ್ಯವನ್ನು ಕಡೆಗಣಿಸಿ ಹಣ ಸಂಪಾದಿಸಲು ಓಡುತ್ತೇವೆ. ನಂತರ ಆ ಹಣವನ್ನೇ ಆರೋಗ್ಯಕ್ಕಾಗಿ ಖರ್ಚು ಮಾಡುತ್ತೇವೆ. ದೇಹದ ಆರೈಕೆ, ಸಮತೋಲನದ ಜೀವನ, ವಿಶ್ರಾಂತಿ ಮತ್ತು ಮಾನಸಿಕ ಶಾಂತಿಯ ಮೌಲ್ಯವನ್ನು ಮರೆಯುತ್ತೇವೆ. ಅಲೆಕ್ಸಾಂಡರ್‌ನ ಮೊದಲ ಸಂದೇಶ ನಮಗೆ ಹೇಳುವುದು ಜೀವನವನ್ನು ಪ್ರೀತಿಸಿ, ದೇಹವನ್ನು ಕಾಪಾಡಿ, ಸಮಯವನ್ನು ಗೌರವಿಸಿ.

ಎರಡನೇ ಮಾತು ? ನಾನು ಸಂಗ್ರಹಿಸಿದ ಸಂಪತ್ತನ್ನು ನನ್ನ ಅಂತಿಮ ಯಾತ್ರೆಯ ದಾರಿಯಲ್ಲಿ ಚೆಲ್ಲಿರಿ.

ಇದು ಮನುಷ್ಯನ ಅತಿಯಾದ ಲೋಭದ ಮೇಲೆ ಬೆಳಕು ಚೆಲ್ಲುವ ಸಂದೇಶ. ಎಷ್ಟೇ ಸಂಪತ್ತು ಗಳಿಸಿದರೂ, ಅದರಲ್ಲಿ ಒಂದು ನಾಣ್ಯವನ್ನೂ ನಮ್ಮೊಂದಿಗೆ ತೆಗೆದುಕೊಂಡು ಹೋಗಲು ಸಾಧ್ಯವಿಲ್ಲ. ಹುಟ್ಟುವಾಗ ಖಾಲಿ ಕೈಯಲ್ಲಿ ಬರುತ್ತೇವೆ. ಹೋಗುವಾಗಲೂ ಖಾಲಿ ಕೈಯಲ್ಲೇ ಹೊರಡುತ್ತೇವೆ.

ಇಂದಿನ ಸಮಾಜದಲ್ಲಿ ಅನೇಕರು ಹಣವನ್ನೇ ಜೀವನದ ಗುರಿಯನ್ನಾಗಿ ಮಾಡಿಕೊಂಡಿದ್ದಾರೆ. ಸಂಬಂಧಗಳಿಗಿಂತ ಬ್ಯಾಂಕ್ ಬ್ಯಾಲೆನ್ಸ್ ದೊಡ್ಡದಾಗಿದೆ. ನೆಮ್ಮದಿಗಿಂತ ಆಸ್ತಿ ಮುಖ್ಯವಾಗಿದೆ. ಸಮಯಕ್ಕಿಂತ ಲಾಭವೇ ಮಹತ್ವ ಪಡೆದಿದೆ. ಆದರೆ ಕೊನೆಯಲ್ಲಿ ಇವೆಲ್ಲವೂ ಇಲ್ಲಿಯೇ ಉಳಿಯುತ್ತವೆ.

ಹಣ ಅಗತ್ಯ. ಆದರೆ ಹಣವೇ ಜೀವನವಲ್ಲ. ಅದು ಬದುಕನ್ನು ಸುಲಭಗೊಳಿಸಬಹುದು; ಸಂತೋಷವನ್ನು ಖರೀದಿಸಲು ಸಾಧ್ಯವಿಲ್ಲ. ದೊಡ್ಡ ಮನೆ ಕಟ್ಟಬಹುದು; ಪ್ರೀತಿಯ ಮನಸ್ಸನ್ನು ಕಟ್ಟಲಾಗದು. ದುಬಾರಿ ಹಾಸಿಗೆ ಖರೀದಿಸಬಹುದು; ನೆಮ್ಮದಿಯ ನಿದ್ರೆಯನ್ನು ಖರೀದಿಸಲು ಸಾಧ್ಯವಿಲ್ಲ. ಮೂರನೇ ಮಾತು ? ನನ್ನ ಎರಡೂ ಕೈಗಳನ್ನು ಶವಪೆಟ್ಟಿಗೆಯ ಹೊರಗೆ ಕಾಣುವಂತೆ ಇರಿಸಿ.

ಇದು ಅತ್ಯಂತ ಪ್ರಭಾವಶಾಲಿಯಾದ ಸಂದೇಶ. ವಿಶ್ವವನ್ನೇ ಗೆದ್ದ ರಾಜನು ಕೂಡ ಕೊನೆಯಲ್ಲಿ ಖಾಲಿ ಕೈಯಲ್ಲೇ ಹೋಗುತ್ತಿದ್ದಾನೆ ಎಂಬ ಸತ್ಯವನ್ನು ಜಗತ್ತಿಗೆ ತೋರಿಸುವ ಸಂಕೇತ ಇದು.

ನಾವು ಜೀವನವಿಡೀ "ನನ್ನದು" ಎಂದು ಹೇಳುತ್ತಲೇ ಇರುತ್ತೇವೆ. ನನ್ನ ಮನೆ, ನನ್ನ ಜಮೀನು, ನನ್ನ ಹಣ, ನನ್ನ ಹುದ್ದೆ, ನನ್ನ ಹೆಸರು? ಆದರೆ ಕೊನೆಯ ಪ್ರಯಾಣದಲ್ಲಿ ಇವೆಲ್ಲವೂ ಹಿಂದೆ ಉಳಿಯುತ್ತವೆ. ನಮ್ಮೊಂದಿಗೆ ಬರುವುದು ಒಳ್ಳೆಯ ಕಾರ್ಯಗಳು ಮತ್ತು ಜನರ ನೆನಪು ಮಾತ್ರ.

ಇಂದಿನ ಮಾನವನ ಬದುಕನ್ನು ನೋಡಿದರೆ, ಅಲೆಕ್ಸಾಂಡರ್‌ನ ಈ ಮೂರು ಸಂದೇಶಗಳನ್ನು ನಾವು ಕೇಳಿದ್ದೇವೆ; ಆದರೆ ಬದುಕಿನಲ್ಲಿ ಅಳವಡಿಸಿಕೊಂಡಿಲ್ಲ. ನಾವು ಇನ್ನೂ ಹುದ್ದೆಗಾಗಿ ಸಂಬಂಧ ಕಳೆದುಕೊಳ್ಳುತ್ತೇವೆ. ಹಣಕ್ಕಾಗಿ ಆರೋಗ್ಯ ಹಾಳುಮಾಡುತ್ತೇವೆ. ಅಹಂಕಾರಕ್ಕಾಗಿ ಸ್ನೇಹವನ್ನು ಮುರಿಯುತ್ತೇವೆ. ಸಮಯಕ್ಕಾಗಿ ಬದುಕುವುದನ್ನು ಮರೆತು, ಬದುಕನ್ನೇ ಸಮಯದ ಹಿಂದೆ ಓಡಿಸುತ್ತೇವೆ.

ಒಂದು ದಿನ ಈ ಲೋಕದಲ್ಲಿ ನಮ್ಮ ಹೆಜ್ಜೆಗಳು ನಿಲ್ಲುತ್ತವೆ. ಆಗ ನಮ್ಮ ಆಸ್ತಿಯನ್ನು ಯಾರೂ ನೆನಪಿಸಿಕೊಳ್ಳುವುದಿಲ್ಲ. ಆದರೆ ನಮ್ಮ ಒಳ್ಳೆಯತನವನ್ನು, ನೆರವಾದ ಕೈಯನ್ನು, ಹಂಚಿದ ಪ್ರೀತಿಯನ್ನು, ನೀಡಿದ ಪ್ರೇರಣೆಯನ್ನು ಜನರು ನೆನಪಿಸಿಕೊಳ್ಳುತ್ತಾರೆ.

ಅಲೆಕ್ಸಾಂಡರ್ ಜಗತ್ತನ್ನು ಗೆದ್ದಿರಬಹುದು. ಆದರೆ ಕೊನೆಯಲ್ಲಿ ಅವನಿಗೆ ಅರಿವಾದ ನಿಜವಾದ ವಿಜಯ ಮಾನವೀಯತೆಯದು. ಮನುಷ್ಯ ಎಷ್ಟು ಎತ್ತರಕ್ಕೆ ಏರಿದರೂ, ಕೊನೆಯಲ್ಲಿ ಪ್ರಕೃತಿಯ ಮುಂದೆ ಎಲ್ಲರೂ ಸಮಾನರು.

ನಾವು ಮಕ್ಕಳಿಗೆ ದೊಡ್ಡ ಸಂಬಳದ ಕನಸು ಕಲಿಸುತ್ತೇವೆ. ಆದರೆ ದೊಡ್ಡ ಮನಸ್ಸಿನ ಮಹತ್ವವನ್ನು ಎಷ್ಟು ಬಾರಿ ಕಲಿಸುತ್ತೇವೆ? ಯಶಸ್ಸಿನ ಹಿಂದೆ ಓಡುವುದನ್ನು ಹೇಳುತ್ತೇವೆ. ಆದರೆ ಯಶಸ್ಸಿನ ಜೊತೆಗೆ ವಿನಯವನ್ನು ಹೇಗೆ ಉಳಿಸಿಕೊಳ್ಳಬೇಕು ಎಂಬುದನ್ನು ಕಲಿಸುತ್ತೇವೆಯೇ? ಸ್ಪರ್ಧೆಯನ್ನು ಕಲಿಸುತ್ತೇವೆ; ಸಹಾನುಭೂತಿಯನ್ನು ಮರೆತುಬಿಡುತ್ತೇವೆ.

ಜೀವನವು ಒಂದು ಯಾತ್ರೆ. ಈ ಯಾತ್ರೆಯಲ್ಲಿ ನಾವು ಗಳಿಸುವ ಆಸ್ತಿ ತಾತ್ಕಾಲಿಕ. ಆದರೆ ನಾವು ಗಳಿಸುವ ವಿಶ್ವಾಸ ಶಾಶ್ವತ. ನಾವು ಕಟ್ಟುವ ಕಟ್ಟಡಗಳು ಒಂದು ದಿನ ಹಳೆಯದಾಗಬಹುದು. ಆದರೆ ನಾವು ಕಟ್ಟಿದ ಸಂಬಂಧಗಳು ತಲೆಮಾರುಗಳವರೆಗೆ ಉಳಿಯಬಹುದು.

ಅಲೆಕ್ಸಾಂಡರ್‌ನ ಮೂರು ಮಾತುಗಳು ಮರಣದ ಬಗ್ಗೆ ಅಲ್ಲ; ಬದುಕನ್ನು ಹೇಗೆ ಬದುಕಬೇಕು ಎಂಬುದರ ಬಗ್ಗೆ. ಪ್ರತಿಯೊಂದು ದಿನವನ್ನು ಅರ್ಥಪೂರ್ಣವಾಗಿಸಿಕೊಳ್ಳಿ. ಆರೋಗ್ಯವನ್ನು ಕಾಪಾಡಿ. ಸಂಪತ್ತನ್ನು ಸಾಧನವಾಗಿ ಬಳಸಿ, ಗುರಿಯನ್ನಾಗಿಸಬೇಡಿ. ಅಹಂಕಾರಕ್ಕಿಂತ ವಿನಯವನ್ನು ಬೆಳೆಸಿಕೊಳ್ಳಿ. ಜನರ ಹೃದಯದಲ್ಲಿ ಸ್ಥಾನ ಪಡೆಯುವಂತಹ ಬದುಕು ಕಟ್ಟಿಕೊಳ್ಳಿ.

ಇಂದು ನಮ್ಮ ಸಮಾಜಕ್ಕೆ ಈ ಸಂದೇಶಗಳು ಅತ್ಯಂತ ಅಗತ್ಯ. ವೇಗವಾಗಿ ಬದಲಾಗುತ್ತಿರುವ ಜಗತ್ತಿನಲ್ಲಿ ಯಶಸ್ಸಿನ ವ್ಯಾಖ್ಯಾನವೂ ಬದಲಾಗಿದೆ. ಆದರೆ ನಿಜವಾದ ಯಶಸ್ಸು ಇನ್ನೂ ಅದೇ ನೆಮ್ಮದಿಯ ಮನಸ್ಸು, ಆರೋಗ್ಯಕರ ದೇಹ, ಪ್ರೀತಿಯ ಕುಟುಂಬ, ವಿಶ್ವಾಸದ ಸ್ನೇಹಿತರು ಮತ್ತು ಮಾನವೀಯತೆಯಿಂದ ತುಂಬಿದ ಬದುಕು. ನಾವು ಎಷ್ಟು ವರ್ಷ ಬದುಕಿದ್ದೇವೆ ಎಂಬುದು ಮುಖ್ಯವಲ್ಲ. ಬದುಕಿದ ವರ್ಷಗಳಲ್ಲಿ ಎಷ್ಟು ಜನರ ಕಣ್ಣೀರು ಒರೆಸಿದ್ದೇವೆ, ಎಷ್ಟು ಮಂದಿಗೆ ಆಶಾಕಿರಣವಾಗಿದ್ದೇವೆ, ಎಷ್ಟು ಮಂದಿಯ ಬದುಕಿಗೆ ಬೆಳಕಾಗಿದ್ದೇವೆ ಎಂಬುದೇ ನಮ್ಮ ಜೀವನದ ನಿಜವಾದ ಅಳತೆ. ಅಲೆಕ್ಸಾಂಡರ್‌ನ ಮೂರು ಮಾತುಗಳು ಕೇವಲ ಇತಿಹಾಸದ ಒಂದು ಪ್ರಸಂಗವಲ್ಲ. ಅವು ಪ್ರತಿಯೊಬ್ಬ ಮನುಷ್ಯನ ಕನ್ನಡಿಯಂತಿವೆ. ಆ ಕನ್ನಡಿಯಲ್ಲಿ ನಮ್ಮ ಜೀವನವನ್ನು ನೋಡಿದರೆ ಅನೇಕ ಪ್ರಶ್ನೆಗಳು ಮೂಡುತ್ತವೆ. ನಾವು ಓಡುತ್ತಿರುವ ದಿಕ್ಕು ಸರಿಯೇ? ನಾವು ಗಳಿಸುತ್ತಿರುವುದು ನಿಜವಾದ ಸಂಪತ್ತೇ? ನಮ್ಮ ಹಿಂದೆ ಉಳಿಯುವುದು ಆಸ್ತಿಯೇ ಅಥವಾ ಒಳ್ಳೆಯ ಹೆಸರೇ? ಈ ಪ್ರಶ್ನೆಗಳಿಗೆ ಪ್ರಾಮಾಣಿಕ ಉತ್ತರ ಹುಡುಕಿದ ದಿನವೇ ಜೀವನದ ನಿಜವಾದ ಅರ್ಥ ನಮಗೆ ತಿಳಿಯುತ್ತದೆ.

ಕೊನೆಯಲ್ಲಿ, ಅಲೆಕ್ಸಾಂಡರ್‌ನ ಮೂರು ಮಾತುಗಳು ಒಂದೇ ಸಂದೇಶವನ್ನು ಸಾರುತ್ತವೆ ಮನುಷ್ಯ ಖಾಲಿ ಕೈಯಲ್ಲಿ ಬರುತ್ತಾನೆ, ಖಾಲಿ ಕೈಯಲ್ಲಿ ಹೋಗುತ್ತಾನೆ. ಮಧ್ಯದಲ್ಲಿ ಸಿಗುವ ಸಮಯವೇ ಅವನ ನಿಜವಾದ ಸಂಪತ್ತು. ಆ ಸಮಯವನ್ನು ಪ್ರೀತಿ, ಕರುಣೆ, ವಿನಯ, ಸೇವೆ ಮತ್ತು ಸತ್ಯದೊಂದಿಗೆ ಬದುಕಿದರೆ ಮಾತ್ರ ಜೀವನಕ್ಕೆ ಅರ್ಥ ಸಿಗುತ್ತದೆ. ಉಳಿದ ಎಲ್ಲವೂ ಕಾಲದೊಂದಿಗೆ ಕರಗಿಹೋಗುತ್ತದೆ; ಆದರೆ ಒಳ್ಳೆಯತನ ಮಾತ್ರ ತಲೆಮಾರುಗಳನ್ನು ದಾಟಿ ಜೀವಂತವಾಗಿರುತ್ತದೆ.

# ಜಿಲ್ಲಾ ಮಟ್ಟದ ತತ್ವಪದ ಗಾಯನ ಕಾರ್ಯಕ್ರಮ

**ಮಂಡ್ಯ:** ಗೊರವಾಲೆ ಶ್ರೀರುದ್ರಪ್ಪ ಅಭಿನಂದನಾ ಸಮಿತಿಯಿಂದ ಜು.20 ರಂದು ಅಭಿನಂದನಾ ಸಮಾರಂಭ ಹಾಗೂ ಜಿಲ್ಲಾ ಮಟ್ಟದ ತತ್ವಪದಕಾರರ ಸಂಗಮ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಸಮಿತಿಯ ಕಾರಸವಾಡಿ ಮಹದೇವ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಒಡನಾಡಿ ಲಯನ್ಸ್ ಸಂಸ್ಥೆ, ಶ್ರೀಹರ್ಷ ಸಮಾಜ ಸೇವಾ ಫೌಂಡೇಶನ್, ಎಲ್ಲರೊಳಗೊಂದಾಗು ಮಂಕುತಿಮ್ಮ ಟ್ರಸ್ಟ್ ಸಹಯೋಗದೊಂದಿಗೆ ಬೆಳಗ್ಗೆ 10ಗಂಟೆಗೆ ನಡೆಯುವ ಉದ್ಘಾಟನಾ ಕಾರ್ಯಕ್ರಮವನ್ನು ಅಂತರಾಷ್ಟ್ರೀಯ ಜಾನಪದ ಗಾಯಕ ಹಾಗೂ ಜನಪದ ಶ್ರೀ ಪರಶಸ್ತಿ ಪುರಸ್ಕೃತ ಡಾ.ಅಪ್ಪಗೆರೆ ತಿಮ್ಮರಾಜು ಉದ್ಘಾಟಿಸುವರು ಎಂದರು.

ಲಯನ್ ಸಂಸ್ಥೆಯ ಮಾಜಿ ಮಲ್ಟಿಪಲ್ ಕೌನ್ಸಿಲ್ ಚೇರ್ಮನ್ ಡಾ.ಕೃಷ್ಣಗೌಡ ಆಶಯ ಭಾಷಣ ಮಾಡುವರು. ಲಯನ್ ಜಿಲ್ಲೆ 317ಜಿಯ 1ನೇ ಉಪ ರಾಜ್ಯಪಾಲ ಸಿದ್ದೇಗೌಡ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಹೊಸಪೇಟೆ ಮತ್ತು ತೋರಣಗಲ್ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಆರ್. ಯೋಗಾನಂದ, ಎಲ್ಲರೊಳಗೊಂದಾಗು ಮಂಕುತಿಮ್ಮ ಟ್ರಸ್ಟ್ ಅಧ್ಯಕ್ಷ ಎಂ.ವಿನಯ್ ಕುಮಾರ್, ಕನ್ನಿಕಾ ಶಿಲ್ಪ ನವೋದಯ ಶಾಲೆಯ ಸಂಸ್ಥಾಪಕಿ ಕುಮಾರಿ ಕನ್ನಿಕಾ, ಬಾಗಲಕೋಟೆ ತೋಟಗಾರಿಕೆ ವಿವಿಯ ವ್ಯವಸ್ಥಾಪನ ಮಂಡಳಿ ಸದಸ್ಯ




ಜೆ.ಮನೋಹರ, ಹಾವೇರಿ ಜಾನಪದ ವಿವಿಯ ಸಿಂಡಿಕೇಟ್ ಸದಸ್ಯ ಜಿ.ಆರ್.ಚಂದ್ರಶೇಖರ್, ಪ್ರಥಮ ದರ್ಜೆ ಗುತ್ತಿಗೆದಾರ ಸಂತೋಷ್ ಗೌಡ, ಕನ್ನಡ ಸೇನೆ ಜಿಲ್ಲಾಧ್ಯಕ್ಷ ಮಂಜುನಾಥ್, ನಗರಸಭೆ ಮಾಜಿ ಸದಸ್ಯ ಶ್ರೀಧರ್ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಉದ್ಘಾಟನಾ ಸಮಾರಂಭದ ನಂತರ ಜಿಲ್ಲೆಯ ವಿವಿಧ ತಾಲೂಕುಗಳಿಂದ ಆಗಮಿಸುವ 27 ತತ್ವ ಪದಗಾರರ ತಂಡಗಳ ಕಲಾವಿದರು ಎರಡು ಗಂಟೆಗಳ ಕಾಲ 27 ಏಕ ತಾರಿ, ದಮ್ಮಡಿ ಮತ್ತು ತಾಳಗಳನ್ನು ನುಡಿಸುವ ಮೂಲಕ ತತ್ವಪದ ಗಾಯನವನ್ನು ಪ್ರಸ್ತುತಪಡಿಸಲಿದ್ದಾರೆ. ಮಧ್ಯಾಹ್ನ 1 ಗಂಟೆಗೆ ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಪಿಠಾಧ್ಯಕ್ಷರಾದ ಪರಮಪೂಜ್ಯ ಜಗದ್ಗುರು ಡಾ.ನಿಶ್ಚಲಾನಂದನಾಥ ಸ್ವಾಮಿಜಿಗಳ ಸಾನಿಧ್ಯದಲ್ಲಿ ಜಿಲ್ಲೆಯ ಹಿರಿಯ ತತ್ವಪದಗಾರರು, ಜಾನಪದ ಅಕಾಡೆಮಿ ಹಾಗೂ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಗುರುವಾಲೆ ರುದ್ರಪ್ಪ ಅವರಿಗೆ ಅಭಿನಂದನಾ ಸಮಾರಂಭ ನಡೆಯಲಿದೆ ಎಂದರು.

# ಸಂತ ನಿರಂಜನ್ ದಾಸ್: ಸೇವೆಯೇ ಧರ್ಮ



। ಡಾ.ಸುಧಾಕರ.ಜಿ.ಲಕ್ಕವಳ್ಳಿ

ಸ್ಫೂರ್ತಿ ಸುಧೆ - 71

ಸಹಕಾರವೇ ಬಾಳಿನ ಆಧಾರ ಎಂಬ ವೇದವಾಕ್ಯಕ್ಕೆ ಕಾನೂನಿನ ಕಸುವು ತುಂಬಿದ ಸಂವಿಧಾನ ಶಿಲ್ಪಿ ಶ್ರೀ ರಾಮ ರೆಡ್ಡಿ ಮಾಮಿಡಿ.2026ರ ಪದ್ಮಶ್ರೀ ಗೌರವಕ್ಕೆ ಭಾಜನರಾದ ಇವರು ಭಾರತದ ಆಧುನಿಕ ಸಹಕಾರಿ ಚಳವಳಿಯ ಪ್ರಮುಖ ರೂವಾರಿ. ಆಂಧ್ರಪ್ರದೇಶ ಪರಸ್ಪರ ನೆರವಿನ ಸಹಕಾರಿ ಸಂಘಗಳ ಕಾಯ್ದೆ, 1995 ಇವರ ದೂರದೃಷ್ಟಿಯ ಹೆಜ್ಜೆಗುರುತು. ಸರ್ಕಾರದ ಕಪಿಮುಷ್ಟಿಯಿಂದ ಸಂಸ್ಥೆಗಳನ್ನು ಮುಕ್ತಗೊಳಿಸಿ, ಸದಸ್ಯರೇ ಮಾಲೀಕರು ಎಂಬ ಸ್ವರಾಜ್ಯದ ಮಂತ್ರಕ್ಕೆ ಕಾನೂನಿನ ಮುದ್ರೆ ಒತ್ತಿದರು.ಕಾನೂನು ರಚಿಸಿ ಕೈತೊಳೆದುಕೊಳ್ಳದೆ, ಅದನ್ನು ನೆಲದ ಮೇಲೆ ನೆಟ್ಟು ಫಲ ನೀಡುವಂತೆ ಮಾಡಿದರು.

ಅದರ ಫಲವಾಗಿ 585 ಉಳಿತಾಯ ಮತ್ತು ಸಾಲ ಸಂಘಗಳು ಹಳ್ಳಿಯ ಮಣ್ಣಲ್ಲಿ ಅರಳಿದವು. ಬಡವರ ಬೆವರಿನ ಚಿಲ್ಲರೆ ಬ್ಯಾಂಕಿನ ಬಂಡವಾಳವಾಯಿತು. ಸಾಹುಕಾರನ ಬಾಗಿಲು ಕಾಯುತ್ತಿದ್ದ ರೈತನ ಕೈಗೆ ಸ್ವಾಭಿಮಾನದ ಪಾಸ್‌ಬುಕ್ ಸೇರಿತು. ಉದ್ಯೋಗಕ್ಕಾಗಿ ಅಲೆದಾಡುವ ಬದಲು ಉದ್ಯಮ ಕಟ್ಟುವ ಧೈರ್ಯಕ್ಕೆ ಇವರ ಬದುಕೇ ಪಾಠವಾಯಿತು. ಕಾನೂನು ಕಾಗದಲ್ಲೇ ಉಳಿಯದೆ ಜನರ ಜೇಬು ತಲುಪಿತು.

ಇವರ ಶ್ರೇಷ್ಠ ಕೊಡುಗೆ ಮುಲುಕನೂರು ಮಾದರಿ. ಭಾರತದ ಮೊದಲ ಸಂಪೂರ್ಣ ಮಹಿಳಾ ಮಾಲೀಕತ್ವದ ಹೈನುಗಾರಿಕೆ ಇಲ್ಲಿಂದಲೇ ಹುಟ್ಟಿತು. ಹಳ್ಳಿ ಹೆಣ್ಣುಮಕ್ಕಳ ಕೈಗೆ ಲೆಕ್ಕದ ಪುಸ್ತಕ, ಲಾಭದ ಚೆಕ್



ನೀಡಿ ಸಬಲೀಕರಣಕ್ಕೆ ಹೊಸ ವ್ಯಾಖ್ಯಾನ ಬರೆದರು. ಇದು ಅನುದಾನದ ಭಿಕ್ಷೆಯಲ್ಲ, ಸ್ವಾವಲಂಬನೆಯ ಸಾಮ್ರಾಜ್ಯ. ಹೆಣ್ಣಿನ ಕೈಗೆ ಆರ್ಥಿಕ ಅಧಿಕಾರ ನೀಡಿ ಗ್ರಾಮೀಣ ಆರ್ಥಿಕತೆಯ ಚಿತ್ರವನ್ನೇ ಬದಲಿಸಿದರು.

ಈ ಪದ್ಮಶ್ರೀ ಕಾನೂನು ಪಂಡಿತನಿಗಲ್ಲ, ಸಾಮಾಜಿಕ ಕ್ರಾಂತಿಯ ಸೂತ್ರಧಾರನಿಗೆ ಸಂದ ನಮನ. ಅವರ ಸಂದೇಶ ಸ್ಪಷ್ಟ: ಕಾನೂನು ಶಿಕ್ಷಿಸುವ ದಂಡವಲ್ಲ, ಸಮುದಾಯ ಕಟ್ಟುವ ಉಳಿ. ಒಂದು ಐಡಿಯಾಗೆ ಕಾನೂನಿನ ಬಲ ತುಂಬಿದರೆ, ಆ ಐಡಿಯಾವೇ ಯುಗವನ್ನು ಬದಲಿಸಬಲ್ಲದು. ರಾಮ ರೆಡ್ಡಿ ಮಾಮಿಡಿ ಅವರ ಬದುಕು ಅದಕ್ಕೆ ಸಾಕ್ಷಿ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,